

# ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2023
ಬೆಲೆ ರೂ. 1



## ‘ಕನ್ನಡ ಕಲಿಯಿರಿ ಕನ್ನಡ ಕಲಿಸಿರಿ’- ಅಮೃತ ಮಹೋತ್ಸವ ಸಮಾರಂಭ ಉದ್ಘಾಟಿಸಿದ ಪ್ರಧಾನಿ ಮೋದಿ ಅವರಿಂದ ಕನ್ನಡಿಗರಿಗೆ ಸ್ಫೂರ್ತಿ ಸಂದೇಶ




ಹೆಮ್ಮೆಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಜೊತೆ ಮಾನ್ಯ ಮುಖ್ಯಮಂತ್ರಿಗಳು, ಪರಮಪೂಜ್ಯರು, ಗಣ್ಯ ಮಾನ್ಯರುಗಳಿಂದ ಶೋಭಾಯಮಾನವಾಗಿರುವ ಅಮೃತ ಮಹೋತ್ಸವ ಸಮಾರಂಭ

# ಅಭಿನಂದನೆ




ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಗೌರವಾಧ್ಯಕ್ಷರಾದ
ಶ್ರೀ ಸಿ.ಟಿ. ರವಿಯವರನ್ನು ಗೌರವಿಸಿದ ಸಂದರ್ಭ




ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಸಂಗೀತ ಕಾರ್ಯಕ್ರಮ ನೀಡಿದ
ವಿಜಯ್ ಪ್ರಕಾಶ್ ದಂಪತಿಗಳನ್ನು ಗೌರವಿಸಿದ ಸಂದರ್ಭ




ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಮಾಜಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಹೊರನಾಡ, ಹೊರದೇಶಗಳ
ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಅಭಿನಂದಿಸಿದ ಸಂದರ್ಭ

ಅಭಿಮತ

ಸಂಪುಟ 33 । ಸಂಚಿಕೆ 6

ಮಾರ್ಚ್ 2023

**ಅಭಿಮತ ಸಂಪಾದಕ ಮಂಡಳ**

ಪ್ರಧಾನ ಸಂಪಾದಕ

ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳ ಸದಸ್ಯರು

ಕೆ.ಎಸ್. ಮೂರ್ತಿ

ಯಲ್ಲಾಲಿಂಗ ಕೊಪ್ಪದ

ತಿಮ್ಮಪ್ಪ ಜಿ.ಆರ್.

**ಡೆ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು

ಸಿ.ಎಂ. ನಾಗರಾಜ

ಉಪಾಧ್ಯಕ್ಷರು

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ

ಆರ್. ರೇಣುಕುಮಾರ್

ಕೋಶಾಧಿಕಾರಿ

ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು

ಬಿ. ನಾರಾಯಣ

ಸುಮಿತಾ ಮುರಗೋಡ

ಸಮಿತಿ ಸದಸ್ಯರು

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜಿ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ

## ಸಂಪಾದಕೀಯ

# ‘ಕರ್ನಾಟಕವನ್ನು ಹೊರತುಪಡಿಸಿ ಭಾರತದ ಅಸ್ಮಿತೆ, ಪರಂಪರೆ ಮತ್ತು ಪ್ರೇರಣೆಗಳ ವ್ಯಾಖ್ಯಾನ ಅಪೂರ್ಣ’

**ಅಭಿಮತದ ಓದುಗ ಬಂಧುಗಳೇ, ತಮಗೆಲ್ಲರಿಗೂ ಯುಗಾದಿ ಹಬ್ಬದ ಶುಭಾಶಯಗಳು.**

ಭಾರತದ ಶ್ರೀಮಂತ ಪರಂಪರೆ, ಸಮೃದ್ಧ ಸಂಸ್ಕೃತಿ ಕಲಾತ್ಮಕ ಪ್ರೇರಣೆಗಳನ್ನು ಅರ್ಥ ಮಾಡಿಕೊಳ್ಳುವಾಗ ಕರ್ನಾಟಕದ ಕೊಡುಗೆಯನ್ನು ಪರಿಗಣನೆಗೆ ತೆಗೆದುಕೊಳ್ಳದಿದ್ದರೆ ಅಂತಹ ವ್ಯಾಖ್ಯಾನ ಅಪೂರ್ಣ ಮತ್ತು ಅಸಮಂಜಸ ಎಂಬ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಮುತ್ತಿನಂತಹ ಮಾತುಗಳು ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಬಗ್ಗೆ ಇಡೀ ದೇಶ ಹಾಗೂ ಜಗತ್ತು ಆಕರ್ಷಣೆಯಿಂದ ನೋಡುವಂತೆ ಮಾಡಿವೆ. ಜೊತೆಗೆ ಕನ್ನಡಿಗರಲ್ಲಿ ಹೊಸ ಆಲೋಚನೆ, ಆತ್ಮ ವಿಶ್ವಾಸ, ಆಶಾಭಾವನೆಗಳನ್ನೂ ಮೂಡಿಸಿವೆ. ಕನ್ನಡ ನಾಡಿನ ಹಿರಿಮೆ ಗರಿಮೆಗಳ ಕುರಿತು ಇಂತಹ ಅದ್ಭುತ ವಿಚಾರಗಳನ್ನು ಉಲ್ಲೇಖಿಸಿರುವ ವಿಶ್ವದ ಅತ್ಯಂತ ಪ್ರಭಾವಶಾಲಿ ನಾಯಕ ಭಾರತ ಮಾತೆಯ ಹೆಮ್ಮೆಯ ಪುತ್ರ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ನಿಜವಾಗಿಯೂ ಪ್ರತಿಯೊಬ್ಬ ಕನ್ನಡಿಗರ ಮನಸ್ಸಿನಲ್ಲಿಯೂ ಅಚ್ಚಳಿಯದ ನೆನಪು ಮೂಡಿಸಿದ್ದರೆಂದರೆ ಅತಿಶಯೋಕ್ತಿಯಲ್ಲ.

ದೆಹಲಿ ಕರ್ನಾಟಕ ಸಂಘದ 75 ವರ್ಷಗಳ ಸಾಧನೆಯನ್ನ ನೆನಪಿಸಿಕೊಳ್ಳುವ ಅಮೃತ ಮಹೋತ್ಸವ ಸಮಾರಂಭವನ್ನು ಫೆ.25 ರಂದು ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ ಅವರ ಒಂದೊಂದು ಮಾತುಗಳು ಕೂಡ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿರುವ ಕನ್ನಡಿಗರಿಗೆ ಮಾತ್ರವಲ್ಲ, ಕರ್ನಾಟಕವೂ ಸೇರಿದಂತೆ ಜಗತ್ತಿನಾದ್ಯಂತ ನೆಲೆಸಿರುವ ಕನ್ನಡ ಕುಲ ಕೋಟಿಗೆ ಭರವಸೆಯ ಆಶಾಕಿರಣವಾಗಿದ್ದವು. ಅನುಭವ ಮಂಟಪದ ಮೂಲಕ ಜಗತ್ತಿಗೆ ಪ್ರಜಾಪ್ರಭುತ್ವದ ಕಲ್ಪನೆಯನ್ನು ಹಾಕಿಕೊಟ್ಟ ಬಸವಣ್ಣನವರ ಆದಿಯಾಗಿ ಕರ್ನಾಟಕದ ಸಾಂಸ್ಕೃತಿಕ ನಾಯಕರುಗಳ ದೊಡ್ಡ ಪಟ್ಟಿಯನ್ನೇ ಉಲ್ಲೇಖಿಸಿದ ಪ್ರಧಾನಿ ಅವರ ಮಾತುಗಳು ಅಕ್ಷರಶಃ ‘ನುಡಿದರೆ ಮುತ್ತಿನ ಹಾರ’ವೇ ಆಗಿದ್ದವು.

ಕರ್ನಾಟಕದ ಕೊಡುಗೆಗಳನ್ನು ಕುರಿತು ಮುಕ್ತ ಕಂಠದಿಂದ ಶ್ಲಾಘಿಸಿದ ಪ್ರಧಾನ ಮಂತ್ರಿ ಅವರು ಕಲಾ ಕ್ಷೇತ್ರದಲ್ಲಿ ಕರ್ನಾಟಕವು ಕಂಸಾಳೆಯಿಂದ ಕರ್ನಾಟಕ ಸಂಗೀತದವರೆಗೆ ಮತ್ತು ಭರತನಾಟ್ಯದಿಂದ ಯಕ್ಷಗಾನದವರೆಗೆ ಶಾಸ್ತ್ರೀಯ ಮತ್ತು ಜನಪ್ರಿಯ ಕಲೆಗಳಲ್ಲಿ ಸಮೃದ್ಧವಾಗಿದೆ, ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ಚಲನಚಿತ್ರಗಳು ಕನ್ನಡೇತರ ಪ್ರೇಕ್ಷಕರಲ್ಲೆ ಹೆಚ್ಚು ಜನಪ್ರಿಯತೆಯನ್ನು ಗಳಿಸಿವೆ ಮತ್ತು ಕರ್ನಾಟಕದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಬಯಕೆಯನ್ನು ಹುಟ್ಟುಹಾಕಿವೆ ಎಂದ ಪ್ರಧಾನಿ ಅವರು ಈ ಕಲಾ ಪ್ರಕಾರಗಳನ್ನು ಜನಪ್ರಿಯಗೊಳಿಸುವ ಕರ್ನಾಟಕ ಸಂಘದ ಪ್ರಯತ್ನಗಳನ್ನು ಮೆಚ್ಚಿ ಇವುಗಳನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ಅಗತ್ಯವನ್ನು ಒತ್ತಿ ಹೇಳಿದರು. ಜೊತೆಗೆ ಕನ್ನಡೇತರ ಕುಟುಂಬಗಳನ್ನು ಇಂತಹ ಕಾರ್ಯಕ್ರಮಗಳಿಗೆ ಕರೆತರುವಂತೆ ದೆಹಲಿ ಕನ್ನಡಿಗರ ಕುಟುಂಬಗಳನ್ನು ಕೋರಿದರು.

ಪ್ರಧಾನಮಂತ್ರಿಯವರು ‘ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ’ವನ್ನು ಪ್ರಪಂಚದಾದ್ಯಂತ ಆಚರಿಸುತ್ತಿರುವುದರ ಬಗ್ಗೆ ಗಮನ ಸೆಳೆದರು ಮತ್ತು ಕರ್ನಾಟಕವು ಭಾರತೀಯ ಸಿರಿಧಾನ್ಯ ಅಂದರೆ ‘ಶ್ರೀ ಧಾನ್ಯ’ದ ಮುಖ್ಯ ಕೇಂದ್ರವಾಗಿದ್ದು ಶ್ರೀ ಅನ್ನ, ರಾಗಿ ಕರ್ನಾಟಕದ ಸಂಸ್ಕೃತಿ ಮತ್ತು ಸಾಮಾಜಿಕ ಅಸ್ಮಿತೆಯ ಒಂದು ಭಾಗವಾಗಿದೆ ಎಂದು ಕನ್ನಡ ನಾಡಿನ ಆಹಾರ ಸಂಸ್ಕೃತಿಯನ್ನು ಮನಸಾರೆ ಬಣ್ಣಿಸಿದ ಪ್ರಧಾನಿ ಅವರು ಇಡೀ ದೇಶವೇ ಕನ್ನಡಿಗರ ಹಾದಿಯಲ್ಲಿ ಸಾಗುತ್ತಿದ್ದು, ಸಿರಿಧಾನ್ಯಗಳನ್ನು ‘ಶ್ರೀ ಅನ್ನ’ ಎಂದು ಕರೆಯಲು ಆರಂಭಿಸಿದೆ ಎಂದು ಮನದುಂಬಿ ವರ್ಣಿಸಿದರು.

ಅಮೃತ ಮಹೋತ್ಸವ ಸಮಾರಂಭದ ಇನ್ನೊಂದು ಪ್ರಮುಖ ಆಕರ್ಷಣೆ ಎಂದರೆ ಕನ್ನಡ ಚಿತ್ರರಂಗದ ಪ್ರಖ್ಯಾತ ಗಾಯಕ. ‘ಜೈಹೋ’ ಗೀತೆಯ ಮುಖಾಂತರ ಭಾರತದಾದ್ಯಂತ ಜನಪ್ರಿಯರಾಗಿರುವ ಶ್ರೀ ವಿಜಯ ಪ್ರಕಾಶ್ ಮತ್ತು ತಂಡದವರಿಂದ ಸಂಗೀತ ರಸಸಂಜೆ ಕಾರ್ಯಕ್ರಮ. ಫೆಬ್ರವರಿ 26 ರ ಭಾನುವಾರ ಸಂಜೆ ತಾಲ್ಕಟೋರ ಒಳಾಂಗಣ ಸಭಾಗೃಹದಲ್ಲಿ ಕಿಕ್ಕಿರಿದು ತುಂಬಿದ್ದ ಸಂಗೀತ ರಸಿಕರು, ಅಭಿಮಾನಿಗಳು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರಂಭದಲ್ಲಿ ಹೊಸ ದಾಖಲೆಗೆ ಕಾರಣರಾದರು. ಪ್ರಸಿದ್ಧ ಗಾಯಕ ವಿಜಯ ಪ್ರಕಾಶ್ ಅವರು ಕನ್ನಡದ ಸುಪ್ರಸಿದ್ಧ ಚಿತ್ರ ಗೀತೆಗಳನ್ನು ನಾಡಿನ ಖ್ಯಾತ ಕವಿ ಡಾ. ದೊಡ್ಡರಂಗೇಗೌಡರು ಮತ್ತು ಖ್ಯಾತ ನಿರ್ದೇಶಕ ಶ್ರೀ ಟಿ.ಎಸ್. ನಾಗಾಭರಣ ಅವರ ಸಮ್ಮುಖದಲ್ಲಿ ಹಾಡಿದ್ದು ನಿಜಕ್ಕೂ ನೆರೆದಿದ್ದ ಕನ್ನಡಾಭಿಮನಿಗಳ ಮನಸೂರೆಗೊಂಡಿತು.

ದೆಹಲಿ ಕರ್ನಾಟಕ ಸಂಘದ ಇಂತಹ ಒಂದು ಅವಿಸ್ಮರಣೀಯ ಮತ್ತು ರೋಮಾಚನಕಾರಿ ಸಂದರ್ಭ ಅಮೃತ ಮಹೋತ್ಸವ ಸಮಾರಂಭ. 75 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಆಯೋಜನೆ ಮಾಡಿದ ಈ ಕಾರ್ಯಕ್ರಮದ ರೂಪುರೇಷೆ, ಕಲಾ ತಂಡಗಳ ಆಯ್ಕೆ, ದೇಣಿಗೆ ಸಂಗ್ರಹ, ಕಾರ್ಯಕ್ರಮಕ್ಕೆ, ಅತಿಥಿ ಗಣ್ಯರ ಮತ್ತು ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಆಹ್ವಾನಿಸುವುದು ಸೇರಿದಂತೆ ಎರಡು ದಿನಗಳ ಇಡೀ ಕಾರ್ಯಕ್ರಮಗಳು ಹೇಗಿರಬೇಕೆಂಬುದರ ಕುರಿತು ತಮ್ಮದೇ ಆದ ಪರಿಕಲ್ಪನೆಯನ್ನು ಇಟ್ಟುಕೊಂಡು ಅದನ್ನು ಸಾಕಾರಗೊಳಿಸಲು ವರ್ಷವಿಡೀ ಹಗಲಿರುಳು ಶ್ರಮಿಸಿದ ದೆಹಲಿ ಕರ್ನಾಟಕ ಸಂಘದ ಅತ್ಯಂತ ಕ್ರಿಯಾಶೀಲ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮದ ಯಶಸ್ಸಿನ ಸೂತ್ರಧಾರಿಯಾಗಿದ್ದು ನಿಜಕ್ಕೂ ಅಭಿನಂದನಾರ್ಹರಾಗಿದ್ದಾರೆ. ಅವರ ಆಲೋಚನೆ ಮತ್ತು ಯೋಜನೆಯನ್ನು ಅನುಷ್ಠಾನಗೊಳಿಸಲು ಕೈಜೋಡಿಸಿದ ಕಾರ್ಯಕಾರಿ ಸಮಿತಿ ಮುಖ್ಯವಾಗಿ, ಪ್ರಧಾನ ಕಾರ್ಯದರ್ಶಿಗಳು, ವಿವಿಧ ಉಪ ಸಮಿತಿಗಳ ಉಸ್ತುವಾರಿಯನ್ನು ನಿರ್ವಹಿಸಿದ ಎಲ್ಲ ಪದಾಧಿಕಾರಿಗಳು, ಸದಸ್ಯರುಗಳ ಅಹರ್ನಿಶಿ ಪರಿಶ್ರಮ ಹಾಗೂ ಪ್ರಯತ್ನಗಳಿಂದ ಅಮೃತ ಮಹೋತ್ಸವ ಸಮಾರಂಭದಂತಹ ಐತಿಹಾಸಿಕ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದ್ದು ಸಂಘದ ಇತಿಹಾಸದಲ್ಲಿಯೇ ಹೊಸ ಅಧ್ಯಾಯವನ್ನು ತೆರೆದಿದೆ.

ಅಮೃತ ಮಹೋತ್ಸವ ಹೆಸರಿನಲ್ಲಿಯೇ ‘ಹಬ್ಬ’ ಅರ್ಥ ಅಡಗಿದೆ. ಹೌದು 75 ವರ್ಷಗಳ ಚರಿತ್ರೆಯನ್ನು ನೆನಪಿಸುವ ಈ ಸಂಭ್ರಮ ನಿಜವಾಗಿಯೂ ರಾಷ್ಟ್ರ ರಾಜಧಾನಿ ಪ್ರದೇಶದ ಎಲ್ಲ ಕನ್ನಡ ಕುಟುಂಬಗಳು ಹಾಗೂ ಕನ್ನಡಿಗರಿಗೂ ಸಡಗರ ಸಂಭ್ರಮದ ಹಬ್ಬವೇ ಸರಿ. ಫೆಬ್ರವರಿ 25 ರ ಬೆಳಿಗ್ಗೆಯಿದ 26 ರ ರಾತ್ರಿಯವರೆಗೆ ದೆಹಲಿಯ ಪ್ರತಿಷ್ಠಿತ ತಾಲ್ಕಟೋರ ಒಳಾಂಗಣ ಸಭಾಗೃಹದ ತುಂಬಾ ಕನ್ನಡದ ಕಲರವ, ಕನ್ನಡಿಗರ ಮುಖ್ಯವಾಗಿ, ಮಹಿಳೆಯರ, ಮಕ್ಕಳ, ಹಿರಿಯರ ಉತ್ಸಾಹ, ಹುರುಪು, ಹುಮ್ಮಸ್ಸು ಎಲ್ಲವನ್ನು ನೋಡುವುದೇ ಒಂದು ಆಕರ್ಷಣೆಯಾಗಿತ್ತು.

ಇಂತಹ ಅವಿಸ್ಮರಣೀಯ ಮತ್ತು ಐತಿಹಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮಿಸಿದ ದೆಹಲಿ ಕರ್ನಾಟಕ ಸಂಘದ ಎಲ್ಲ ಆಜೀವ ಸದಸ್ಯರುಗಳಿಗೂ, ರಾಷ್ಟ್ರ ರಾಜಧಾನಿಯ ಎಲ್ಲ ಕನ್ನಡಿಗರುಗಳಿಗೂ ದೇಶ ವಿದೇಶಗಳಿಂದ ಬಂದು ಎರಡು ದಿನಗಳ ಕಾಲ ದೆಹಲಿ ಕನ್ನಡಿಗರ ಜೊತೆ ಇದ್ದು ಅಮೃತ ಮಹೋತ್ಸವ ಸಮಾರಂಭದ ಸಡಗರಕ್ಕೆ ಕಾರಣರಾದ ಎಲ್ಲ ಕನ್ನಡ ಕುಲ ಕೋಟಿಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೊ ಅಭಿಮತ ಓದುಗ ಬಳಗದ ಪರವಾಗಿ ಕೋಟಿ ಕೋಟಿ ಪ್ರಣಾಮಗಳನ್ನು ಅರ್ಪಿಸುತ್ತಾ ಅಮೃತ ಮಹೋತ್ಸವ ಸಮಾರಂಭದ ಮಾಹಿತಿಗಳನ್ನು ಒಳಗೊಂಡ ಅಭಿಮತದ ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 33 ಸಂಚಿಕೆ 6
ಮಾರ್ಚ್ 2023, ಬೆಲೆ ರೂ. 1

## ಅಧ್ಯಕ್ಷರ ನುಡಿ



ಆತ್ಮೀಯ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ನಮ್ಮ ನೆಚ್ಚಿನ ಮಾನ್ಯ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರು ಬಂದು ಕಾರ್ಯಕ್ರಮವನ್ನು ಉದ್ಘಾಟಿಸಿ ನಾಡಿನ ಅನೇಕ ಪರಮ ಪೂಜ್ಯರ ದಿವ್ಯ ಸಾನಿಧ್ಯದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಶ್ರೀ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಶ್ರೀ ಪ್ರಹ್ಲಾದ್ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಮತ್ತು ಗೌರವ ಅಧ್ಯಕ್ಷ ಶ್ರೀ ಸಿ.ಟಿ. ರವಿಯವರ ಉಪಸ್ಥಿತಿಯಲ್ಲಿ, ಇನ್ನು ರಾಜ್ಯದ ಅನೇಕ ಕವಿಗಳು, ಸಾಹಿತಿಗಳು, ಸಂಸದರು ಶಾಸಕರು, ಗಣ್ಯಾತಿ ಗಣ್ಯರು ಸಾವಿರಾರು ಕಲಾವಿದರು, ಕನ್ನಡಿಗರೊಂದಿಗೆ ಎರಡು ದಿನಗಳ ಕಾರ್ಯಕ್ರಮ ಐತಿಹಾಸಿಕ ಕಾರ್ಯಕ್ರಮವಾಗಿದೆ. ದೇಶದ ಹೆಮ್ಮೆಯ ಪ್ರಧಾನಮಂತ್ರಿಗಳು ಸಾಕ್ಷಿಯಾದ ಈ ಅವಿಸ್ಮರಣೀಯ ಕಾರ್ಯಕ್ರಮವನ್ನು ವೀಕ್ಷಿಸಿದ ವಿಶ್ವದ ಕೋಟ್ಯಾಂತರ ಕನ್ನಡಿಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬೆರಳೆಣಿಕೆಯಷ್ಟು ಜನ ದುಃಖವನ್ನು ಸಹಪಟ್ಟಿದ್ದಾರೆ. ಭಗವಂತ ಅವರಿಗೆ ದುಃಖ ಭರಿಸುವ ಶಕ್ತಿ ನೀಡಲಿ ಎರಡು ದಿನ ಕಾರ್ಯಕ್ರಮಗಳಲ್ಲಿ ತಾಲ್ಕಟೋರ ಸಭಾಂಗಣ ತುಂಬಿ ತುಳುಕಿತ್ತು. ದೆಹಲಿ ಮತ್ತು ಎನ್.ಸಿ.ಆರ್. ನ ಕನ್ನಡಿಗರು, ರಾಜ್ಯದ, ರಾಷ್ಟ್ರದ ಮತ್ತು ವಿಶ್ವದ ಮೂಲೆ ಮೂಲೆಗಳಿಂದ ಅನೇಕ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಐತಿಹಾಸಿಕ ಕಾರ್ಯಕ್ರಮಕ್ಕೆ ಬಂದು ಖುಷಿಪಟ್ಟಿದ್ದಾರೆ. ಇದು ಸಮಸ್ತ ಕನ್ನಡಿಗರಿಗೆ ಸಂದ ಗೌರವವಾಗಿದೆ.

ಕನ್ನಡ ಬಂಧುಗಳೇ, ಈ ಅಭಿಮತ ವಿಶೇಷ ಸಂಚಿಕೆ ದೆಹಲಿ ಕರ್ನಾಟಕ ಸಂಘಕ್ಕೆ ಆಯ್ಕೆಯಾಗಿ ಬಂದಂತ ಈ ನಮ್ಮ ಕಾರ್ಯಕಾರಿ ಸಮಿತಿಯೊಂದಿಗೆ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಕಾರ್ಯಕ್ರಮಗಳನ್ನ ಸತತವಾಗಿ ನೀಡುತ್ತಾ ದೆಹಲಿ ಕರ್ನಾಟಕ ಸಂಘಕ್ಕೆ ಕಿಂಚಷ್ಟು ಹೊರೆಯಾಗದಂತೆ 1250 ಕಲಾವಿದರನ್ನು ಕರ್ನಾಟಕದ ಮೂಲೆ ಮೂಲೆಯಿಂದ ಕರೆತಂದು ಅವರಿಗೆ ವೇದಿಕೆ ಅವಕಾಶ ಮಾಡಿಕೊಟ್ಟು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ಜಿಲ್ಲೆಗಳ ಕಲಾ ಪ್ರಕಾರಗಳನ್ನು ದೆಹಲಿ ಕನ್ನಡಿಗರಿಗೆ ಪೂರ್ತಿ ವರ್ಷ ಉಣ ಬಡಿಸುವಲ್ಲಿ ಯಶಸ್ವಿಯಾಗಿದ್ದೇವೆ.

ಹಿರಿಯರು ಕಟ್ಟಿದ ಈ ದೆಹಲಿ ಕರ್ನಾಟಕ ಸಂಘದ 75ನೇ ವರ್ಷದ ಅಮೃತ ಮಹೋತ್ಸವದಲ್ಲಿ ಮತ್ತೊಂದು ಏನಾದರೂ ಹೊಸ ದಾಖಲೆ ಮಾಡಬೇಕೆಂಬುದು ನನ್ನ ಕನಸಾಗಿತ್ತು. ಅಧ್ಯಕ್ಷನಾಗಿ ಬಂದ ಸಂದರ್ಭದಲ್ಲಿ ತಾವು ನೀಡಿದ ಜವಾಬ್ದಾರಿಯನ್ನ ಗೌರವದಿಂದ ಸ್ವೀಕರಿಸಿದ ನನಗೆ ಇನ್ನೂ ಹೆಚ್ಚಿಗೆ ಕೆಲಸ ಮಾಡಬೇಕು ಅತಿ ಹೆಚ್ಚು ಸಮಯ ದೆಹಲಿ ಕರ್ನಾಟಕ ಸಂಘಕ್ಕೆ ನೀಡಿ ಸಂಘವನ್ನ ವಿಶ್ವದ ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗಬೇಕೆನ್ನುವುದು ನನ್ನ ಆದ್ಯತೆಯಾಗಿತ್ತು. ಈ ಅಮೃತ ಮಹೋತ್ಸವದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳನ್ನ ಕರೆಸಿ ಈ ಸಮಾರೋಪ ಸಮಾರಂಭದ ಉದ್ಘಾಟನೆ ಮಾಡಿಸುವ ಕನಸನ್ನು ನಾನು ಸದಾ ಕಾಣುತ್ತಿದ್ದೆ. ಕೆಲವರು ಈ ಕನಸು ಕಾಣುವುದೇ ಸರಿ ಇಲ್ಲ ಇದು ಆಗದ ಕೆಲಸ ಎಂದು ಕಾಲುಎಳೆಯುವ ಸಂದರ್ಭದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ದೆಹಲಿ ಕರ್ನಾಟಕ ಸಂಘಕ್ಕೆ ಆರ್ಥಿಕವಾಗಿ ಹೊರೆಯಾಗದೆ ಸಂಘವನ್ನ ಬಲಿಷ್ಠಗೊಳಿಸುತ್ತಾ ಹಿರಿಯರ ಆಶೀರ್ವಾದದಿಂದ ಈ ಅಮೃತ ಮಹೋತ್ಸವ ಕಾರ್ಯಕ್ರಮ ಐತಿಹಾಸಿಕ ದಾಖಲೆ ಮಾಡಬೇಕೆಂಬುದು ನನ್ನ ಪ್ರಾಥಮಿಕ ಧ್ಯೇಯವಾಗಿತ್ತು. ಮಾನ್ಯ ಪ್ರಧಾನ ಮಂತ್ರಿಗಳನ್ನ ಆಹ್ವಾನಿಸಿ ಆ ಸಂದರ್ಭದಲ್ಲಿ 1,000ಕ್ಕೂ ಹೆಚ್ಚು ಕಲಾವಿದರನ್ನು ದೆಹಲಿಗೆ ಕರೆತರೆಸಿ ನಮ್ಮ ಕರ್ನಾಟಕ ಸಂಘವನ್ನು ವಿಶ್ವದ ಎಲ್ಲಾ ಸಂಘ ಸಂಸ್ಥೆಗಳಿಗೆ ಮಾದರಿಯಾಗಿ ಅವರೆಲ್ಲರ ರಾಯಭಾರಿಯಾಗಿ ಮಾಡಬೇಕೆಂದು ಹೊರಟೆ. ನಿಮ್ಮೆಲ್ಲರ ಆಶೀರ್ವಾದದಿಂದ ಅದು ಯಶಸ್ವಿಯಾಗಿದೆ. ಮಾನ್ಯ ಪ್ರಧಾನಮಂತ್ರಿಗಳು ಬಂದು ದೆಹಲಿ ಕರ್ನಾಟಕ ಸಂಘಕ್ಕೆ ಅತಿ ಹೆಚ್ಚು ಸಮಯ ಎರಡು ಗಂಟೆ 5 ನಿಮಿಷ ನೀಡಿ ನಮ್ಮೊಂದಿಗೆ ಭಾಗಿಯಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿ ದೆಹಲಿ ಕರ್ನಾಟಕ ಸಂಘವನ್ನು ಮತ್ತು ಕನ್ನಡವನ್ನು, ಕನ್ನಡಿಗರನ್ನು ಹಾಡಿಹೊಗಳಿದ್ದಾರೆ. ದೇಶದ ಒಬ್ಬರು ಪ್ರಧಾನಮಂತ್ರಿಗಳು ಈ ಕಾರ್ಯಕ್ರಮಕ್ಕೆ ಬರುವುದು ಸಾಮಾನ್ಯದ ವಿಷಯ ವಾಗಿರಲಿಲ್ಲ ಅದನ್ನ ನನಸು ಮಾಡುವಲ್ಲಿ ಯಶಸ್ವಿಯಾಗಿದ್ದೇವೆ. ರಾಷ್ಟ್ರದ ಮೂಲೆ ಮೂಲೆಗಳಲ್ಲೂ ಈ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಕನ್ನಡಿಗರು ಖುಷಿಪಟ್ಟಿದ್ದಾರೆ. ಕೆಲವು ಸ್ವಾರ್ಥಿಗಳು ಸಂಘದ ಏಳಿಗೆಯನ್ನು ಕಾರ್ಯಕ್ರಮದ ಯಶಸ್ಸನ್ನು ಸಹಿಸದೆ ದುಃಖವನ್ನು ಪಟ್ಟಿದ್ದಾರೆ. ಆದರೆ ಹೆಚ್ಚಿನ ಕನ್ನಡಿಗರು ನಮ್ಮ ಜೊತೆ ನಿಂತು ಸಹಕಾರ ನೀಡಿ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿನಲ್ಲಿ ಭಾಗಿಯಾಗಿದ್ದಾರೆ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘ ಎಲ್ಲರಿಗೂ ಅವಕಾಶ ಕೊಟ್ಟಿದೆ. ಕೆಲವು ಹಿರಿಯರಿಗೆ ಎರಡು ಎರಡು ಬಾರಿ ಅಧ್ಯಕ್ಷರನ್ನಾಗಿ ಪದ ಗ್ರಹಿಸಲು ಸಹಕರಿಸಿ ನಾವೆಲ್ಲ ಅವರ ಜೊತೆ ದುಡಿದೆವು. ಆದರೆ ಈಗ ನಾವು ಇಷ್ಟೊಂದು ಒಳ್ಳೆಯ ಕೆಲಸ ಮಾಡುವ ಸಂದರ್ಭದಲ್ಲಿ ನಮ್ಮ ಜೊತೆ ನಿಂತು ನಮಗೆ ಮಾರ್ಗದರ್ಶನ ಮಾಡುವುದರ ಬದಲು, ಯಶಸ್ಸಿನಲ್ಲಿ ಭಾಗಿಯಾಗಿ ಹೆಮ್ಮೆ ಪಡುವುದರ ಬದಲು ನಮ್ಮ ಕಾಲೆಳೆಯುವ ಪ್ರವೃತ್ತಿಯ ದಾರಿಯನ್ನು ಹಿಡಿದ ಕೆಲ ಮಾಜಿ ಅಧ್ಯಕ್ಷರ ನಡೆಯನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ವಿಷಾದದಿಂದ ಖಂಡಿಸುತ್ತೇನೆ. ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವನ್ನು ಬಹಿಷ್ಕಾರ ಮಾಡಿರುವುದು ಸಂಘಕ್ಕೆ, ಸಮಸ್ತ ದೆಹಲಿ ಕನ್ನಡಿಗರಿಗೆ ಅವಮಾನ ಮಾಡಿದಂತೆ, ದೇಶದ ಗೌರವಾನ್ವಿತ ಪ್ರಧಾನ ಮಂತ್ರಿಗಳು ನಮ್ಮ ಆಹ್ವಾನ ಸ್ವೀಕರಿಸಿ ಕಾರ್ಯಕ್ರಮಕ್ಕೆ ಬರುವ ಸಂದರ್ಭದಲ್ಲಿ ಇದು ದೊಡ್ಡತನವಲ್ಲ. ದಡ್ಡತನವೆನ್ನಬಹುದು. ಯಾವುದೇ ಪಕ್ಷಭೇದವಿಲ್ಲದೆ ದೆಹಲಿ ಕರ್ನಾಟಕ ಸಂಘವು ಕಾರ್ಯಕ್ರಮ ಮಾಡುತ್ತಿದೆ ಎಂದು ನಾನು ಪ್ರತಿ ಬಾರಿ ತಿಳಿಸಿದ್ದೇನೆ. ಎಷ್ಟೋ ಬಾರಿ ಮಾನ್ಯ ಶ್ರೀ ಸಿದ್ದರಾಮಯ್ಯನವರು ಆಗಿರಬಹುದು ಶ್ರೀ ವೀರಪ್ಪ ಮೊಯಿಲಿ ರವರಾಗಿರಬಹುದು, ಶ್ರೀ ಆಸ್ಕರ್ ಫರ್ನಾಂಡಿಸ್ ಆಗಿರಬಹುದು ಇನ್ನೂ ಅನೇಕ ಕಾಂಗ್ರೆಸ್ ನಾಯಕರ ಜೊತೆ ನಮ್ಮ ಸಂಘವು ಕೆಲಸ ಮಾಡಿದೆ. ಈ ಸಂದರ್ಭದಲ್ಲಿ ಯಾವುದೇ ಒಂದು ಪಕ್ಷ ಅಥವಾ ಯಾವುದೇ ಒಂದು ಧರ್ಮವನ್ನು ನೋಡದೆ ದೆಹಲಿ ಕರ್ನಾಟಕ ಸಂಘದ ಒಂದು ದೊಡ್ಡಮಟ್ಟದ ಕಾರ್ಯಕ್ರಮವನ್ನು ದೇಶದ ಮಾನ್ಯ ಪ್ರಧಾನ ಮಂತ್ರಿಗಳಿಂದ ಉದ್ಘಾಟನೆ ಮಾಡಿಸಬೇಕೆಂಬುದು ನಮ್ಮೆಲ್ಲರ ಕನಸಾಗಿತ್ತು. ರಾಜಕೀಯವಾಗಿ ಬೆಳೆಬೇಯಿಸಿ ಕೊಳ್ಳಬೇಕಾಗುತ್ತದೆ ಅಂತಲ್ಲ. ಸಂಘದ ಮಾಜಿ ಅಧ್ಯಕ್ಷರೊಬ್ಬರು ಅವರು ಕೆಲಸ ಮಾಡುವ ಸಂಸ್ಥೆಯ ಮುಖ್ಯಸ್ಥನ ಹೆಂಡತಿಯ ಹೆಸರಲ್ಲಿ ಲಕ್ಷಾಂತರ ರೂಪಾಯಿ ತೆಗೆದುಕೊಂಡು ತಮ್ಮ ಊರಿನಲ್ಲಿ ಹೋಗಿ ಅವರ ಕುಟುಂಬದ ಹೆಸರಿನಲ್ಲಿ ಟ್ರಸ್ಟ್ ಮಾಡಿ ಇರೋದು ಮರೆತಿದ್ದಾರೆ ಈಗ ಸತ್ಯ ಹರಿಶ್ಚಂದ್ರನ ಮುಖವಾಡ ಧರಿಸಿ ಆಟ ಆಡುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘ ಪ್ರಸ್ತುತ ಕಾರ್ಯಕಾರಿ ಸಮಿತಿಯು ಇಂತಹ ಯಾವುದೇ ಕೆಲಸವನ್ನೂ ಈ ರೀತಿನಲ್ಲಿ ಮಾಡಿಲ್ಲ. ಅವರ ಕಾರ್ಯಅವಧಿ ಸಂದರ್ಭದಲ್ಲಿ ಅವರು ಏನು ಮಾಡಿದ್ದಾರೆಂದು ಸ್ವತಃ ಅವರೇ ಅರ್ಥಮಾಡಿಕೊಳ್ಳಲಿ. ದೆಹಲಿ ಕರ್ನಾಟಕ ಸಂಘದ ಹೆಸರಿನಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ, ಧಕ್ಕೆ ಆಗುವ ರೀತಿನಲ್ಲಿ, ಸಂಘದ ಹೆಸರಿಗೆ ಚ್ಯುತಿ ಬರುವ ರೀತಿಯಲ್ಲಿ ಇಲ್ಲ ಸಲ್ಲದ ಆರೋಪ ಮಾಡಿ ಮಸಿ ಬಳಿಯುವ ರೀತಿಯಲ್ಲಿ ಯಾರೇ ಆದರೂ ನಡೆದುಕೊಂಡಲ್ಲಿ ಅವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಇದು ಏಕೆ ಈ ಸಂದರ್ಭದಲ್ಲಿ ಬರೆಯುತ್ತಿದ್ದೇನೆ ಎಂದರೆ ಈ ಕಾರ್ಯಕ್ರಮಕ್ಕೆ ತುಂಬಾ ತೊಂದರೆ ಕೊಡಲು ಮುಂದಾಗಿದ್ದ ಒಬ್ಬ ಸ್ವಾರ್ಥಿ ಮಹಾಶಯರೊಬ್ಬರಿಗೆ ಈಗಾಗಲೇ ಕಾರಣ ಕೇಳಿ ನೋಟಿಸ್ ಅನ್ನು ಸಹ ಕಾರ್ಯಕಾರಿ ಸಮಿತಿಯ ಒಪ್ಪಿಗೆಯಂತೆ ನೀಡಲಾಗಿದೆ.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದಂತೆ ಮುಂದಿನ 25 ವರ್ಷಗಳು ತುಂಬಾ

## ಮುನ್ನೋಟ

ಆತ್ಮೀಯ ದೆಹಲಿ ಕನ್ನಡಿಗರೇ,

ಸಂಘದ ಅಮೃತ ಮಹೋತ್ಸವಾಚರಣೆ ಸಂಭ್ರಮ ಮುಗಿದಿದೆ. ಈ ಬಾರಿಯ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳು ಫೆಬ್ರವರಿ ತಿಂಗಳಿನಲ್ಲಿಯೇ ಪ್ರಾರಂಭ ಆದಾಗ್ಯೂ, ನಮ್ಮ ಅಮೃತ ಮಹೋತ್ಸವ ಕಾರ್ಯಕ್ರಮದ ಸಫಲ ಆಯೋಜನೆಯಲ್ಲಿ ಬಹುಮುಖ್ಯ ಪಾತ್ರವಹಿಸಿದ ದೆಹಲಿ ಕನ್ನಡಿಗರಿಗೆ ಅನಂತಾನಂತ ವಂದನೆಗಳು.

ಅಮೃತ ಮಹೋತ್ಸವ ವರ್ಷದ ಸಂಘದ ಒಂದು ವರ್ಷದ ಚಟುವಟಿಕೆಗಳ ಪುನರಾವಲೋಕನ, ಸಮಾರೋಪ ಕಾರ್ಯಕ್ರಮದ ಲೆಕ್ಕಪತ್ರಗಳ ಬಗ್ಗೆ ಕಾರ್ಯಕಾರಿ ಸಮಿತಿಯ ಜವಾಬ್ದಾರಿ ಇದೆ. ಇವೆಲ್ಲದರ ನಡುವೆ ಸಂಘದ ಚಟುವಟಿಕೆಗಳು ಮುಂದುವರೆಯಬೇಕಿದೆ. ಅದರಂತೆ, ಮಾರ್ಚ್ 26 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ನಂತರ ವಾರ್ಷಿಕ ಕ್ರಿಕೆಟ್ ಟೂರ್ನಮೆಂಟ್ ಆಯೋಜನೆಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಸದ್ಯ ನಡೆಯುತ್ತಿರುವ ಪರೀಕ್ಷೆಗಳಲ್ಲಿ ಕನ್ನಡ ಮಕ್ಕಳು ಒಳ್ಳೆಯ ಫಲಿತಾಂಶ ತರಲಿ, ತನ್ಮೂಲಕ ತನ್ನ ತಂದೆ ತಾಯಿಯಂದಿರಿಗೆ ಕೀರ್ತಿ ತರಲೆಂದು ಹಾರೈಸುತ್ತೇನೆ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

ಮಹತ್ತರವಾದ ವರ್ಷಗಳಾಗಿವೆ. ಈ ಸಂದರ್ಭದಲ್ಲಿ ನಾವು ದೆಹಲಿ ಕರ್ನಾಟಕ ಸಂಘವನ್ನು ಇನ್ನೂ ಎತ್ತರಕ್ಕೆ ಬೆಳೆಸುವಲ್ಲಿ ಯಶಸ್ವಿ ಮಾಡುವಲ್ಲಿ ಕಾರ್ಯ ಪ್ರವೃತ್ತರಾಗೋಣ. ಅವರ ಕಿವಿಮಾತಿನಂತೆ ಕಲಿಕೆ ಮತ್ತು ಕಲೆಯನ್ನು ಬೆಳೆಸುವ, ಸಂಘವನ್ನು ಸಾಂಸ್ಕೃತಿಕವಾಗಿ ದೃಢಗೊಳಿಸುವ ನಿಟ್ಟಿನಲ್ಲಿ ಮುನ್ನಡೆಯೋಣ.

ಈಗಾಗಲೇ ದೆಹಲಿ ಕರ್ನಾಟಕ ಸಂಘಕ್ಕೆ ಇನ್ನು ಎರಡು ಎಕರೆ ಜಾಗವನ್ನು ದೆಹಲಿಗೆ ಸಮೀಪವಿರುವ ನೋಯ್ಡಾದಲ್ಲಿ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದೇವೆ. ನಾವು ಮಾಡುವ ಕೆಲಸಗಳು ಇತಿಹಾಸ ಸೃಷ್ಟಿಸುವ ಕೆಲಸಗಳಾಗಲಿದ್ದಾವೆ. ಇಂತಹ ಒಳ್ಳೆಯ ಕೆಲಸಗಳಿಗೆ ಕೈಜೋಡಿಸಿ. ತಾವುಗಳು ದಯವಿಟ್ಟು ಸಂಘದ ಬಗ್ಗೆ ಯಾವುದೇ ದಾಖಲೆಗಳಿಲ್ಲದೆ ಸುಮ್ಮನೆ ಅಪವಾದಗಳನ್ನು ತರಬೇಡಿ ಅಪ ಪ್ರಚಾರ ಮಾಡಬೇಡಿ. ಅಂತಹ ಸಂಘ ವಿರೋಧಿ ಚಟುವಟಿಕೆಗಳು ಕಂಡು ಬಂದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಮಾರಂಭವೊಂದನ್ನು ದೆಹಲಿಯಿಂದ ತಾಯ್ನಾಡಿಗೆ ತೆರಳಿರುವ ಕನ್ನಡಿಗರಿಗಾಗಿ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿಸುವ ನಿಟ್ಟಿನಲ್ಲಿದ್ದೇವೆ. ದೆಹಲಿಯಿಂದ ಹೊರಗಿರುವ ಕನ್ನಡಿಗರಿಗೆ ಇದೊಂದು ಸದವಕಾಶ ಮಾಡಿದಂತಾಗುತ್ತದೆ.

ಬಂಧುಗಳೇ, ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯನ್ನು ಈಗಾಗಲೇ ಯಶಸ್ವಿಯಾಗಿ ಮಾಡಿ ಮುಗಿಸಿದ್ದೇವೆ. ಆ ಸಭೆಯಲ್ಲಿ ಬಂದಿರುವ ಸಲಹೆಗಳನ್ನು ಸೂಚನೆಗಳನ್ನ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತೇವೆ.

ಇನ್ನು ಅನೇಕ ಸದಸ್ಯರುಗಳಿಗೆ ಒಳ್ಳೆಯ ರೀತಿ ಆಗುವ ಕೆಲಸಗಳನ್ನ ಮಾಡುತ್ತಿದ್ದೇವೆ. ಈ ಮಾರ್ಚ್ ತಿಂಗಳಲ್ಲಿ ಮಹಿಳಾ ದಿನಾಚರಣೆಯನ್ನು ಸಹ ಆಯೋಜಿಸಲಿದ್ದೇವೆ. ಬರುವ ದಿನಗಳಲ್ಲಿ ಕ್ರಿಕೆಟ್ ಮತ್ತು ಪಿಕ್‌ನಿಕ್ ವ್ಯವಸ್ಥೆಯನ್ನೂ ಸಹ ಆಯೋಜನೆ ಮಾಡುತ್ತಿದ್ದೇವೆ. ಸಂಘದಲ್ಲಿ ಅನ್ನದಾಸೋಹವನ್ನು ಆರಂಭಿಸುವ ಚಿಂತನೆ ನಡೆದಿದೆ. ಕನ್ನಡ ಕಲಿಕೆ, ನೃತ್ಯ, ಸಂಗೀತ ತರಬೇತಿ ಶಿಬಿರಗಳು ಮುಂದುವರೆದಿವೆ. ನಮ್ಮ ನಿಮ್ಮೆಲ್ಲರ ಹೆಮ್ಮೆಯ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿ ಪೂರ್ತಿ ವರ್ಷ ಜರುಗಿದ ಕಾರ್ಯಕ್ರಮಗಳಲ್ಲಿ ನಮ್ಮ ಜೊತೆಗೂಡಿ, ಫೆಬ್ರವರಿ 25 ಮತ್ತು 26ರಂದು ನಡೆದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಲ್ಲ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲು ಸಹಕರಿಸಿದ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ನಾಡಿನ, ಹೊರನಾಡಿನ, ದೇಶ ವಿದೇಶಗಳ ಸಮಸ್ತ ಕನ್ನಡಿಗರಿಗೆ ಧನ್ಯತಾ ಭಾವದಿಂದ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಎಲ್ಲರಿಗೂ ಅಭಿನಂದನೆಗಳು.

ಈ ಐತಿಹಾಸಿಕ, ಅಭೂತಪೂರ್ವ ಕಾರ್ಯಕ್ರಮದ ಯಶಸ್ಸಿನ ಸುಂದರ, ಸಂತೋಷದ ಕ್ಷಣಗಳನ್ನು ಮೆಲುಕು ಹಾಕುತ್ತಾ, ಸಂಘದ ಮುಂದಿನ ಕಾರ್ಯಕ್ರಮಗಳನ್ನ ಆಯೋಜಿಸುವ, ಮುನ್ನಡೆಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಿಮ್ಮೆಲ್ಲರ ಭಾಗವಹಿಸುವಿಕೆ, ಸಹಕಾರ, ಸಹಯೋಗ ಸದಾ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ.

ಧನ್ಯವಾದಗಳು,

*ಸಿ.ಎಂ. ನಾಗರಾಜ*
ಅಧ್ಯಕ್ಷರು

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**26 ಮಾರ್ಚ್ 2023**
ಭಾನುವಾರ ಸಂಜೆ : 5.00 ಗಂಟೆಗೆ

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ**

ಸ್ಥಳೀಯ ಕಲಾವಿದರಿಂದ
ಸಮೂಹ ನೃತ್ಯ, ಸಮೂಹಗಾನ
ಸಾಂಸ್ಕೃತಿಕ ಕಾರ್ಯಕ್ರಮಗಳು



**ಆತ್ಮೀಯ ಸದಸ್ಯರೇ,**

ದೆಹಲಿ ಕರ್ನಾಟಕ ಸಂಘವು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 26, 2023 ರಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಈ ಸಂದರ್ಭದಲ್ಲಿ ಸಮೂಹ ನೃತ್ಯ (Group Dance) ಮತ್ತು ಸಮೂಹಗಾನ (Group Song) ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಚ್ಛಿಸುವ ಮಹಿಳಾ ತಂಡಗಳು ತಮ್ಮ ಹೆಸರನ್ನು ಸಂಘದಲ್ಲಿ ಕಚೇರಿಯಲ್ಲಿ, ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರನ್ನು ಸಂಪರ್ಕಿಸಬಹುದು.

* ಕಲಾ ತಂಡಗಳು ಕನಿಷ್ಟ ನಾಲ್ಕು ಕಲಾವಿದರನ್ನು ಹೊಂದಿರಬೇಕು.
* ಒಬ್ಬರಿಗೆ ಒಂದರಲ್ಲಿ ಮಾತ್ರ ಅವಕಾಶ.
* ಆಡಿಯೋ ಟ್ರ್ಯಾಕ್‌ಗಳೊಂದಿಗೆ ಹೆಸರುಗಳನ್ನು ನೊಂದಾಯಿಸಲು ಕೊನೆಯ ದಿನಾಂಕ **12.03.2023.**

**ಸಿ.ಎಂ. ನಾಗರಾಜ**
ಅಧ್ಯಕ್ಷರು

**ಆರ್. ರೇಣುಕುಮಾರ್**
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರಂಭದ

# 'ಬಾರಿಸು ಕನ್ನಡ ಡಿಂಡಿಮವ' ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರ ಭಾಷಣ




ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರೇ, ಕೇಂದ್ರ ಸಚಿವ ಸಂಪುಟದ ನನ್ನ ಸಹೋದ್ಯೋಗಿ ಪ್ರಹ್ಲಾದ ಜೋಶಿ ಅವರೇ, ಸಂಸತ್ತಿನ ನಮ್ಮ ಹಿರಿಯ ಸಹೋದ್ಯೋಗಿ ಡಾ. ವೀರೇಂದ್ರ ಹೆಗ್ಗಡೆ ಅವರೇ, ಪರಮಪೂಜ್ಯ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಶ್ರೀ ನಂಜಾವದೂತ ಸ್ವಾಮೀಜಿ, ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಕೇಂದ್ರ ಸಚಿವ ಸಂಪುಟದ ನನ್ನ ಇತರೆ ಸಹೋದ್ಯೋಗಿಗಳು, ಸಂಸದರು, ಸಿ.ಟಿ. ರವಿ ಅವರೇ, ದೆಹಲಿ ಕರ್ನಾಟಕ ಸಂಘದ ಎಲ್ಲಾ ಸದಸ್ಯರೇ, ಮಹಿಳೆಯರೇ ಮತ್ತು ಮಹನೀಯರೇ,

ಮೊದಲನೆಯದಾಗಿ, ನಾನಿಲ್ಲಿ ನಿಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇಂದು ದೆಹಲಿ ಕರ್ನಾಟಕ ಸಂಘವು 'ಎಲ್ಲಾದರೂ ಇರು, ಎಂಥಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು' (ಎಲ್ಲೇ ಇರು, ಹೇಗೇ ಇರು, ಕನ್ನಡಿಗ ಎಂಬುದನ್ನು ಮರೆಯದಿರಿ) ಎಂಬ ಭವ್ಯ ಪರಂಪರೆಯನ್ನು ಮುನ್ನಡೆಸುತ್ತಿದೆ. ದೇಶವು ಸ್ವಾತಂತ್ರ್ಯ ಗಳಿಸಿದ 75 ವರ್ಷಗಳ ಅಮೃತ ಮಹೋತ್ಸವ ಆಚರಿಸುತ್ತಿರುವ ಸುಸಂದರ್ಭದಲ್ಲಿ 'ದೆಹಲಿ ಕರ್ನಾಟಕ ಸಂಘ'ದ 75 ವರ್ಷಗಳ ಈ ಸಂಭ್ರಮಾಚರಣೆ ನಡೆಯುತ್ತಿದೆ. ನಾವು 75 ವರ್ಷಗಳ ಹಿಂದಿನ ಘಟನೆಗಳನ್ನು ಮೆಲುಕು ಹಾಕಿದಾಗ, ಈ ಪ್ರಯತ್ನದಲ್ಲಿ ಈ ಭವ್ಯ ಭಾರತಕ್ಕಾಗಿ ಅಮರರಾಗಿರುವ ಆತ್ಮಗಳನ್ನು ನೆನೆಯುತ್ತೇವೆ. ಭಾರತ ಸ್ವಾತಂತ್ರ್ಯದ ಆರಂಭಿಕ ಹಂತದಲ್ಲಿ ದೇಶವನ್ನು ಬಲಪಡಿಸುವ ಧ್ಯೇಯದಲ್ಲಿ ಜನರು ಹೇಗೆ ಒಗ್ಗೂಡಿದರು ಎಂಬುದನ್ನು ದೆಹಲಿ ಕರ್ನಾಟಕ ಸಂಘದ ಸ್ಥಾಪನೆಯು ಎತ್ತಿ ತೋರಿಸುತ್ತದೆ. ಈಗಲೂ ಸ್ವಾತಂತ್ರ್ಯದ ಮೊದಲ ಹಂತದ 'ಅಮೃತ ಕಾಲ'ದಲ್ಲೂ ದೇಶದ ಅದೇ ಶಕ್ತಿ ಮತ್ತು ಸಮರ್ಪಣಾ ಭಾವ ಇಂದಿಗೂ ಜೀವಂತವಾಗಿರುವುದಕ್ಕೆ ನನಗೆ ಸಂತೋಷವಾಗಿದೆ. ಈ ಸಂದರ್ಭದಲ್ಲಿ ಈ ಸಂಘದ ಕನಸು ನನಸು ಮಾಡಿದ ಎಲ್ಲಾ ಧೀಮಂತ ಚೇತನಗಳಿಗೆ ನಾನು ನಮಿಸುತ್ತೇನೆ. ಈ 75 ವರ್ಷಗಳ ಪ್ರಯಾಣ ಸುಲಭದ್ದಲ್ಲ, ಅನೇಕ ಏರಿಳಿತಗಳಿವೆ. ಈ ಪ್ರಯಾಣದಲ್ಲಿ ಹಲವಾರು ಜನರನ್ನು ಒಟ್ಟಿಗೆ ಕರೆದುಕೊಂಡು ಮುಂದೆ ಸಾಗಬೇಕಾಗುತ್ತದೆ. ಈ ಸಂಘವನ್ನು 75 ವರ್ಷಗಳ ಕಾಲ ಮುನ್ನಡೆಸಿ, ಅಭಿವೃದ್ಧಿ ಪಡಿಸಿದ ಎಲ್ಲರೂ ಅಭಿನಂದನಾರ್ಹರು. ರಾಷ್ಟ್ರ ನಿರ್ಮಾಣದಲ್ಲಿ ಶ್ರಮಿಸುತ್ತಿರುವ ಕರ್ನಾಟಕದ ಜನತೆಗೂ ನಾನು ಈ ಸಂದರ್ಭದಲ್ಲಿ ವಂದಿಸುತ್ತೇನೆ.



ಸ್ನೇಹಿತರೇ, ಅದು ಭಾರತದ ಅಸ್ಮಿತೆಯೇ ಆಗಲಿ, ಭಾರತದ ಸಂಪ್ರದಾಯಗಳೇ ಆಗಲಿ ಅಥವಾ ಭಾರತದ ಸ್ಫೂರ್ತಿಯೇ ಆಗಲಿ, ಕರ್ನಾಟಕವನ್ನು ಹೊರತುಪಡಿಸಿ ಭಾರತವನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಪುರಾಣ ಕಾಲದಿಂದಲೂ ಭಾರತದಲ್ಲಿ ಕರ್ನಾಟಕವು ಹನುಮಂತನ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಹನುಮಂತನಿಲ್ಲದೆ



ರಾಮನೂ ಇಲ್ಲ, ರಾಮಾಯಣವೂ ಇಲ್ಲ. ಯುಗ ಪ್ರವರ್ತಕವಾದ ಯಾವುದೇ ಮಹತ್ಕಾರ್ಯ ಅಯೋಧ್ಯೆಯಿಂದ ಪ್ರಾರಂಭವಾಗಿ ರಾಮೇಶ್ವರಕ್ಕೆ ತಲುಪುವಾಗ ಅದಕ್ಕೆ ಶಕ್ತಿ ತುಂಬಿರುವುದು ಕರ್ನಾಟಕವೇ ಆಗಿದೆ.

ಸಹೋದರ ಸಹೋದರಿಯರೇ, ಮಧ್ಯಕಾಲೀನ ಯುಗದಲ್ಲಿ ಆಕ್ರಮಣಕಾರರು ಭಾರತವನ್ನು ನಾಶ ಮಾಡಲು ಪ್ರಯತ್ನಿಸಿದಾಗ ಮತ್ತು ಸೋಮನಾಥದಂತಹ ಶಿವಲಿಂಗಗಳನ್ನು ಹಾನಿಗೊಳಿಸಿದಾಗ, ದೇವರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮತ್ತು ಕರ್ನಾಟಕದ ಬಸವೇಶ್ವರರಂತಹ ಸಾಧು ಸಂತರು 'ಇಷ್ಟಲಿಂಗ' (ಶಿವನ ಸಂಕೇತದ) ಮೂಲಕ ಸಾಮಾನ್ಯ ಜನರನ್ನು ಒಟ್ಟುಗೂಡಿಸಿದರು. ಬಾಹ್ಯ ಶಕ್ತಿಗಳು ದೇಶದ ಮೇಲೆ ದಾಳಿ ನಡೆಸಿದಾಗ ರಾಣಿ ಅಬ್ಬಕ್ಕ, ಒನಕೆ ಓಬವ್ವ, ರಾಣಿ ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮುಂತಾದ ವೀರಾಧಿವೀರರು ಅವರ ಮುಂದೆ ತಡೆ ಗೋಡೆಯಂತೆ ನಿಂತರು. ಸ್ವಾತಂತ್ರ್ಯದ ನಂತರವು ಕೂಡ, 'ಕಾಶಿ ಹಿಂದೂ ವಿಶ್ವವಿದ್ಯಾಲಯ'ದ ಮೊದಲ ಉಪಕುಲಪತಿ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಮತ್ತು ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ ಅವರೂ ಸೇರಿದಂತೆ ಅನೇಕರ ರೂಪದಲ್ಲಿ ಕರ್ನಾಟಕ ಭಾರತಕ್ಕೆ ಸದಾ ಸ್ಫೂರ್ತಿ ತುಂಬಿ ಆಕರ್ಷಣೀಯಗೊಳಿಸಿದೆ. ಈಗ ತಾನೇ ಪೂಜ್ಯ ಸ್ವಾಮೀಜಿಗಳವರಿಂದ ಅವರ (ಶ್ರೀ ತರಳಬಾಳು ಜಗದ್ಗುರುಗಳ) ಕಾಶಿಯ ಅನುಭವಗಳನ್ನು ಕೇಳಿಸಿಕೊಂಡೆವು.

ಸ್ನೇಹಿತರೇ, ಕನ್ನಡ ನಾಡಿನ ಜನತೆ ಸದಾ 'ಏಕ್ ಭಾರತ್, ಶ್ರೇಷ್ಠ ಭಾರತ್' ಎಂಬ ಮಂತ್ರದೊಂದಿಗೆ ಬದುಕಿದ್ದಾರೆ. ಕರ್ನಾಟಕದ ನೆಲದಿಂದ ಅವರು ಆ ಸ್ಫೂರ್ತಿ ಪಡೆಯುತ್ತಾರೆ. ರಾಷ್ಟ್ರಕವಿ ಕುವೆಂಪು ಅವರ 'ನಾಡಗೀತೆ' ರಚನೆಯನ್ನು ನಾವು ಈಗಷ್ಟೇ





ಕೇಳಿದ್ದೇವೆ, ಅದನ್ನು ಪೂಜ್ಯ ಸ್ವಾಮೀಜಿ ಅವರು ವಿವರಿಸಿದರು. ಎಂತಹ ಅದ್ಭುತವಾದ ಮಾತು: 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' (ಕರ್ನಾಟಕ ಮಾತೆ, ಭಾರತ ಮಾತೆಯ ಮಗಳೇ, ನಿನಗೆ ಜಯವಾಗಲಿ!). 'ಜಯ ಭಾರತ ಜನನಿಯ ತನುಜಾತೆ' ಎಂದು ಬರೆಯುವಾಗ ಕರ್ನಾಟಕ ಮಾತೆಯನ್ನು ಎಷ್ಟು ಆತ್ಮೀಯವಾಗಿ ಹೃದಯ ತುಂಬಿ ಹೊಗಳಿದ್ದಾರೆ. ಇದು ಭಾರತೀಯ ನಾಗರಿಕತೆಯನ್ನು ವಿವರಿಸುತ್ತದೆ, ಕರ್ನಾಟಕದ ಪ್ರಾಮುಖ್ಯತೆ ಮತ್ತು ಗುರುತರ ಪಾತ್ರವನ್ನು ಸಹ ಉಲ್ಲೇಖಿಸುತ್ತದೆ. ಈ ಹಾಡಿನ ಅಂತರಾತ್ಮದ ಸಾರವನ್ನು ನಾವು ಅರ್ಥ ಮಾಡಿಕೊಂಡಾಗ, ನಮಗೆ 'ಏಕ್ ಭಾರತ್ ಶ್ರೇಷ್ಠ ಭಾರತ'ದ ಸಾರವೂ ಅರ್ಥವಾಗುತ್ತದೆ.

ಸ್ನೇಹಿತರೇ, ಪ್ರಮುಖ ಜಾಗತಿಕ ಗುಂಪಿನಲ್ಲಿ ಇಂದು ಭಾರತವು ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸುತ್ತಿರುವಾಗ, ಪ್ರಜಾಪ್ರಭುತ್ವದ ತಾಯಿಯಾಗಿ ನಮ್ಮ ಆದರ್ಶಗಳು ನಮಗೆ ಮಾರ್ಗದರ್ಶನ ನೀಡುತ್ತಿವೆ. 'ಅನುಭವ ಮಂಟಪ'ದ ಮೂಲಕ ಬಸವೇಶ್ವರರ ವಚನಗಳು, ಅವರ ಪ್ರಜಾಸತ್ತಾತ್ಮಕ ಬೋಧನೆಗಳು ಭಾರತಕ್ಕೆ ಬೆಳಕಿನಂತಿವೆ. ಲಂಡನ್‌ನಲ್ಲಿ ಬಸವೇಶ್ವರರ ಪ್ರತಿಮೆ ಉದ್ಘಾಟನೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ. ಅವರ ಬೋಧನೆ(ವಚನ)ಗಳನ್ನು ವಿವಿಧ ಭಾಷೆಗಳಲ್ಲಿ ಬಿಡುಗಡೆ ಮಾಡುವ ಅವಕಾಶವೂ ನನಗೆ ಸಿಕ್ಕಿತು. ಕರ್ನಾಟಕದ ವೈಚಾರಿಕ ಪರಂಪರೆ ಹಾಗೂ ಅದರ ಪ್ರಭಾವ ಅಜರಾಮರ ಎನ್ನುವುದಕ್ಕೆ ಈ ಸಾಧನೆಗಳೇ ಸಾಕ್ಷಿ.

ಸ್ನೇಹಿತರೇ, ಕರ್ನಾಟಕವು ಸಂಪ್ರದಾಯಗಳ ಜೊತೆಗೆ ತಂತ್ರಜ್ಞಾನದ ನಾಡು. ಇದು ಐತಿಹಾಸಿಕ ಸಂಸ್ಕೃತಿ ಮತ್ತು ಆಧುನಿಕ ಕೃತಕ ಬುದ್ಧಿಮತ್ತೆ ಹೊಂದಿದೆ. ನಾನು ಇಂದು ಬೆಳಗ್ಗೆ ಜರ್ಮನ್ ಚಾನ್ಸಲರ್ ಅವರನ್ನು ಭೇಟಿ ಮಾಡಿದ್ದೇನೆ. ನಾಳೆಯಿಂದ ಬೆಂಗಳೂರಿನಲ್ಲಿ ಅವರ ಕಾರ್ಯಕ್ರಮ ನಡೆಯುತ್ತಿರುವುದು ನನಗೆ ಖುಷಿ ತಂದಿದೆ. ಇಂದು ಬೆಂಗಳೂರಿನಲ್ಲಿ ಜಿ–20 ಸಮೂಹದ ಮಹತ್ವದ ಶೃಂಗಸಭೆ ಸಹ ನಡೆಯುತ್ತಿದೆ.

ಸ್ನೇಹಿತರೇ, ನಾನು ಯಾವುದೇ ರಾಷ್ಟ್ರದ ಮುಖ್ಯಸ್ಥರನ್ನು ಭೇಟಿಯಾದಾಗ, ಅವರು ಪ್ರಾಚೀನ ಮತ್ತು ಆಧುನಿಕ ಭಾರತದ ಎರಡೂ ಬದಿಗಳನ್ನು ಅರ್ಥಮಾಡಿಕೊಳ್ಳಬೇಕೆಂದು ನಾನು ತಿಳಿಸಲು ಪ್ರಯತ್ನಿಸುತ್ತೇನೆ. ಸಂಪ್ರದಾಯ ಮತ್ತು ತಂತ್ರಜ್ಞಾನ ಇಂದು ನವ ಭಾರತದ ಮನೋಧರ್ಮವೂ ಆಗಿದೆ. ಇಂದು ದೇಶವು ಅಭಿವೃದ್ಧಿ ಮತ್ತು ಪರಂಪರೆ, ಪ್ರಗತಿ ಮತ್ತು ಸಂಪ್ರದಾಯಗಳನ್ನು ಒಟ್ಟಿಗೆ ತೆಗೆದುಕೊಂಡು ಮುನ್ನಡೆಯುತ್ತಿದೆ. ಇಂದು ಒಂದೆಡೆ, ಭಾರತವು ತನ್ನ ಪುರಾತನ ದೇವಾಲಯಗಳು ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಪುನರುಜ್ಜೀವನಗೊಳಿಸುತ್ತಿದೆ ಮತ್ತು ಅದೇ ಸಮಯದಲ್ಲಿ, ನಾವು ಡಿಜಿಟಲ್ ಪಾವತಿಗಳಲ್ಲಿ ವಿಶ್ವ ನಾಯಕರಾಗಿದ್ದೇವೆ. ಇಂದಿನ ಭಾರತವು ನಮ್ಮ ಶತಮಾನಗಳಷ್ಟು ಪುರಾತನವಾದ ವಿಗ್ರಹಗಳು ಮತ್ತು ಕಲಾಕೃತಿಗಳು ಕಳುವಾಗಿ ಹೋಗಿದ್ದವು. ಅವುಗಳನ್ನು ವಿದೇಶದಿಂದ ಮರಳಿ ತರುತ್ತಿದ್ದೇವೆ. ಇಂದಿನ ಭಾರತವು ವಿದೇಶದಿಂದ ದಾಖಲೆಯ ಪ್ರಮಾಣದಲ್ಲಿ ವಿದೇಶಿ ನೇರ ಹೂಡಿಕೆ ಆಕರ್ಷಿಸುತ್ತಿದೆ. ಇದು ನವ ಭಾರತದ ಅಭಿವೃದ್ಧಿ












ಪಥವಾಗಿದ್ದು, ಅಭಿವೃದ್ಧಿ ಹೊಂದಿದ ಭಾರತದ ಗುರಿಯತ್ತ ನಮ್ಮನ್ನು ಕರೆದೊಯ್ಯುತ್ತಿದೆ.

ಸ್ನೇಹಿತರೇ, ಇಂದು ಕರ್ನಾಟಕದ ಅಭಿವೃದ್ಧಿಯು ದೇಶಕ್ಕೆ ಮತ್ತು ಕರ್ನಾಟಕ ಸರ್ಕಾರಕ್ಕೆ ಮೊದಲ ಆದ್ಯತೆಯಾಗಿದೆ. ಈ ಹಿಂದೆ ಕರ್ನಾಟಕದಲ್ಲಿ ಸರ್ಕಾರ ರಚನೆಯಾದ ನಂತರ ಜನರು ಹಣವನ್ನು ಹೊರಗೆ ತೆಗೆದುಕೊಂಡು ಹೋಗುತ್ತಿದ್ದರು. ಆದರೆ, ಇಂದು ದೇಶದ ಹಣ ಮತ್ತು ಸಂಪನ್ಮೂಲಗಳನ್ನು ಕರ್ನಾಟಕದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ವಿನಿಯೋಗಿಸಲಾಗುತ್ತಿದೆ. ನೀವೇ ನೋಡಿ, 2009ರಿಂದ 2014ರ ನಡುವೆ ಕರ್ನಾಟಕ ರಾಜ್ಯಕ್ಕೆ ಕೇಂದ್ರವು ವಾರ್ಷಿಕವಾಗಿ 11,000 ಕೋಟಿ ರೂಪಾಯಿ ನೀಡುತ್ತಿತ್ತು, ಆದರೆ ನಮ್ಮ ಸರ್ಕಾರ ರಚನೆಯಾದ ನಂತರ ಕೇಂದ್ರದಿಂದ 2019 ಮತ್ತು 2023ರ ನಡುವೆ ಇದುವರೆಗೆ 30,000 ಕೋಟಿ ರೂಪಾಯಿಯನ್ನು ಕರ್ನಾಟಕಕ್ಕೆ ನೀಡಲಾಗಿದೆ. 2009 ಮತ್ತು 2014ರ ನಡುವೆ ಕೇಂದ್ರದಲ್ಲಿ ರೈಲ್ವೆ ಸಚಿವರು ಕರ್ನಾಟಕದವರಾಗಿದ್ದರೂ ಕೂಡ, ಕರ್ನಾಟಕದ ರೈಲ್ವೇ ಯೋಜನೆಗಳಿಗೆ ಒಟ್ಟಾರೆ 4,000 ಕೋಟಿ ರೂ.ಗಿಂತ ಕಡಿಮೆ ವೆಚ್ಚ ಮಾಡಲಾಗಿತ್ತು. ಅಂದರೆ 5 ವರ್ಷಗಳಲ್ಲಿ 4,000 ಕೋಟಿ ರೂಪಾಯಿಗಿಂತ ಕಡಿಮೆ! ಮತ್ತೊಂದೆಡೆ, ನಮ್ಮ ಸರ್ಕಾರವು ಈ ವರ್ಷದ ಬಜೆಟ್‌ನಲ್ಲಿ ಕರ್ನಾಟಕದ ರೈಲು ಮೂಲಸೌಕರ್ಯಕ್ಕಾಗಿ ಸುಮಾರು 7,000 ಕೋಟಿ ರೂಪಾಯಿ ಮಂಜೂರು ಮಾಡಿದೆ. ನಾನು ಈ ವರ್ಷದ ಬಜೆಟ್ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿಗಳಿಗಾಗಿ ಹಿಂದಿನ ಸರ್ಕಾರದ 5 ವರ್ಷಗಳ ಅವಧಿಯಲ್ಲಿ ಕರ್ನಾಟಕಕ್ಕೆ ಒಟ್ಟು 6,000 ಕೋಟಿ ರೂ. ಒದಗಿಸಲಾಗಿತ್ತು. ಆದರೆ ನಮ್ಮ ಸರ್ಕಾರ ಈ 9 ವರ್ಷಗಳಲ್ಲಿ ಕರ್ನಾಟಕದಲ್ಲಿ ಪ್ರತಿ ವರ್ಷ 5,000 ಕೋಟಿ ರೂಪಾಯಿ ಹೂಡಿಕೆ ಮಾಡುತ್ತಿದೆ. 5 ವರ್ಷದಲ್ಲಿ 6,000 ಕೋಟಿ ರೂಪಾಯಿಗೂ ಪ್ರತಿ ವರ್ಷ 5,000 ಕೋಟಿ ರೂಪಾಯಿಗೂ ಇರುವ ವ್ಯತ್ಯಾಸ ನೋಡಿ!

ಸ್ನೇಹಿತರೇ, ಭದ್ರಾ ಮೇಲ್ದಂಡೆ ಯೋಜನೆಯ ಬಹುಕಾಲದ ಬೇಡಿಕೆಯನ್ನೂ ನಮ್ಮ ಸರ್ಕಾರ ಈಡೇರಿಸುತ್ತಿದೆ. ಇದು ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಸೇರಿದಂತೆ ಮಧ್ಯ ಕರ್ನಾಟಕದ ಬರಪೀಡಿತ ಬೃಹತ್ ಪ್ರದೇಶಗಳ ರೈತರಿಗೆ ಅನುಕೂಲವಾಗಲಿದೆ. ಅಭಿವೃದ್ಧಿಯ ಈ ಹೊಸ ಗತಿಯು ಕರ್ನಾಟಕದ ಚಿತ್ರಣವನ್ನು ವೇಗವಾಗಿ ಬದಲಾಯಿಸುತ್ತಿದೆ. ದೆಹಲಿಯಲ್ಲಿ ನೆಲೆಸಿರುವವರು ಮತ್ತು ತಮ್ಮ ಗ್ರಾಮಕ್ಕೆ ಬಹಳ ದಿನಗಳಿಂದ ಭೇಟಿ ನೀಡದಿರುವವರು ಅಲ್ಲಿಗೆ ಹೋದಾಗ ಆಶ್ಚರ್ಯ ಮತ್ತು ಹೆಮ್ಮೆಪಡುತ್ತಾರೆ.

ಸ್ನೇಹಿತರೇ, ದೆಹಲಿ ಕರ್ನಾಟಕ ಸಂಘದ 75 ವರ್ಷಗಳ ಬೆಳವಣಿಗೆ, ಸಾಧನೆ ಮತ್ತು ಜ್ಞಾನದ ಪ್ರಸಾರವು ಹಲವು ಮಹತ್ವದ ಕ್ಷಣಗಳನ್ನು ನಮ್ಮ ಕಣ್ಣ ಮುಂದೆ ತಂದಿದೆ. ಈಗ ಮುಂದಿನ 25 ವರ್ಷಗಳು ಹೆಚ್ಚು ಮಹತ್ವದ್ದಾಗಿದೆ. ಅಮೃತ ಕಾಲ ಮತ್ತು ದೆಹಲಿ ಕರ್ನಾಟಕ ಸಂಘದ ಮುಂದಿನ 25 ವರ್ಷಗಳಲ್ಲಿ ನೀವು ಅನೇಕ ಪ್ರಮುಖ ಕೆಲಸಗಳನ್ನು ಮಾಡಬಹುದು. ನೀವು ಗಮನ ಹರಿಸಬಹುದಾದ 2 ವಿಷಯಗಳೆಂದರೆ–'ಕಲಿಕೆ ಮತ್ತು ಕಲೆ', ಅದು ಜ್ಞಾನ ಮತ್ತು ಕಲೆ. 'ಕಲಿಕೆ'ಯ ಬಗ್ಗೆ ಮಾತನಾಡಿದರೆ ನಮ್ಮ ಕನ್ನಡ ಭಾಷೆ ಎಷ್ಟು ಸೊಗಸಾಗಿದೆ, ಸಾಹಿತ್ಯ ಎಷ್ಟು ಶ್ರೀಮಂತವಾಗಿದೆ ಎಂಬುದು ತಿಳಿಯುತ್ತದೆ. ಇದರೊಂದಿಗೆ ಕನ್ನಡ ಭಾಷೆಯ ಇನ್ನೊಂದು ವಿಶೇಷತೆಯೂ ಇದೆ. ಈ ಭಾಷೆಯನ್ನು ಮಾತನಾಡುವವರು ಬಹಳ ಬಲವಾದ ಓದುವ ಅಭ್ಯಾಸವನ್ನು ಹೊಂದಿದ್ದಾರೆ. ಕನ್ನಡ ಭಾಷೆಯನ್ನು ಓದುವವರ ಸಂಖ್ಯೆಯೂ ಅತಿ ಹೆಚ್ಚು. ಇಂದು ಕನ್ನಡದಲ್ಲಿ ಒಳ್ಳೆಯ ಹೊಸ ಪುಸ್ತಕ ಅಥವಾ ಕೃತಿ ಬಂದರೆ ಕೆಲವೇ ವಾರಗಳಲ್ಲಿ ಪ್ರಕಾಶಕರು ಅದನ್ನು ಮರುಮುದ್ರಣ ಮಾಡುತ್ತಾರೆ. ಕರ್ನಾಟಕ ಮತ್ತು ಕನ್ನಡ ಭಾಷೆಗೆ ಇರುವ ಈ ಸೌಭಾಗ್ಯ ಬೇರೆ ಭಾಷೆಗಳಿಗೆ ಇಲ್ಲ.

ದೆಹಲಿಯಲ್ಲಿ ವಾಸಿಸುವ ನಿಮ್ಮಲ್ಲಿ ಹೊಸ ಪೀಳಿಗೆ ಭಾಷಾ ತೊಂದರೆಗಳನ್ನು ಎದುರಿಸುತ್ತಾರೆ. ಅವರ ಬಗ್ಗೆ ನೀವು ಗಮನ ಹರಿಸಬೇಕು. ಆದುದರಿಂದ ಜಗದ್ಗುರು ಬಸವೇಶ್ವರರ ವಚನಗಳಾಗಲಿ, ಹರಿದಾಸರ ಗೀತೆಗಳಾಗಲಿ, ಕುಮಾರವ್ಯಾಸ ಬರೆದ ಮಹಾಭಾರತದ ಆವೃತ್ತಿಯಾಗಲಿ, ಕುವೆಂಪು ಅವರು ಬರೆದ ಶ್ರೀ ರಾಮಾಯಣ ದರ್ಶನಂ ಆಗಲಿ, ಈ ಅಗಾಧ ಪರಂಪರೆಯನ್ನು ನೀವೆಲ್ಲಾ ಮುಂದಿನ ಪೀಳಿಗೆಗೆ ಕಲಿಸಬೇಕು. ನೀವೂ ಲೈಬ್ರರಿ ನಡೆಸುತ್ತೀರಿ ಎಂದು ಕೇಳಿದ್ದೇನೆ. ಸ್ಪಡಿ ಸರ್ಕಲ್ ಸೆಷನ್‌ಗಳು ಮತ್ತು ಸಾಹಿತ್ಯ ಸಂಬಂಧಿತ ಚರ್ಚೆಗಳಂತಹ ಅನೇಕ ಕಾರ್ಯಕ್ರಮಗಳನ್ನು ನೀವು ನಿಯಮಿತವಾಗಿ ಆಯೋಜಿಸಿ, ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು. ಇದರೊಂದಿಗೆ ದೆಹಲಿಯ ಕನ್ನಡಿಗರ ಮಕ್ಕಳಿಗೆ ಕನ್ನಡದಲ್ಲಿ ಓದುವ ಹವ್ಯಾಸ ಬೆಳೆಸಲು ನೀವು ಸಹಾಯ ಮಾಡಬಹುದು. ಅಂತಹ ಪ್ರಯತ್ನಗಳಿಂದ 'ಕಲಿಕೆ' ಅಥವಾ ಜ್ಞಾನದ ಹರಡುವಿಕೆಯು ದೆಹಲಿಯ ಕನ್ನಡಿಗರ ಮೇಲೆ ಮತ್ತು ಇತರರ ಮೇಲೆ ಪ್ರಭಾವ ಬೀರುತ್ತದೆ–'ಕನ್ನಡ ಕಲಿಯಿರಿ' ಮತ್ತು 'ಕನ್ನಡ ಕಲಿಸಿ' ಅಂದರೆ ಕನ್ನಡ ಕಲಿಸಲು ಸಹಾಯ ಮಾಡಬೇಕು.

ಸ್ನೇಹಿತರೇ, 'ಕಲಿಕೆ'ಯೊಂದಿಗೆ ಕರ್ನಾಟಕವು 'ಕಲೆ' ಅಂದರೆ ಕಲಾ ಕ್ಷೇತ್ರದಲ್ಲೂ ಅಸಾಧಾರಣ ಸಾಧನೆ ಮಾಡಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಈ ಕಾರ್ಯಕ್ರಮದಲ್ಲಿ ಇಡೀ ಕರ್ನಾಟಕದ ಸಂಸ್ಕೃತಿಯನ್ನು ಕಣ್ಣಾರೆ ಕಾಣುವ, ಆನಂದಿಸುವ ಅವಕಾಶ ಸಿಕ್ಕಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ.








ಕರ್ನಾಟಕವು ಶಾಸ್ತ್ರೀಯ ಕಲೆ ಮತ್ತು ಜನಪದ ಕಲೆ ಎರಡರಲ್ಲೂ ಶ್ರೀಮಂತವಾಗಿದೆ. ಕಂಸಾಳೆಯಿಂದ ಕರ್ನಾಟಕ ಶೈಲಿಯ ಸಂಗೀತದವರೆಗೆ, ಭರತನಾಟ್ಯದಿಂದ ಯಕ್ಷಗಾನದವರೆಗೆ, ಕರ್ನಾಟಕ ಕಲೆಯ ಪ್ರತಿಯೊಂದು ಪ್ರಕಾರವೂ ನಮ್ಮಲ್ಲಿ ಆನಂದ ತಂದಿದೆ. ದೆಹಲಿ ಕರ್ನಾಟಕ ಸಂಘವು ಹಲವು ವರ್ಷಗಳಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಆದರೆ ಈಗ ಈ ಪ್ರಯತ್ನಗಳನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಅವಶ್ಯಕತೆಯಿದೆ. ಕರ್ನಾಟಕದ ಗತವೈಭವವನ್ನು ಕಣ್ತುಂಬಿಕೊಳ್ಳಲು ಮತ್ತು ಕರ್ನಾಟಕದ ಶ್ರೀಮಂತ ಕಲೆಗಳನ್ನು ಆನಂದಿಸಲು ದೆಹಲಿಯ ಪ್ರತಿ ಕನ್ನಡಿಗ ಕುಟುಂಬವು ಮುಂದೆ ಇಂತಹ ಕಾರ್ಯಕ್ರಮ ನಡೆಸಿದಾಗ ಕನ್ನಡೇತರ ಕುಟುಂಬವನ್ನು ತಮ್ಮೊಂದಿಗೆ ಕರೆತರಲು ಪ್ರಯತ್ನಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ಕನ್ನಡ ಸಂಸ್ಕೃತಿಯನ್ನು ಬಿಂಬಿಸುವ ಕೆಲವು ಚಿತ್ರಗಳು ಕನ್ನಡೇತರರಲ್ಲೂ ಬಹಳ ಜನಪ್ರಿಯವಾಗಿವೆ. ಇದು ಕರ್ನಾಟಕವನ್ನು ತಿಳಿದುಕೊಳ್ಳುವ ಮತ್ತು ಅರ್ಥ ಮಾಡಿಕೊಳ್ಳುವ ಕುತೂಹಲವನ್ನು ಜನರಲ್ಲಿ ಹೆಚ್ಚಿಸಿದೆ, ಈ ಕುತೂಹಲವನ್ನು ನಾವು ಉತ್ತೇಜಿಸಬೇಕಾಗಿದೆ. ಅಲ್ಲದೆ, ನಾನು ನಿಮ್ಮಿಂದ ಇನ್ನೂ ಒಂದು ನಿರೀಕ್ಷೆ ಹೊಂದಿದ್ದೇನೆ. ಇಲ್ಲಿಗೆ ಬಂದಿರುವ ಕರ್ನಾಟಕದ ಕಲಾವಿದರು ಮತ್ತು ಪ್ರಬುದ್ಧರು ದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕ, ಪಿಎಂ ಮ್ಯೂಸಿಯಂ ಮತ್ತು ಕರ್ತವ್ಯ ಪಥದಂತಹ ಸ್ಥಳಗಳಿಗೆ ಭೇಟಿ ನೀಡಬೇಕು. ನೀವು ಹೆಮ್ಮೆ ಪಡುವ ಮತ್ತು ಆನಂದಿಸುವ ಬಹಳಷ್ಟು ವಿಚಾರಗಳನ್ನು ನೋಡುತ್ತೀರಿ. ಈ ಕೆಲಸಗಳನ್ನು ಬಹಳ ಹಿಂದೆಯೇ ಮಾಡಬೇಕಿತ್ತು ಎಂದು ಅಂದುಕೊಳ್ಳುತ್ತೀರಿ. ನಿಮ್ಮ ಅನುಭವಗಳನ್ನು ಕರ್ನಾಟಕದ ಜನರೊಂದಿಗೆ ಅಲ್ಲಿ ಹಂಚಿಕೊಳ್ಳಬೇಕೆಂದು ನಾನು ಬಯಸುತ್ತೇನೆ.

ಸ್ನೇಹಿತರೇ, ಪ್ರಸ್ತುತ, ಭಾರತದ ಕೈಗೊಳ್ಳುವ ಉಪಕ್ರಮಗಳನ್ನು ಆಧರಿಸಿ ಇಡೀ ಜಗತ್ತು 'ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ' ಆಚರಿಸುತ್ತಿದೆ. ಕರ್ನಾಟಕವು ಭಾರತೀಯ ಸಿರಿಧಾನ್ಯಗಳ ಪ್ರಮುಖ ಕೇಂದ್ರವಾಗಿದೆ. ಸಿರಿಧಾನ್ಯ ಅಂದರೆ ನಿಮ್ಮ ಶ್ರೀ ಅನ್ನ ಕರ್ನಾಟಕದ ಸಂಸ್ಕೃತಿ ಮತ್ತು ಸಾಮಾಜಿಕ ಅಸ್ಮಿತೆಯ ಭಾಗವೂ ಆಗಿದೆ. ನಮ್ಮ ಯಡಿಯೂರಪ್ಪ ಜಿ ಅವರ ಕಾಲದಿಂದಲೂ ಕರ್ನಾಟಕದಲ್ಲಿ 'ಸಿರಿಧಾನ್ಯ' ಪ್ರಚಾರಕ್ಕಾಗಿ ಕಾರ್ಯಕ್ರಮಗಳು ಪ್ರಾರಂಭವಾದವು. ಇಂದು ಇಡೀ ದೇಶವೇ ಕನ್ನಡಿಗರ ಹಾದಿಯಲ್ಲಿ ಸಾಗುತ್ತಿದ್ದು, ಸಿರಿಧಾನ್ಯಗಳನ್ನು ಶ್ರೀ ಅನ್ನ ಎಂದು ಕರೆಯಲು ಆರಂಭಿಸಿದೆ. ಇಡೀ ಜಗತ್ತು ಶ್ರೀ ಅನ್ನದ ಪ್ರಯೋಜನಗಳು ಮತ್ತು ಅಗತ್ಯಗಳನ್ನು ಅಂಗೀಕರಿಸುತ್ತಿರುವಾಗ, ಮುಂದಿನ ದಿನಗಳಲ್ಲಿ ಅದರ ಬೇಡಿಕೆಯೂ ಹೆಚ್ಚಾಗಲಿದೆ. ಇದರಿಂದ ಕರ್ನಾಟಕದ ಜನತೆ ಮತ್ತು ಸಣ್ಣ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ.

ಸ್ನೇಹಿತರೇ, 2047ರಲ್ಲಿ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ತನ್ನ ಸ್ವಾತಂತ್ರ್ಯದ 100 ವರ್ಷಗಳನ್ನು ಪೂರ್ಣಗೊಳಿಸಿದಾಗ, ದೆಹಲಿ ಕರ್ನಾಟಕ ಸಂಘವು ತನ್ನ 100ನೇ ವರ್ಷವನ್ನು ಪ್ರವೇಶಿಸುತ್ತದೆ. ಭಾರತದ ಅಮರತ್ವದ ವೈಭವಕ್ಕೆ ನಿಮ್ಮ ಕೊಡುಗೆಗಳನ್ನು ಸಹ ಆ ಸಮಯದಲ್ಲಿ ಚರ್ಚಿಸಲಾಗುವುದು. ಈ ಅದ್ದೂರಿ ಸಮಾರಂಭಕ್ಕೆ ಮತ್ತು 75 ವರ್ಷಗಳ ಈ ಪಯಣಕ್ಕೆ ಮತ್ತೊಮ್ಮೆ ನಾನು ನಿಮಗೆ ಶುಭ ಹಾರೈಸುತ್ತೇನೆ. ನಮ್ಮನ್ನು ಆಶೀರ್ವದಿಸಿ ಪ್ರೇರೇಪಿಸಿದ ಪೂಜ್ಯ ಸಾಧು ಸಂತರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಪೂಜ್ಯ ಸಂತರ ಆಶೀರ್ವಾದ ಪಡೆಯುವ ಸೌಭಾಗ್ಯ ಸಿಕ್ಕಿದೆ ಎಂದು ಹೆಮ್ಮೆ ಪಡುತ್ತೇನೆ. ಮತ್ತೊಮ್ಮೆ ನನ್ನ ಹೃದಯಾಂತರಾಳದಿಂದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನೀವೆಲ್ಲರೂ ನನ್ನೊಂದಿಗೆ ಹೇಳಿ: ಭಾರತ್ ಮಾತಾ ಕಿ– ಜೈ, ಭಾರತ್ ಮಾತಾ ಕಿ–ಜೈ, ಭಾರತ್ ಮಾತಾ ಕಿ– ಜೈ!

# ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ




2023 ರ ಫೆಬ್ರವರಿ 25 ಮತ್ತು 26 ದೆಹಲಿ ಕರ್ನಾಟಕ ಸಂಘದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನಗಳು. ಏಕೆಂದರೆ ದೆಹಲಿ ಕರ್ನಾಟಕ ಸಂಘದ ಎಪ್ಪತ್ತೈದು ವರ್ಷಗಳ ಅಮೃತ ಮಹೋತ್ಸವದ ಸಮಾರೋಪ ಸಮಾರಂಭವನ್ನು ಭಾರತದ ಹೆಮ್ಮೆಯ ಪ್ರಧಾನಮಂತ್ರಿ ವಿಶ್ವದ ಶ್ರೇಷ್ಠ ನಾಯಕರ ಸಾಲಿನಲ್ಲಿ ನಿಂತು ಭಾರತಕ್ಕೆ ಕೀರ್ತಿ ತಂದಿರುವ ಶ್ರೀ ನರೇಂದ್ರ ಮೋದಿ ಅವರು ಉದ್ಘಾಟನೆ ಮಾಡಿದ 25 ನೇ ತಾರೀಖು ಅವಿಸ್ಮರಣೀಯ ದಿನವಾದರೆ, ಫೆಬ್ರವರಿ 26 ರಂದು ಕನ್ನಡ ಚಿತ್ರರಂಗದ ಪ್ರಖ್ಯಾತ ಗಾಯಕ. 'ಜೈಹೋ' ಗೀತೆಯ ಮುಖಾಂತರ ಭಾರತದಾದ್ಯಂತ ಜನಪ್ರಿಯರಾಗಿರುವ ಸಮಕಾಲೀನ ಭಾರತೀಯ ಖ್ಯಾತ ಹಿನ್ನೆಲೆ ಗಾಯಕ ಶ್ರೀ ವಿಜಯ್ ಪ್ರಕಾಶ್ ಹಾಗೂ ಅವರ ತಂಡದಿಂದ ಸಂಗೀತ ರಸ ಸಂಜೆಗಳು ದೆಹಲಿ ಕನ್ನಡಿಗರ ಹೃನ್ಮನಗಳನ್ನು ಗೆದ್ದ ಐತಿಹಾಸಿಕ ಕಾರ್ಯಕ್ರಮಗಳು.

ಫೆಬ್ರವರಿ 25 ರಂದು ಬೆಳಿಗ್ಗೆ ಸುಮಾರು ಎಂಟು ಗಂಟೆಯಿಂದಲೇ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ನಡೆದ ನವದೆಹಲಿಯ ಪ್ರತಿಷ್ಠಿತ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದತ್ತ ಹೆಜ್ಜೆ ಹಾಕಿದ ದೆಹಲಿ ಕನ್ನಡಿಗರು, ಕರ್ನಾಟಕದಿಂದ ಬಂದ ಕಲಾವಿದರು, ಅತಿಥಿಗಳು, ನಾಡಿನ ಮತ್ತು ದೇಶದ ಬೇರೆ ಬೇರೆ ಭಾಗಗಳಿಂದ ಹಾಗೂ ವಿದೇಶಗಳಿಂದ ಬಂದಿದ್ದ ಕನ್ನಡಿಗರನ್ನು ಸಂಘದ ಪದಾಧಿಕಾರಿಗಳು, ಸ್ವಯಂ ಸೇವಾಕರ್ತರು ಸ್ವಾಗತಿಸಿ, ಬಂದವರಿಗೆ ಪಾಸುಗಳನ್ನು ಪಡೆದುಕೊಳ್ಳಲು ಸೂಕ್ತ ಏರ್ಪಾಡು ಮಾಡುತ್ತಿದ್ದುದು, ಮಹಿಳೆಯರು ಕುಂಭ ಕಳಶ ಹೊತ್ತು ಸ್ವಾಗತಿಸುವ ಕಾರ್ಯಕ್ಕೆ ಪೂರ್ವ ತಯಾರಿ ನಡೆಸಲು ಹಾಗೂ ನಾಡಗೀತೆ ಹಾಡಲು ಮಹಿಳೆಯರ ಗುಂಪು ಸಿದ್ಧತೆ ಮಾಡಿಕೊಳ್ಳುತ್ತಿದ್ದುದು ಹಾಗೆಯೇ ಬೆಳಗಿನ ಉಪಹಾರ ಮತ್ತು ಟೀ, ಕಾಫಿಗಳ ಸ್ವಾದವನ್ನು ಆಸ್ವಾದಿಸುತ್ತಾ ಪರಸ್ಪರ ಉಭಯ ಕುಶಲೋಪರಿ ಹಂಚಿಕೊಂಡು, ಇನ್ನು ಕೆಲವರು ಹೊಸದಾಗಿ ಪರಿಚಯಿಸಿಕೊಂಡು ಸಂತೋಷದಿಂದ ಹಾಗೂ ಸಂಭ್ರಮಿಸುತ್ತಿದ್ದುದು. ಸಭಾಂಗಣದ ಒಳಗೆ ಝಗ ಮಘಿಸುವ ಬೆಳಕು, ಸಂಗೀತ ವಾದ್ಯಗಳ ನಿನಾದ ಮೊಳಗುತ್ತಿದ್ದುದು... ಹೀಗೆ ಎಲ್ಲವೂ ಕಾರ್ಯಕ್ರಮದ ಯಶಸ್ಸಿಗೆ ಮುನ್ನುಡಿ ಬರೆಯುತ್ತಿರುವಂತೆ ಭಾಸವಾಗುತ್ತಿತ್ತು.

ಹನ್ನೊಂದು ಗಂಟೆಗೆ ಸುಸಜ್ಜಿತವಾಗಿ ಅಲಂಕರಿಸಿ. ವಿನ್ಯಾಸಗೊಳಿಸಿದ್ದ ಸಭಾಗೃಹದ ವೇದಿಕೆಯಲ್ಲಿ ಪ್ರಾರಂಭವಾದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕರ್ನಾಟಕ ಸರ್ಕಾರದ ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀ ವಿ. ಸುನಿಲ್ ಕುಮಾರ್ ಉದ್ಘಾಟಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ್ ಅವರ ಆಶಯದಂತೆ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಕಲಾವಿದರನ್ನು ಕರೆದು ತಂದಿದ್ದ ವಿವಿಧ ಕಲಾತಂಡಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ರಾಷ್ಟ್ರಮಟ್ಟದಲ್ಲಿ ಅದರಲ್ಲೂ ಮುಖ್ಯವಾಗಿ ಐತಿಹಾಸಿಕ ಸಮಾರಂಭದಲ್ಲಿ ವೇದಿಕೆ ಒದಗಿಸಿಕೊಡಲಾಗಿತ್ತು.

ಜಾನಪದ ಜೀವಧ್ವನಿ ಡಾ. ಕೆ. ರಾಮೇಶ್ವರಪ್ಪ ಮತ್ತು ತಂಡದಿಂದ ಜಾನಪದ ಗಾಯನ, ಶ್ರೀ ಧರ್ಮೇಂದ್ರ ಕುಮಾರ್ ಮತ್ತು ಬಿ. ರಶ್ಮಿಯವರಿಂದ ಕರ್ನಾಟಕ ರಾಜಮನೆತನಗಳ ಇತಿಹಾಸ ವೈಭವ ಮತ್ತು ನೃತ್ಯ, ನಿರಂತರ ಸ್ಕೂಲ್ ಆಫ್ ಡಾನ್ಸ್ ತಂಡದವರಿಂದ ನೃತ್ಯರೂಪಕ, ಶ್ರೀಮತಿ ಶುಭಾಂಗಿ ಮತ್ತು ತಂಡದವರಿಂದ ನೃತ್ಯರೂಪಕ, ರಂಗವಿಜಯ ತಂಡದಿಂದ ನೃತ್ಯರೂಪಕ, ಎಂಡೆವರ್ಸ್ ಡಾ. ಎಂ.ಎಲ್. ಶಿವಶಂಕರ್ ಕಲಾತಂಡದಿಂದ ನೃತ್ಯರೂಪಕ, ವಿದುಷಿ ಡಾ. ಜಯಲಕ್ಷ್ಮೀಯವರ ಕೈಲಾಸ ಕಲಾಧರ ತಂಡದಿಂದ ನೃತ್ಯ, ವಿದ್ವಾನ್ ಕೋಲಾರ ರಮೇಶ್, ವಿದುಷಿ ತನುಜಾ ಮತ್ತು ವಿದುಷಿ ವಿನುತಾ ಹೇಮಂತ, ವಿದುಷಿ ಲತಾಲಕ್ಷ್ಮೀಕಾಂತ್, ಗುರು ಭಾನುಪ್ರಿಯಾ ರಾಕೇಶ್ ತಂಡದವರಿಂದ ನೃತ್ಯಗಳು, ಝೀ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿಗಳು ತಂಡದಿಂದ ಹಾಸ್ಯ ಸಂಜೆ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿಗಳಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ಮೂಡಿ ಬಂದವು.

ಫೆಬ್ರವರಿ 25 ರ ಸಂಜೆ ಐದು ಗಂಟೆಯ ವೇಳೆಗೆ ವಿಶ್ವನಾಯಕ ಭಾರತ ಮಾತೆಯ ಹೆಮ್ಮೆಯ ಸುಪುತ್ರ ಭಾರತದ ಹೆಮ್ಮೆಯ ಪ್ರಧಾನಮಂತ್ರಿ ಶ್ರೀ



ನರೇಂದ್ರ ಮೋದಿ ಅವರು ನವದೆಹಲಿಯ ಪ್ರತಿಷ್ಠಿತ ತಾಲ್ಕಟೋರ ಒಳಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ಕೇಂದ್ರಮಂತ್ರಿ ಶ್ರೀ ಪ್ರಹ್ಲಾದ್ ಜೋಶಿ, ಗೌರವಾಧ್ಯಕ್ಷರಾದ ಶ್ರೀ ಸಿ.ಟಿ. ರವಿ ಅವರು, ಹಾಗೂ ಸಂಸದರುಗಳಾದ, ಶ್ರೀ ಮುನಿಸ್ವಾಮಿ, ಶ್ರೀ ತೇಜಸ್ವಿ ಸೂರ್ಯ, ಡಾ. ಉಮೇಶ್ ಜಾಧವ್ ಮೊದಲಾದವರು ಕೈಮುಗಿದು ಸ್ವಾಗತಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸನ್ಮಾನ್ಯ ಪ್ರಧಾನಮಂತ್ರಿಗಳಿಗೆ ರೇಷ್ಮೆ ರುಮಾಲನ್ನು ಹೊದಿಸಿ ಆದರದಿಂದ ಬರಮಾಡಿಕೊಂಡರು. ಈ ಎಲ್ಲ ದೃಶ್ಯಗಳನ್ನು ಸಭಾಂಗಣದ ಒಳಗೆ ವಿಶಾಲವಾದ ಎಲ್.ಇ.ಡಿ. ಪರದೆಗಳ ಮೇಲೆ ನೋಡುತ್ತಿದ್ದಂತೆಯೇ ಮುಗಿಲು ಮುಟ್ಟುವಂತೆ ಕರತಾಡನ ಕೇಳಿಬರುತ್ತಿದ್ದವು. ಸನ್ಮಾನ್ಯ ಪ್ರಧಾನಮತ್ರಿಗಳು ಸಭಾಂಗಣದ ಕಡೆಗೆ ನಡೆದು ಬರುವಾಗ ವಿವಿಧ ಕಲಾ ತಂಡಗಳು ತಮ್ಮ ಸಾಂಪ್ರದಾಯಿಕ ಕಲೆಗಳನ್ನು ಪಾರಂಪರಿಕ ಉಡುಗೆ ತೊಡುಗೆಯುಟ್ಟು, ತಮಟೆ, ನಗಾರಿ, ಡೊಳ್ಳು ಮೊದಲಾದ ಕುಣಿತಗಳನ್ನು ಪ್ರದರ್ಶಿಸುತ್ತಾ ಕರ್ನಾಟಕದ ಕಲೆ ಸಂಸ್ಕೃತಿಗಳತ್ತ ಸನ್ಮಾನ್ಯ ಪ್ರಧಾನ ಮತ್ರಿಗಳ ಗಮನವನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವು. ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಆ ಎಲ್ಲ ಕಲೆಗಳ ಕುರಿತ ಮಾಹಿತಿ ಪ್ರಧಾನಿಗಳಿಗೆ ನೀಡಿದರು.

ಮುಖ್ಯವಾಗಿ ಪ್ರಧಾನಮಂತ್ರಿಗಳು ಸಾಗಿದ ಹಾದಿಯ ಎರಡೂ ಮಗ್ಗಲುಗಳಲ್ಲಿಯೂ ಕರ್ನಾಟಕ ಸಾಂಪ್ರದಾಯಿಕ ಪರಂಪರೆಯಂತೆ ದೆಹಲಿ ಎನ್.ಸಿ.ಆರ್.ನ ನೂರಾ ಒಂದು ಮಹಿಳೆಯರು ಪೂರ್ಣ ಕುಂಭ ಕಳಶವನ್ನು ಹಿಡಿದು ಸ್ವಾಗತ ಕೋರಿದರೆ, ಇನ್ನು ಕೆಲವು ಮಹಿಳೆಯರು ಹೂ ಮಳೆಗರೆಯುತ್ತಾ ಪ್ರಧಾನ ಮಂತ್ರಿಗಳನ್ನು ವಿಧ್ಯುಕ್ತವಾಗಿ ಸ್ವಾಗತಿಸಿದರು. ಮುಂದುವರೆದು, ಮಾನ್ಯ ಪ್ರಧಾನಿಗಳನ್ನು ಧಾರ್ಮಿಕ



ಪರಂಪರೆಗನುಗುಣವಾಗಿ ಅರ್ಚಕರು ಸಾಂಕೇತಿಕ ಪೂಜಾ ವಿಧಿವಿಧಾನ ಹಾಗೂ ಮಂತ್ರೋಚ್ಚಾರಗಳ ಮೂಲಕ ಬರಮಾಡಿಕೊಂಡರು. ಅನಂತರ ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಶ್ರೀಮತಿ ಶೋಭಾ ನಾಗರಾಜ್, ಕುಮಾರಿ ಅನನ್ಯ ನಾಗರಾಜ್, ಶ್ರೀಮತಿ ಲೀಲಾರಾಜೇಶ್ ಗೌಡ ಮತ್ತು ಶ್ರೀಮತಿ ಸುರಭಿ ರಘು ಹಾಗೂ ಡಾ. ಲತಾ ರಾಜಶೇಖರ್ ಅವರು ದೀಪದ ಆರತಿ ಬೆಳಗುವ ಹಾಗೂ ಕುಮಾರಿ ಅನನ್ಯ ನಾಗರಾಜ್ ಸ್ವಾಗತ ನೃತ್ಯದ ಮೂಲಕ ಸಭಾಂಗಣದ ಒಳಕ್ಕೆ ಸ್ವಾಗತಿಸಿದರು. ಶ್ರೀಮತಿ ಶೋಭಾ ನಾಗರಾಜ್ ಪ್ರಧಾನಿಗಳ ಹಣೆಗೆ ಶುಭ ತಿಲಕ ಅರ್ಪಿಸಿದರು.

ವಿಶ್ವದ ನೆಚ್ಚಿನ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರು ಸಭಾಂಗಣದ ಒಳಗೆ ಪ್ರವೇಶಿಸುತ್ತಿದ್ದಂತೆ ಕನ್ನಡ ಕುವರಿಯರು, ಮಹಿಳೆಯರು, ಕಲಾವಿದರು ಕೈಮುಗಿದು, ಹೂಗಳನ್ನು ಸೂಸಿ ಹರ್ಷೋದ್ಗಾರದಿಂದ ಬರಮಾಡಿಕೊಂಡರು.

ಅನಂತರ ದೆಹಲಿ ಕರ್ನಾಟಕ ಸಂಘದ 75 ವರ್ಷಗಳ ಇತಿಹಾಸದಲ್ಲಿ ಕಾರ್ಯಕಾರಿ ಸಮಿತಿಯ ಚುಕ್ಕಾಣಿ ಹಿಡಿದ ಅಧ್ಯಕ್ಷರ ಭಾವ ಚಿತ್ರಗಳ ಹಾಗೂ ಕಳೆದ ಒಂದು ವರ್ಷದಲ್ಲಿ ಸಂಘದಲ್ಲಿ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳ ನೆನಪಿನ ಚಿತ್ರಗಳ ಬಗ್ಗೆ ಪ್ರಧಾನಿ ಮೋದಿಯವರ ಗಮನ ಸೆಳೆದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕರ್ನಾಟಕ ಸಂಘದ ಕುರಿತ ಮಾಹಿತಿ ನೀಡಿದರು.

ಮಾನ್ಯ ಪ್ರಧಾನಿಯವರು ಸಭಾಂಗಣದ ವೇದಿಕೆಯತ್ತ ಬರುತ್ತಿದ್ದಂತೆ, ಪ್ರೇಕ್ಷಕರ ಹರ್ಷೋದ್ಗಾರ ಮುಗಿಲು ಮುಟ್ಟುವಂತೆ ಕೇಳಿ ಬರುತ್ತಿತ್ತು. ಪ್ರೇಕ್ಷಕರತ್ತ ನೋಡಿ ಕೈ ಬೀಸುತ್ತಿದ್ದಂತೆಯೇಎಲ್ಲೆಲ್ಲೂ ಮೋದಿ, ಮೋದಿ ಹೆಸರಿನ ದುಂದುಭಿ ಮೊಳಗುತ್ತಿತ್ತು. ಸಭಾಂಗಣದ ತುಂಬೆಲ್ಲಾ ಹಾರಾಡುತ್ತಿದ್ದ ಭಾವುಟಗಳು, ಕನ್ನಡಿಗರ, ಹರ್ಷೋದ್ಗಾರ, ಸಂಗೀತ ಕಲೆಗಳ ನಿನಾದ....ಎಲ್ಲವುಗಳಿಂದ ಅಕ್ಷರಶಃ ಕರ್ನಾಟಕವೇ ಸೃಷ್ಟಿಯಾಗಿರುವಂತೆ ಭಾಸವಾಗುತ್ತಿತ್ತು.

ವೇದಿಕೆಯ ಮುಂಭಾಗಕ್ಕೆ ಬರುತ್ತಿದ್ದಂತೆಯೇ ಅದಾಗಲೇ ಆಸೀನರಾಗಿದ್ದ ಕರ್ನಾಟಕದ ಸಂತ ಪರಂಪರೆಯ ಪರಮ ಪೂಜ್ಯರುಗಳತ್ತ ಧಾವಿಸಿದ ಸನ್ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪರಮಪೂಜ್ಯ ಶ್ರೀ ನಂಜಾವದೂತ ಸ್ವಾಮೀಜಿ ಅವರು, ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು, ಪರಮಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು, ಪರಮಪೂಜ್ಯ ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು, ಪರಮಪೂಜ್ಯ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ಪರಮಪೂಜ್ಯ ಆದಿ ಚುಂಚನಗಿರಿ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರುಗಳಿಂದ ಅಶೀರ್ವಾದ ಪಡೆದರು. ವಿಶ್ವನಾಯಕ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸಾಂಪ್ರದಾಯಿಕ ವಾದ್ಯ ನಗಾರಿ ಬಾರಿಸುವ ಮೂಲಕ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಸಮಾರಂಭದ ಉದ್ಘಾಟನೆಯನ್ನು ವಿದ್ಯುಕ್ತವಾಗಿ ನೆರವೇರಿಸಿದರು. ಪ್ರಧಾನಿಯವರು ನಗಾರಿ ಬಾರಿಸುವಾಗ ಹೊರಹೊಮ್ಮಿದ ಅದ್ಭುತವಾದ ನಾದಕ್ಕೆ ಇಡೀ ಸಭಾಂಗಣ ಭಾರೀ ಕರತಾಡನದೊಂದಿಗೆ ಸಂಭ್ರಮ ವ್ಯಕ್ತಪಡಿಸಿತು.

ದೆಹಲಿ ಕರ್ನಾಟಕ ಸಂಘದ ಈ ಐತಿಹಾಸಿಕ ಕ್ಷಣ ಚರಿತ್ರೆಯ ಪುಟಗಳಲ್ಲಿ ಅಜರಾಮರವಾಗಿ ಉಳಿಯುವಂತಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಮೊದಲಿಗೆ ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ 'ಭಾರತ ಜನನಿಯ ತನುಜಾತೆ...'ಯನ್ನು ಸಂಗೀತ ನಿನಾದದೊಂದಿಗೆ ದೆಹಲಿ ಕನ್ನಡ ಮಹಿಳೆಯರು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಸಾಂಸ್ಕೃತಿಕ ನೃತ್ಯ ಕಲೆಗಳು ಮುಂದುವರೆದವು.

ದೆಹಲಿ ಕರ್ನಾಟಕ ಸಂಘದ 75 ವರ್ಷಗಳ ಇತಿಹಾಸದಲ್ಲಿಯೇ ಅತ್ಯಂತ ವೈಭವೋಪೇತ ಸಮಾರಂಭ ಎಂಬ ಹೆಗ್ಗಳಿಕೆಯ ಅಮೃತ ಮಹೋತ್ಸವ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಈ ಕಾರ್ಯಕ್ರಮದ ರೂಪುರೇಷೆಗಳನ್ನು ಕುರಿತು ತಮ್ಮದೇ ಆದ ಕನಸನ್ನು ಇಟ್ಟುಕೊಂಡು ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ ಶ್ರಮ, ಸಮಯಗಳನ್ನು ನೀಡಿ, ಕಾರ್ಯಕಾರಿ ಸಮಿತಿ ಹಾಗೂ ಇನ್ನಿತರ ಸಮಾನ ಮನಸ್ಕರೊಡನೆ ಚರ್ಚಿಸಿ ಇಡೀ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿದ ಕೀರ್ತಿಗೆ ಪಾತ್ರರಾದ ಸಿ.ಎಂ. ನಾಗರಾಜ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಸನ್ಮಾನ್ಯ ಪ್ರಧಾನ ಮಂತ್ರಿ, ಮಾನ್ಯ ಮುಖ್ಯಮಂತ್ರಿ, ಪರಮ ಪೂಜ್ಯ ಸಂತವರೇಣ್ಯರು, ಕೇಂದ್ರ ಮಂತ್ರಿಗಳೂ, ಸಂಸದರು, ಸಚಿವರು, ಗೌರವಾಧ್ಯಕ್ಷರೂ, ಹಾಗೂ ಸಭಾಂಗಣದಲ್ಲಿದ್ದ ಅತಿಥಿ ಗಣ್ಯ ಮಾನ್ಯರು ಸೇರಿದಂತೆ ಪ್ರತಿಯೊಬ್ಬ ಕನ್ನಡ ಬಾಂಧವರನ್ನು ಸ್ವಾಗತಿಸಿ ದೆಹಲಿ ಕರ್ನಾಟಕ ಸಂಘದ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಅಮೃತ ಭಾರತಿಗೆ ಕನ್ನಡದಾರತಿ ಎಂಬ ಶೀರ್ಷಿಕೆ ಅಡಿಯಲ್ಲಿ ಕರ್ನಾಟಕದ 75 ಸ್ಥಳಗಳಲ್ಲಿ ಭಾರತ ಸ್ವಾತಂತ್ರ್ಯ ಮಹೋತ್ಸವಕ್ಕೆ ಕರ್ನಾಟಕ ನೀಡಿದ ಕೊಡುಗೆ ಕುರಿತು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕುರಿತು ಸನ್ಮಾನ್ಯ










ಪ್ರಧಾನ ಮಂತ್ರಿಗಳು ತಮ್ಮ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಉಲ್ಲೇಖಿಸಿದ್ದರು. ಈ ಸವಿನೆನಪಿಗಾಗಿ ಸಿದ್ಧಪಡಿಸಿರುವ ಪುಸ್ತಕವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಶ್ರೀ ವಿ. ಸುನಿಲ್ ಕುಮಾರ್ ಅವರಿಂದ ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರಿಗೆ ನೀಡಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳು ದೂರದ ದೆಹಲಿಯಲ್ಲಿ ಕನ್ನಡದ ಕಂಪನ್ನು ಇಷ್ಟು ಚೆನ್ನಾಗಿ ಹರಡುತ್ತಿರುವುದು ನನಗೆ ಹೆಮ್ಮೆ ತಂದಿದೆ ಎಂದು ಶ್ಲಾಘಿಸಿದರು. ಅದಕ್ಕಾಗಿ ಏಳು ಕೋಟಿ ಕನ್ನಡಿಗರ ಪರವಾಗಿ ನಿಮಗೆಲ್ಲ ಅಭಿನಂದಿಸುತ್ತೇನೆ. ಕನ್ನಡ ನಾಡು ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ, ಜ್ಞಾನ, ತಂತ್ರಜ್ಞಾನ, ಆಧ್ಯಾತ್ಮ, ಸಂಸ್ಕೃತಿ ಎಲ್ಲ ರೀತಿಯಿಂದಲೂ ಶ್ರೀಮಂತವಾಗಿದೆ. ಸನ್ಮಾನ್ಯ ಮೋದಿ ಅವರ ಕನಸಾಗಿರುವ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಗೆ ಕರ್ನಾಟಕ ಒಂದು ಟ್ರಿಲಿಯನ್ ಡಾಲರ್ ಪ್ರಗತಿಯನ್ನು ನೀಡುತ್ತದೆ ಎಂದು ಭರವಸೆ ನೀಡಿದರು.

ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಲು ಬೇಕಾದ ಕಾನೂನನ್ನು ಅಂಗೀಕರಿಸಲಾಗಿದೆ, ಹಾಗೆಯೇ ದೆಹಲಿ ಕರ್ನಾಟಕ ಸಂಘಕ್ಕೆ ಅಪಾರ ಕೊಡುಗೆ ನೀಡಿರುವ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ ಎಂದು ಅವರು ಸ್ಮರಿಸಿದರು. ಹಾಗೆಯೆ ಮುಂದಿನ ವರ್ಷ ದಾವಣಗೆರೆಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನಕ್ಕೆ ಸನ್ಮಾನ್ಯ ಪ್ರಧಾನಮಂತ್ರಿಗಳನ್ನು ಏಳು ಕೋಟಿ ಕನ್ನಡಿಗರ ಪರವಾಗಿ ಆಹ್ವಾನ ನೀಡುತ್ತಿದ್ದೇನೆ. ದಯವಿಟ್ಟು ಮಾನ್ಯ ಪ್ರಧಾನಮಂತ್ರಿಗಳು ನಮ್ಮ ಆಹ್ವಾನವನ್ನು ಸ್ವೀಕರಿಸುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು. ನಂತರ ದೆಹಲಿ ಕರ್ನಾಟಕ ಸಂಘ ಕುರಿತು ಸಾಕ್ಷಿ ಚಿತ್ರವನ್ನು ಪ್ರದರ್ಶಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಉದ್ಘಾಟನೆ ಮಾಡಿರುವುದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರನ್ನು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿರುವಂತಹ ನಾಡಿನ ಎಲ್ಲಾ ಪರಮಪೂಜ್ಯರನ್ನ ಅಭಿನಂದಿಸಿದರು. ಇದೊಂದು ಅದ್ಭುತವಾಗಿರುವಂತಹ ಕಾರ್ಯಕ್ರಮವಾಗಿದ್ದು, ಮೂರು ತಿಂಗಳ ಹಿಂದೆ ನಾಡಪ್ರಭು ಕೆಂಪೇಗೌಡ ಅವರ 108 ಅಡಿ ಪ್ರತಿಮೆಯನ್ನು ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರಿನಲ್ಲಿ ಅನಾವರಣಗೊಳಿಸಿದ್ದು ಇನ್ನೂ ಹಸಿರಾಗಿರುವುದರಲ್ಲಿಯೇ 75 ವರ್ಷಗಳನ್ನು ಪೂರೈಸುತ್ತಿರುವಂತಹ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಮರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿರುವುದಕ್ಕೆ ಸಮಸ್ತ ಕನ್ನಡಿಗರ ಪರವಾಗಿ ಪ್ರಧಾನಮಂತ್ರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಕರ್ನಾಟಕದ ಬಗೆಗೆ ಮೂಡಿ ಬಂದ ಸಾಕ್ಷ್ಯಚಿತ್ರ ನಾವು ಈಗಾಗಲೇ ನಾಡು, ನುಡಿಯ ಬಗ್ಗೆ ಕೇಳಿ ನೋಡಿ ತಿಳಿದುಕೊಂಡೆವು ಎಂದೆರು.












ಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ । ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥ ಅಂದರೆ ಇವನು ನನ್ನವನು,ಇವನು ಹೊರಗಿನವನು ಎಂಬ ಎಣಿಕೆ ಸಾಮಾನ್ಯ ಮನುಷ್ಯನಿಗೆ, ಆದುದರಿಂದ ಅವನಿಗೆ ಪಾಪಪುಣ್ಯಗಳ ವಿಚಾರವುಂಟು, ಪರಮತತ್ತ್ವವನ್ನು ಬಲ್ಲ ಉದಾರರಿಗೆ ಜಗತ್ತೆಲ್ಲ ತನ್ನ ಅತ್ಮವಿಸ್ತಾರವೇ ಆಗಿರುತ್ತದೆ.

ಈ ಸಂದರ್ಭದಲ್ಲಿ ವಿಶ್ವದ ನಾನಾ ಭಾಗಗಳಿಂದ ಕನ್ನಡಿಗರು ಬಂದು ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಕಾರ್ಯಕ್ರಮದಲ್ಲಿ ಮುಕ್ತ ಮನಸ್ಸಿನಿಂದ ಭಾಗವಹಿಸಿರುವುದು ಬಹಳ ಸಂತೋಷದ ವಿಷಯವಾಗಿದೆ. ಕಾರ್ಯಕ್ರಮದ ಉದ್ಘಾಟನೆ ಸಂಗೀತದ ಮೂಲಕ ಶುರುವಾಯಿತು. ಬದುಕು ಮಂಗಳಕರವಾಗಬೇಕೆಂದರೆ ಕೇವಲ ತಂತ್ರಜ್ಞಾನ ಮತ್ತು ವಿಜ್ಞಾನಗಳಿಂದಾಗುವುದಿಲ್ಲ.

ಸಂಗೀತಕಲೆಯೊಂದು, ಸಾಹಿತ್ಯಕಲೆಯೊಂದು ।
ಅಂಗಾಂಗ ಭಾವ ರೂಪಣದ ಕಲೆಯೊಂದು ॥
ಸಂಗಳಿಸಲೀ ಕಲೆಗಳನುನಯವು ಚರ್ಯೆಯಲಿ ।
ಮಂಗಳೋನ್ನತ ಕಲೆಯೊ–ಮಂಕುತಿಮ್ಮ ।

ಎನ್ನುವಂತೆ ಕಲೆಗಳ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿಕೊಟ್ಟವರು ಪ್ರಧಾನ ಮಂತ್ರಿಗಳು. ಕಳೆದ ಹನ್ನೆರಡು ತಿಂಗಳುಗಳಿಂದ ನಾಡಿನ ಎಲ್ಲ ಜಿಲ್ಲೆಗಳಿಂದ ವಿವಿಧ ಕಲಾವಿದರು ಬಂದು ಸಂಘದ ವೇದಿಕೆಯಲ್ಲಿ ತಮ್ಮ ಕಲಾಪ್ರದರ್ಶನವನ್ನು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘವು ನಾಡು ನುಡಿಯ ಕಲೆ ಸಂಸ್ಕೃತಿಯನ್ನು ತೋರಿಸುವ ಒಂದು ವೇದಿಕೆಯಾಗಿ ಕೆಲಸವನ್ನು ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಬಂದು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ಕೊಟ್ಟಿರುವುದು ಬಹಳ ಸಂತೋಷದ ವಿಷಯವಾಗಿದೆ. "ಐಡಿಯಾಸ್ ಆರ್ ಗೋಯಿಂಗ್ ಟು ರೂಲ್ ದ ವರ್ಲ್ಡ್" ಎನ್ನುವಂತೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ ಅವರು ಹೇಳಿದ ಹಾಗೆ ಇನ್ನು ಒಂದು ವರ್ಷದಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಹಾಕಿಕೊಂಡಿರುವ ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿಗೆ ಕರ್ನಾಟಕದ್ದು ಒಂದು ಟ್ರಿಲಿಯನ್ ಯು.ಎಸ್. ಡಾಲರ್ ಪಾಲನ್ನು ಕೊಡುವ ಗುರಿ ಇದೆ, ಇದರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದು ನಮ್ಮ ದೇಶದ ಆರ್ಥಿಕತೆಯ ಭದ್ರ ಬುನಾದಿಗೆ ಸಹಾಯಕವಾಗಲಿದೆ ಅಂತಹ ಒಂದು ವಿಶ್ವಾಸವನ್ನು ನಮ್ಮ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ನೀಡಿದ್ದಾರೆ. ಈ ಮಾತುಗಳಿಗೆ ಕನ್ನಡಿಗರ ಪರವಾಗಿ ಮುಖ್ಯಮಂತ್ರಿಗಳನ್ನ ಸ್ವಾಮೀಜಿಗಳು ಅಭಿನಂದಿಸಿದರು. ಜೊತೆಗೆ ಕಲಾವಿದರನ್ನು ಮತ್ತು ಕಾರ್ಯಕ್ರಮಕ್ಕೆ ಬಂದಂತಹ ಜನರನ್ನು ಉದ್ದೇಶಿಸಿ ತಾಯ್ನಾಡಿಗೆ ಮರಳುವ ಸಂದರ್ಭದಲ್ಲಿ ತಮ್ಮ ಮಕ್ಕಳು ಮತ್ತು ವಸ್ತುಗಳೊಂದಿಗೆ ಬಹಳ ವ್ಯವಸ್ಥಿತವಾಗಿ ಹೋಗಿ ಮನೆಗೆ ತಲುಪುವ ವ್ಯವಸ್ಥೆಯನ್ನು ಮಾಡಿಕೊಳ್ಳಿ ಎಂದು ಮನವಿ ಮಾಡಿಕೊಂಡರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ತರಳಬಾಳು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು ಮಹಿಳೆಯರೇ ಮತ್ತು ಮಹನೀಯರೇ ಈ ಕಾರ್ಯಕ್ರಮ ಪ್ರಾರಂಭವಾಗುವುದಕ್ಕಿಂತ ಮುಂಚೆ ತಾವೆಲ್ಲರೂ ಸೇರಿಕೊಂಡು ನಾಡಗೀತೆಯನ್ನು ಹಾಡಿದಿರಿ.





ಹಾಡಿನ ಪ್ರಾರಂಭಿಕ ಸಾಲುಗಳಾದ ಭಾರತ ಜನನಿಯ ತನುಜಾತೆ. ಜಯ ಹೇ ಕರ್ನಾಟಕ ಮಾತೆ. ಇವುಗಳ ಅರ್ಥವನ್ನು ತಿಳಿದುಕೊಂಡಾಗ ನಮ್ಮ ಕನ್ನಡನಾಡು ಭಾರತಮಾತೆಯ ಮಗಳಾಗಿ ಸಲುಹುತ್ತಿದ್ದಾಳೆ. ಕೇಂದ್ರ ಸ್ಥಾನದಲ್ಲಿರುವಂತಹ ಭಾರತ ಮಾತೆ ನಮ್ಮ ಕನ್ನಡದ ಭುವನೇಶ್ವರಿ ತಾಯಿಯಂತೆ ಹಲವಾರು ಮಕ್ಕಳನ್ನು ಸಲುಹುತ್ತಿದ್ದಾಳೆ. ಕರ್ನಾಟಕ ಮಾತೆ ಈ ಸಂದರ್ಭದಲ್ಲಿ ಭಾರತ ಮಾತೆಯ ತವರಿಗೆ ಈ ದಿನ ಬಂದಿದ್ದಾಳೆ. ಸಮಾಜದಲ್ಲಿ ಕೆಟ್ಟ ಕೆಲಸಗಳನ್ನು ಭಾರತಮಾತೆ ಯಾವತ್ತು ಸಹಿಸುವುದಿಲ್ಲ ಎನ್ನುವ ಸಂದೇಶವನ್ನು ಇಲ್ಲಿ ಪ್ರದರ್ಶನವಾದ ಸಿಂಹನೃತ್ಯದ ಮೂಲಕ ಕಂಡು ಬಂದಿದೆ. ನಮ್ಮ ದೇಶವನ್ನ ವಿಶ್ವದಲ್ಲೇ ಒಂದು ಉನ್ನತ ಸ್ಥಾನದಲ್ಲಿ ಗುರುತಿಸಿ ಅದನ್ನ ಹಿಮಾಲಯದ ಎತ್ತರಕ್ಕೆ ತಂದಿಟ್ಟ ನಮ್ಮ ನಿಮ್ಮೆಲ್ಲರ ಮೆಚ್ಚಿನ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿ ಅವರು ದೇಶವನ್ನು ಹೆಮ್ಮೆಯಿಂದ ಮುನ್ನಡೆಸುತ್ತಿದ್ದಾರೆ. ಮೋದಿಜಿಯವರು ಬಂದ ಮೇಲೆ ಭಾರತವು ಇಡೀ ವಿಶ್ವದ ದೊಡ್ಡಣ್ಣನಾಗುವಂತೆ ಮೋಡಿ ಮಾಡಿದ್ದಾರೆ. ನಮ್ಮ ಪ್ರಧಾನಿಗಳು ಕೇವಲ ನಮ್ಮ ರಾಷ್ಟ್ರಕ್ಕೆ ಅಲ್ಲ ಇಡೀ ಜಗತ್ತಿಗೆ ಒಬ್ಬ ದೊಡ್ಡ ಅಣ್ಣನಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು ಗರ್ವದಿಂದ ಹೇಳಲು ಇಷ್ಟಪಡುತ್ತೇನೆ ಎಂದರು. ಪ್ರಧಾನಮಂತ್ರಿಗಳು ಎಷ್ಟೋ ಸಾರಿ ಕರ್ನಾಟಕಕ್ಕೆ ಬಂದಿದ್ದರು ಕೂಡ ಇಲ್ಲಿವರೆಗೂ ತಮ್ಮೊಂದಿಗೆ ಭೇಟಿಯಾಗಿರಲಿಲ್ಲ ಆದರೆ ಈಗ ಭೇಟಿಯಾಗುವ ಮೂಲಕ ಮಾತುಕತೆಯಾಗುತ್ತಿದೆ ಎಂದರು. ರಾಮಾಯಣವನ್ನು ನಾಲ್ಕೇ ನಾಲ್ಕು ಸಾಲುಗಳಲ್ಲಿ ಹೇಳುವುದಾದರೆ ದಶರಥನ ಕಂದ ರಾವಣನ ಕೊಂದ ಸೀತೆಯನ್ನು ತಂದ ಅಯೋಧ್ಯೆಯಲಿ. ರಾಮಾಯಣದ ಕವಿತೆಯ ಸಾಲುಗಳನ್ನು ಹಿಂದಿಯಲ್ಲಿ ಅನುವಾದಿಸಿ ಅರ್ಥಪೂರ್ಣವಾಗಿ ಪ್ರಧಾನಮಂತ್ರಿಗಳಿಗೆ ಅರ್ಥೈಸಿದರು. ನಮ್ಮ ಭಾಷೆಯಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯ ಹೇರಳವಾಗಿರುವಂತೆ ನಮ್ಮ ಪ್ರಧಾನಮಂತ್ರಿಗಳು ಬಸವಣ್ಣನವರ ವಚನ ಸಾಹಿತ್ಯವನ್ನು ಅತಿ ಹೇರಳವಾಗಿ ಇಡೀ ವಿಶ್ವಕ್ಕೆ ತಮ್ಮ ಮಾತುಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಕರ್ನಾಟಕ ಸರ್ಕಾರ ಮತ್ತು ದೆಹಲಿ ಕರ್ನಾಟಕ ಸಂಘವು ಸೇರಿ ಸಾವಿರಾರು ಕಲಾವಿದರನ್ನ ನಾಡು ನುಡಿಯ ಕಲಾ ಪ್ರದರ್ಶನವನ್ನು ರಾಜಧಾನಿಯಲ್ಲಿ ಬಿಂಬಿಸಲು ಇಂದು ಕರೆತಂದಿದ್ದಾರೆ. ಇದಕ್ಕಾಗಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಮತ್ತು ಸಂಘದ ಅಧ್ಯಕ್ಷರನ್ನು ಅಭಿನಂದಿಸಿದರು.

ಅಮೆರಿಕದಲ್ಲಿ ನೆಲೆಸಿರುವ ಕನ್ನಡತಿಯೋರ್ವರು ಬರೆದ ಸಾಲುಗಳನ್ನು ನೆನೆಸಿಕೊಂಡ ಸ್ವಾಮೀಜಿಗಳು ಬೆಂಗಳೂರು ಬಿಟ್ಟು ಭಾರತ ಬಿಟ್ಟು ಬಂದು ವಾಸಿಸಿದ್ದಾಯಿತು ಇಲ್ಲಿ. ದೊಡ್ಡ ದೇಶದಾಗೆ ದುಡ್ ಹಂಚ್ಕೊಂಡು ಮನಸ್ಸು ಹೋಗುತ್ತೆತೆ ಅಲ್ಲಿ. ಕೆಲಸ ಸಿಗದೇ ದುಡ್ಡಿಲ್ಲ ಅಂತ ಬಂದ್ವಿ ಇಲ್ಲಿ. ಕೆಲಸ ಇದ್ದರೂ ದುಡ್ಡು ಇದ್ರೂ ನಮ್ಮೋರಿಲ್ಲ ಇಲ್ಲಿ. ಅಲ್ಲಿದ್ದವರಿಗೆ ಇಲ್ಲಿ ಬರಬೇಕು ಅಂತ ಏನೋ ದೊಡ್ಡ ಕನಸು. ಇಲ್ಲಿದುಕೊಂಡು ಏನಾಯ್ತು ನನಗೆ ಪೆಚ್ಚು. ಮೈಸೂರ್ ಸೀರೆ, ಮಲ್ಲಿಗೆ ಆಸೆ ನಮ್ಗೆ, ಮೈಸೂರು ನಲ್ಲೇ ಇದ್ ಹುಡುಗಿಗ್ ಬೇಕು ಪ್ಯಾಂಟಿನ ದಿರಿಸು. ಐಸ್‌ಕ್ರೀಮ್, ಕೇಕ್, ಚಾಕಲೇಟ್ ಬೇಕು ಅಲ್ಲಿ. ಇಡ್ಲಿ ದೋಸಾ ಬೋಂಡಾ ನೆನ್ಸಿ ಬಾಯಲ್ ನೀರು ಇಲ್ಲಿ. ಕನ್ನಡ ಕಲಿಸಬೇಕು ಅಂತ ನಮಗೊದ್ದಾಟ ಇಲ್ಲಿ. ಹುಟ್ಟುವ ಮೊದ್ಲೇ ಕಾನ್ವೆಂಟ್‌ಗೆ ಹಾಕಿ ಇಂಗ್ಲಿಷ್ ಕಲಸ್ತಾರ್ ಅಲ್ಲಿ. ಅಲ್ಲಿ ಇಲ್ಲಿ ಎಲ್ಲೇ ಇರಲಿ ಕನ್ನಡ ಭಾಷೆನೆ ನನ್ನ ತವರು. ಎಂಬ ಕನ್ನಡದ ಕವಿತೆಯ ಸಾಲುಗಳೊಂದಿಗೆ ಶ್ರೀಗಳು ಹೊರನಾಡು ಕನ್ನಡಿಗರು ಕನ್ನಡನಾಡನ್ನು ಆರಾಧಿಸುವ ಪರಿಯನ್ನು ತಿಳಿಸಿ. ತಮ್ಮ ಭಾಷಣದ ಮೂಲಕ ಅಭಿಮಾನಿಗಳಿಗೆ ಹಾಗೂ ಕಾರ್ಯಕ್ರಮದ ಸಂಘಟನಕಾರರಿಗೆ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಿಗೆ, ಕಲಾವಿದರಿಗೆ ಅಭಿನಂದನೆ ಸಲ್ಲಿಸಿದರು.

# ದೆಹಲಿ ಕರ್ನಾಟಕ ಸಂಘದ ಏಳಿಗೆಗಾಗಿ ದುಡಿದ, ನೆರವು ನೀಡಿದ, ಮಹನೀಯರಿಗೆ ಗೌರವ ಸನ್ಮಾನ

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ 2ನೇ ದಿನವೂ ಕೂಡ ಬೆಳಗಿನಿಂದ ರಾತ್ರಿವರೆಗೂ ಕನ್ನಡ ಗೀತೆಗಳು, ನೃತ್ಯಗಳು, ಜಾನಪದ ಸಂಗೀತ ವಾದ್ಯಗಳು, ಸಾಹಿತ್ಯ ಸಂವಾದ, ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಯಲ್ಲಿ ನಿರ್ಣಾಯಕ ಕೊಡುಗೆ ನೀಡಿದವರು, ಹಿತೈಷಿಗಳು ಮತ್ತು ಹಿರಿಯ ಕನ್ನಡಿಗರಿಗೆ ಸನ್ಮಾನ, ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಭರಪೂರ ದೇಣಿಗೆ ನೀಡಿದ ಅಭಿಮಾನಿಗಳಿಗೆ ಗೌರವಾರ್ಪಣೆ, ಸುಪ್ರಸಿದ್ಧ ಗಾಯಕ ವಿಜಯ ಪ್ರಕಾಶ್ ಮತ್ತು ತಂಡದವರಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ. ಹೀಗೆ ಹತ್ತು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಇಡೀ ಸಮಾರಂಭಕ್ಕೆ ವೈಭವದ ಮೆರುಗು ಬಂದಿತ್ತು.

ಬೆಳಿಗ್ಗೆ ಸುಮಾರು ಹತ್ತೂವರೆ ಗಂಟೆಗೆ ವಿದುಷಿ ತನುಜಾರಾಜ್ ಮತ್ತು ತಂಡದಿಂದ ಶಂಭೋ ಶಿವ ಶಂಭೋ ಸ್ವಯಂಭೋ ಹಾಡು, ಸುಗ್ಗಿ ಕಾಲ ಹಿಗ್ಗಿ ಬಂದಿತೋ ನಮ್ಮ ಬಾಳಿನಲ್ಲಿ ಭಾಗ್ಯ ತಂದಿತೋ ಜನಪದ ಗೀತೆ ಸೇರಿದಂತೆ ಇನ್ನೂ ಅನೇಕ ಕನ್ನಡ ಗೀತೆಗಳಿಗೆ ನೃತ್ಯವನ್ನು ಪ್ರದರ್ಶಿಸುವ ಮೂಲಕ ಆರಂಭಗೊಂಡ ಕಾರ್ಯಕ್ರಮ ರಾತ್ರಿ ಸುಮಾರು ಹನ್ನೊಂದು ಗಂಟೆಯವರೆಗೂ ಕನ್ನಡದ ಕಲರವವನ್ನು ಮೊಳಗಿಸಿ ಎಲ್ಲೆಲ್ಲೂ ಕನ್ನಡದ ಕಂಪನ್ನು ಸೂಸಿತ್ತು.

ಅನಂತರ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟ ತಂಡದವರಿಂದ ಸರಿಸುಮಾರು 225 ಜನ ಈ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವಕ್ಕೆ ಆಗಮಿಸಿದರು ಬಾಲ್ ರಾಜ್ ಬೀದರ್ ಅವರ ತಂಡದವರಿಂದ ಹಾಗೂ ವಿಜಯಕುಮಾರ್ ಸೋನಾರೆ ಹಾಗೂ ಪ್ರಕಾಶ್ ಅಂಗಡಿ ಅವರ ನೇತೃತ್ವದಲ್ಲಿ ಚರ್ಮ ವಾದ್ಯದ ಕಲಾ ಪ್ರದರ್ಶನವನ್ನು ನೀಡಿದ್ದು, ತಮಟೆ ಮಂಜು ತಂಡದವರಿಂದ ತಮಟೆವಾದನ, ಇಡೀ ಕರ್ನಾಟಕವನ್ನು ಸಮಗ್ರವಾಗಿ ಪ್ರತಿನಿಧಿಸುವ ಅವಕಾಶ ಒದಗಿಸಿದ್ದು ಅಮೃತ ಮಹೋತ್ಸವದ ವಿಶೇಷವಾಗಿತ್ತು. ಈ ವೇದಿಕೆಯಲ್ಲಿ ಕರ್ನಾಟಕದ ಹಳ್ಳಿಗಳಲ್ಲಿರುವ ಕಲೆಯನ್ನು ಗುರುತಿಸಿ ಕಲಾ ಪ್ರದರ್ಶನ ಮಾಡಲು ಅವಕಾಶವನ್ನು ಮಾಡಿಕೊಟ್ಟಿರುವುದು ಎಲ್ಲರಿಗೂ ತುಂಬಾ ಸಂತೋಷ ತಂದಿತ್ತು.

ಇದಾದ ನಂತರ ಲಕ್ಷ್ಮಣ್ ಗುತ್ತೇದಾರ್ ಯಾದಗಿರಿ ಜಿಲ್ಲೆಯ ತಂಡದವರಿಂದ ದುಂದುಮೆ ಹಾಡುಗಳು, ನರಸಣ್ಣ ದನ್ನಿ ರಾಯಚೂರು ಜಿಲ್ಲೆ ತಂಡದವರಿಂದ ತತ್ವಪದಗಳನ್ನು ಹಾಡಿಸಲಾಯಿತು. ಬೆಂಗಳೂರಿನಿಂದ ಆಗಮಿಸಿದಂತ ವಿದುಷಿ ಲತಾ ಲಕ್ಷ್ಮಿ ಸಂಯೋಗ ಕಲಾ ಶಾಲೆ ತಂಡದವರಿಂದ ಕಲಾ ಪ್ರದರ್ಶನವನ್ನು ನೀಡಿದರು ನಂತರ ಈ ತಂಡವು ತಮ್ಮ ಕೈಯಿಂದನೇ ಬಿಡಿಸಿದ ಪ್ರಧಾನಿ ಮೋದಿ ಅವರ ಹಾಗೂ ಅವರ ತಾಯಿಯ ಭಾವಚಿತ್ರವನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರಿಗೆ ಉಡುಗೊರೆಯಾಗಿ ನೀಡಿದರು.

ಅನಂತರ, ಕನ್ನಡದ ಕಲಿಗಳು ರಂಗ ವಿಜಯ ತಂಡದವರಿಂದ ಟಿ. ಲಕ್ಷ್ಮೀ ನಾರಾಯಣ್‌ರವರು ರಚಿಸಿದ ಶ್ರೀ ಮಾಲೂರು ವಿಜಯವರ ನಿರ್ದೇಶನದ ಕನ್ನಡ ನಾಡಿಗಾಗಿ ಹೋರಾಡಿದ ಕರುನಾಡ ವೀರ ಕಲಿಗಳ ಪರಿಚಯವನ್ನು ರೂಪಕದ ಮೂಲಕ ಪ್ರದರ್ಶಿಸಿದ್ದು ಕನ್ನಡ ನಾಡಿನ ಎಲ್ಲ ಶೂರ ವೀರರನ್ನು ನೆನಪಿಸುತ್ತಿತ್ತು.

ನಂತರ ಕುಂದಣ ನೃತ್ಯಾಲಯ ಕುಶಾಲನಗರ ಇವರಿಂದ ಕೊಡಗಿನ ಶೈಲಿಯ ನೃತ್ಯರೂಪಕ ಪ್ರದರ್ಶನಗೊಂಡಿತು.

ನಂತರ ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಅಪ್ಲೈಡ್ ಸೈನ್ಸ್‌ನ ಒಂದು ಕಿರು ಚಿತ್ರವನ್ನು ಪ್ರದರ್ಶಿಸಲಾಯಿತು. ನಂತರ ನಡೆದ 'ವರ್ತಮಾನದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ' ಕುರಿತ ಸಂವಾದದಲ್ಲಿ ಕನ್ನಡ ನಾಡಿನ ಹೆಸರಾಂತ ಹಿರಿಯ ಸಾಹಿತಿಗಳು, ಕವಿಗಳು, ಲೇಖಕರು, ಕವಯತ್ರಿಯರು, ನಿರ್ದೇಶಕರು ಮತ್ತು ಬರಹಗಾರರು ಪಾಲ್ಗೊಂಡಿದ್ದರು. (ಸಾಹಿತ್ಯ ಸಂವಾದ ಕುರಿತು ಪ್ರತ್ಯೇಕ ವಿಸ್ತೃತ ವರದಿ ನಂತರದ ಪುಟಗಳಲ್ಲಿ..)

ಇದಾದ ನಂತರ ಶ್ರೀ ಕೆರೆಮನೆ ಶಿವಾನಂದ ಹೆಗಡೆಯವರ ತಂಡದವರಿಂದ 'ಪಂಚವಟಿ' ಯಕ್ಷಗಾನ ಪ್ರದರ್ಶನಗೊಂಡಿತು. ಉಡುಪಿ, ಮಂಗಳೂರು ದಕ್ಷಿಣ ಕನ್ನಡದಲ್ಲಿ ಯಕ್ಷಗಾನಕ್ಕೆ ಪ್ರಸಿದ್ಧಿಯಾದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಇವರಿಂದ ಮೂಡಿ ಬಂದ ಯಕ್ಷಗಾನ ಎಲ್ಲ ಕನ್ನಡಿಗರನ್ನು ಮನಸೂರೆಗೊಂಡು ಮೆಚ್ಚುಗೆ ಪಡೆಯಿತು.

ನಂತರ ಓಷನ್ ಹಾರ್ಟ್ ಬ್ರೇಕರ್ಸ್ ತಂಡದವರಿಂದ ಸುಂದರವಾದ ಗೀತ ನೃತ್ಯಗಳು ಮೂಡಿಬಂದವು. ಈ ತಂಡದ ಗಾಯಕರ ಸುಂದರವಾದ ಗೀತೆಗಳಿಗೆ ಇದೇ ತಂಡದ ಕಲಾವಿದರಿಂದ ಅದ್ಭುತ ನೃತ್ಯಗಳು ಪ್ರೇಕ್ಷಕರ ಗಮನಸೆಳೆದವು.

ಕೊನೆಯದಾಗಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಒಕ್ಕೂಟದ ತಮ್ಮಣ್ಣ ಮತ್ತು ತಂಡದವರಿಂದ ಕೊಡಗಿನ ವಿಶಿಷ್ಟವಾದ ಶೈಲಿಯ ಕೊಡವ ನೃತ್ಯ (ಉಮ್ಮತ್ತಾಟ) ವನ್ನು ಮಾಡಿ ಪ್ರೇಕ್ಷಕರ ಮನರಂಜಿಸಿದರು.



ದೆಹಲಿ ಕರ್ನಾಟಕ ಸಂಘಕ್ಕೆ ಅಪರಿಮಿತ ಸೇವೆ ಸಲ್ಲಿಸಿದವರನ್ನು, ಕೊಡುಗೈ ದಾನಿಗಳನ್ನು ಸನ್ಮಾನಿಸಿದ ಕ್ಷಣಗಳು

ಸಾಂಸ್ಕೃತಿಕ ಕಾರ್ಯಕ್ರಮಗಳ ತರುವಾಯ ದೆಹಲಿ ಕರ್ನಾಟಕ ಸಂಘದ ಏಳಿಗೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದ ದೆಹಲಿ ಕನ್ನಡಿಗರು ಮತ್ತು ಅಮೃತ ಮಹೋತ್ಸವ ಸಮಾರಂಭಕ್ಕೆ ಉದಾರವಾಗಿ ಧನ ಸಹಾಯ ಮಾಡಿ ಸಹಕಾರ ನೀಡಿದ ಉದ್ಯೋಗಪತಿಗಳು, ದಾನಿಗಳು, ವಿದೇಶದಲ್ಲಿರುವ ಕನ್ನಡ ಸಂಘಗಳ ಪದಾಧಿಕಾರಿಗಳು ದೇಶದ ನಾನಾ ರಾಜ್ಯದ ಕನ್ನಡ ಸಂಘದ ಪದಾಧಿಕಾರಿಗಳು ಹಾಗು ದೆಹಲಿ ಕನ್ನಡ ಸಂಘದ ಮಾಜಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳಿಗೆ ಹಾಗೂ ದೆಹಲಿ ಕರ್ನಾಟಕ ಸಂಘದ ಏಳಿಗೆಗೆ ಸಕ್ರಿಯವಾಗಿ ದುಡಿದಂತಹ ಹಿರಿಯ ಕನ್ನಡಿಗರಿಗೆ ಗೌರವ ಪೂರಕವಾಗಿ ವೇದಿಕೆಗೆ ಬರಮಾಡಿಕೊಂಡು ನೆನಪಿನ ಕಾಣಿಕೆ, ಪದಕ ನೀಡಿ ಸನ್ಮಾನಿಸಲಾಯಿತು.

**ಅಭಿನಂದನೆ ಸ್ವೀಕರಿಸಿದ ಪ್ರಮುಖರು**

**ಶ್ರೀ ಜಯರಾವ್ ರಾಯ್‌ಪುರ**–ಐ.ಆರ್.ಎಸ್., ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಹಾಗೂ ಹೆಚ್ಚುವರಿ ಆಯುಕ್ತರು (ಹಣಕಾಸು), ಬಿಬಿಎಂಪಿ ಬೆಂಗಳೂರು

**ಶ್ರೀ ಸದನ್ ದಾಸ್,** ಅಧ್ಯಕ್ಷರು ದುಬೈ ಕನ್ನಡ ಸಂಘ.

**ಡಾ. ಹಳೆಕೋಟೆ ಎನ್. ವಿಶ್ವಾಮಿತ್ರ,** ಮಾಜಿ ಅಧ್ಯಕ್ಷರು ಅಮೆರಿಕ ಕನ್ನಡ ಕೂಟ

**ಶ್ರೀ ಮಹೇಶ ಗೌಡ,** ಅಧ್ಯಕ್ಷರು, ಕತಾರ್ ಕರ್ನಾಟಕ ಸಂಘ

**ಶ್ರೀ ರಾಜಕುಮಾರ,** ಮಾಜಿ ಅಧ್ಯಕ್ಷರು ಬೆಹರೀನ್ ಕನ್ನಡ ಸಂಘ ಮತ್ತು ಬಿಲ್ಲವ ಸಮಾಜ ದುಬೈ ಅನಿವಾಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

**ಶ್ರೀ ಸುರೇಶ್ ರಾವ್ ನೇರಂಬಳ್ಳಿ,** ಪ್ರಧಾನ ಕಾರ್ಯದರ್ಶಿಗಳು ಕುವೈತ್ ಕನ್ನಡ ಕೂಟ.

**ಶ್ರೀ ಸಿ.ಎ. ರಾಮನಂದ್ ಪ್ರಭು,** ಚಾರ್ಟೆಡ್ ಅಕೌಂಟೆಂಟ್

**ಶ್ರೀಮತಿ ಉಮಾ ವಿದ್ಯಾಧರ,** ಸ್ಥಾಪಕ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರು ದುಬೈ,

**ಶ್ರೀ ಅರುಣ್ ಕುಮಾರ್ ಎಂ.ಕೆ.,** ಉಪಾಧ್ಯಕ್ಷರು ದುಬೈ,

**ಶ್ರೀ ಕೆ. ರಾಜೇಶ್ ರಾವ್,** ಅಧ್ಯಕ್ಷರು, ಚೆನ್ನೈ ಕನ್ನಡ ಸಂಘ

**ಶ್ರೀ ಗುರುಪ್ರಸಾದ್ ಕುಂಡಂತಾಯಾ,** ಪ್ರಧಾನ ಕಾರ್ಯದರ್ಶಿಗಳು, ಚೆನ್ನೈ ಕನ್ನಡ ಸಂಘ

**ಶ್ರೀ ಗಂಗಾಧರ್ ಎಚ್. ಹೂಗಾರ್,** ಅಧ್ಯಕ್ಷರು ಚಂಡೀಗಢ ಕನ್ನಡ ಸಂಘ

**ಶ್ರೀ ಶ್ರವಣಕುಮಾರ್ ಆರ್.ಆರ್.**

**ಶ್ರೀ ಬಾಬು ಶಿವರಾಂ ಅಲ್ಮೆಲ್,** ಅಧ್ಯಕ್ಷರು, ಅಹಮದಾಬಾದ್ ಕನ್ನಡ ಸಂಘ

**ಶ್ರೀಮತಿ ಶಶಿ ರವೀಶ್ ರಾವ್,** ಸಕ್ರೀಯ ಕನ್ನಡ ಕಾರ್ಯಕರ್ತೆ ಅಹಮದಾಬಾದ್ ಕನ್ನಡ ಸಂಘ

**ಶ್ರೀ ಶಿವರಾಮ ಕಾರಂತ,** ಅಧ್ಯಕ್ಷರು, ಕಾಸರಗೋಡು ಕನ್ನಡ ಸಂಘ.

**ಶ್ರೀ ಎಸ್. ಕೃಷ್ಣ ಭಟ್,** ಮಾಜಿ ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ

**ಶ್ರೀ ಎಸ್.ಜಿ. ಹೆಗಡೆ,** ಮಾಜಿ ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ

**ಶ್ರೀ ಸಿ.ವಿ. ಗೋಪಿನಾಥ್,** ಮಾಜಿ ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

**ದಿ. ಶ್ರೀ ಗೋಪಾಲ ಶಾಸ್ತ್ರೀ,** ಮಾಜಿ ಅಧ್ಯಕ್ಷರು, ದೆ.ಕ.ಸಂಘ (ಕುಟುಂಬದ ಸದಸ್ಯರು ಬಂದು ಸನ್ಮಾನ ಸ್ವೀಕರಿಸಿದರು)

**ದಿ. ಎಸ್.ವಿ. ಕೃಷ್ಣ ಮೂರ್ತಿ ರಾವ್,** ಮಾಜಿ ಅಧ್ಯಕ್ಷರು, ದೆ.ಕ.ಸಂಘ (ಅವರ ಮಗ ಶ್ರೀ ಶ್ರೀನಾಥ್‌ರವರು ಬಂದು ಸನ್ಮಾನ ಸ್ವೀಕರಿಸಿದರು)

**ಶ್ರೀಮತಿ ಅನ್ನಪೂರ್ಣ ಮೇಟಿ,** ದಿವಂಗತ ಬಸವರಾಜ್ ಮೇಟಿ ಅವರ ಧರ್ಮ ಪತ್ನಿ, ಮಾಜಿ ಖಜಾಂಚಿ, ದೆಹಲಿ ಕರ್ನಾಟಕ ಸಂಘ

**ಶ್ರೀ ಜಯಪ್ರಕಾಶ್ ಗೌಡ,** ಅಧ್ಯಕ್ಷರು, ಮಂಡ್ಯ ಕರ್ನಾಟಕ ಸಂಘ

**ಶ್ರೀ ವೆಂಕಟೇಶ್,** ಈ ಸಂಜೆ ಸಮೂಹ ಅಧ್ಯಕ್ಷರು

**ಶ್ರೀ ಬಸವರಾಜ್ ಎಸ್. ಕಲ್ಲೂರು**

**ಶ್ರೀ ಎನ್.ಎ. ಮಾಧವ**

**ಡಾ. ಅಹಲ್ಯಾ ಚಿಂತಾಮಣಿ**

**ಶ್ರೀ ಚೆನ್ನು ಎಸ್ ಮಠದ**

**ಶ್ರೀ ಲಕ್ಷ್ಮಣ ಮಲ್ಯ**

**ಶ್ರೀ ಇ.ಸಿ. ವಿದ್ಯಾಸಾಗರ್**

**ಶ್ರೀ ಶೇಖರ್ ಎನ್. ಬಂಗೇರ**

**ಶ್ರೀ ವಿ.ವಿ. ಬಿರಾದರ**

**ಡಾ. ಬಿ.ಟಿ. ಚಿದಾನಂದ ಮೂರ್ತಿ**

**ಶ್ರೀ ಶಶಿಕುಮಾರ್**

**ಡಾ. ವೀರಸ್ವಾಮಿ ರೆಡ್ಡಿ**

**ಶ್ರೀ ರೋಹನ್ ಪ್ರೇಮಚಂದ್ರ ಸಾಗರ್,** ಮಹಾತ್ಮ ಗಾಂಧಿ ವಿದ್ಯಾಪೀಠ ಟ್ರಸ್ಟ್ ಬೆಂಗಳೂರು.

**ಶ್ರೀ ಎಸ್.ಎ. ಪುಟ್ಟರಾಜು,** ಚಲನಚಿತ್ರ ನಿರ್ಮಾಪಕರು

**ಶ್ರೀ ಎಂ.ಸಿ. ಶಿವಕುಮಾರ್,** ಪೂರ್ಣಿಮಾ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್, ಬೆಂಗಳೂರು

**ಶ್ರೀ ಮುನಿಮಾರಪ್ಪ,** ರಾಷ್ಟ್ರ ಉಪಾಧ್ಯಕ್ಷರು, ಭೋವಿ ಸಮಾಜ ಬೆಂಗಳೂರು

**ಶ್ರೀ ಕೃಷ್ಣಪ್ಪ ಬಿ,** ಪ್ಯಾರಾವೌಂಟ್ ಅಸೋಸಿಯೇಟ್ ಬೆಂಗಳೂರು

**ಡಾ. ಎಂ.ಬಿ. ಬಸವರಾಜ್,** ಮ್ಯಾನೇಜಿಂಗ್ ಡೈರೆಕ್ಟರ್, ಶ್ರೀ ನಂದಿಗ್ರೂಪ್ ಆಫ್ ಕಂಪನೀಸ್, ಬೆಂಗಳೂರು

**ಶ್ರೀ ವೆಂಕಟೇಶ್ ದೊಡ್ಡಮನೆ,** ಜೆಡಿಎಸ್, ಮುಖಂಡರು

**ಶ್ರೀ ಕನ್ನಡವೇ ಸತ್ಯ ರಂಗಣ್ಣ**

**ಶ್ರೀ ಡಿ ತಿಮ್ಮಪ್ಪ**

**ಶ್ರೀ ಪುಟ್ಟೇಗೌಡರು**

**ಶ್ರೀ ಕೃಷ್ಣೇಗೌಡರು**

**ಶ್ರೀ ಶ್ರೀಧರ್**

**ಶ್ರೀ ಮರಿಮಲ್ಲಯ್ಯ**

**ಶ್ರೀ ರಾಜೇಶ್ ಗೌಡ**

**ಶ್ರೀಮತಿ ಲೀಲಾ ರಾಜೇಶ್ ಗೌಡ**

**ಶ್ರೀ ಮಾಲತೇಶ್ ಭಟ್ಟ**

**ಶ್ರೀ ಸುದರ್ಶನ್**

**ಶ್ರೀ ವೆಂಕಟರಮಣ ಗೌಡ್ರು**

**ಡಾ. ಶೈಲಜಾ** ಸಿ ವಿ

**ಶ್ರೀ** ಸಿ.ಜಿ. **ಮಹಿಮಯ್ಯ**

**ಶ್ರೀ** ಸಿ.ವಿ. **ದೇವರಾಜ್**

ಇನ್ನು ಅನೇಕ ಗೌರವಾನ್ವಿತ ಅತಿಥಿಗಳನ್ನು ಈ ವೇದಿಕೆಯ ಮೇಲೆ ಸನ್ಮಾನಿಸಲಾಯಿತು.

ಅನಂತರ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವಕ್ಕೆ ಬಂದು ಎಲ್ಲರನ್ನೂ ಮನರಂಜಿಸಿದ ಕನ್ನಡ ನಾಡಿನ ಸಾವಿರಕ್ಕೂ ಹೆಚ್ಚು ಕಲಾವಿದರನ್ನು ವೇದಿಕೆಗೆ ಕರೆದು ಶ್ರೀ ಟಿ.ಎಸ್. ನಾಗಾಭರಣ ಖ್ಯಾತ ನಿರ್ದೇಶಕರು, ಶ್ರೀ ಸಿ.ಎಂ. ನಾಗರಾಜ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಹಾಗೂ ಶ್ರೀ ಆರ್. ರೇಣುಕುಮಾರ್ ಪ್ರಧಾನ ಕಾರ್ಯದರ್ಶಿಗಳು ಸೇರಿ ಪ್ರಮಾಣ ಪತ್ರ ಮತ್ತು ಪದಕವನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾನಾ ಕಲಾ ಪ್ರಕಾರಗಳನ್ನು ಪ್ರದರ್ಶನ ನೀಡಿದ ಸಾವಿರಕ್ಕೂ ಹೆಚ್ಚು ಕಲಾವಿದರು ಅವರದ್ದೇ ಆದ ವೇಷಭೂಷಣ ಧರಿಸಿದ್ದ ದೃಶ್ಯ ಮನಮೋಹಕವಾಗಿತ್ತು.

# ಅಮೃತ ಮಹೋತ್ಸವ ಸಮಾರಂಭದ ಗೌರವಾಧ್ಯಕ್ಷರಿಂದ ಸಮಾರೋಪ ನುಡಿ



ದೆಹಲಿ ಕರ್ನಾಟಕ ಸಂಘದ ಎರಡು ದಿನಗಳ ಅದ್ದೂರಿ ಅಮೃತ ಮಹೋತ್ಸವದ ಕಾರ್ಯಕ್ರಮದ ಗೌರವ ಅಧ್ಯಕ್ಷತೆಯನ್ನು ವಹಿಸಿದ್ದಂತಹ ನಮ್ಮೆಲ್ಲರ ನೆಚ್ಚಿನ ನಾಯಕರಾದ ಮಾಜಿ ಸಚಿವರೂ, ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ, ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಸಿ.ಟಿ. ರವಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಬೆಂಬಲವಾಗಿ ನಿಂತು ಉತ್ತಮ ಸಲಹೆಗಳನ್ನು ನೀಡುತ್ತಾ ಇಂತಹ ಮೇರು ಕಾರ್ಯಕ್ರಮವು ಯಶಸ್ವಿಯಾಗಲು ಕಾರಣಕರ್ತರಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಇಂತಹ ಅದ್ದೂರಿ ಕಾರ್ಯಕ್ರಮಕ್ಕೆ ಅವರ ಸಲಹೆ, ಸಹಕಾರ ಮತ್ತು ಅವರ ನೇತೃತ್ವವು ಎಲ್ಲರಿಗೂ ಮುನ್ನಡೆಸುವಂತಹ ಧೈರ್ಯವನ್ನು ವಿಶ್ವಾಸವನ್ನು ಇಮ್ಮಡಿಗೊಳಿಸಿತ್ತು. ಗೌರವಾಧ್ಯಕ್ಷರಾದ ಶ್ರೀಯುತ ಸಿ.ಟಿ. ರವಿ ಅವರು ವೇದಿಕೆ ಮೇಲೆ ಆಗಮಿಸಿ ನುಡಿದ ಕೆಲವು ಮಾತುಗಳು ಇಂತಿವೆ, ನಿನ್ನೆ ಪ್ರಧಾನಮಂತ್ರಿಗಳ ಮಾತು ಕೇಳಿದ ಮೇಲೆ ಸ್ವಾಮೀಜಿಯವರ ಆಶೀರ್ವಚನದ ಮಾತುಗಳನ್ನು ಕೇಳಿದ ನಂತರ ಮತ್ತೇನು ಮಾತನಾಡಬೇಕು ಅಂತ ಅನಿಸುತ್ತಿಲ್ಲ ಮತ್ತೆ ಅವಶ್ಯಕತೆನೂ ಇಲ್ಲ. ಔಪಚಾರಿಕವಾಗಿ ಮಾತ್ರ ಕೆಲವು ಸಂಗತಿಗಳನ್ನು ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ, ನೋಡಿ ಯೋಗಾ ಯೋಗ ನಾವು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿರೋದು, ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಒಟ್ಟಿಗೆ ಬರುತ್ತಿರುವುದು ಒಂದು ಯೋಗವಾದರೆ ನಾವಿಲ್ಲಿ ಒಟ್ಟಿಗೆ ಸೇರಿರುವುದು ಕೂಡ ಇನ್ನೊಂದು ಬಗೆಯ ಯೋಗವೆಂದು ಹೇಳಬಹುದು. ಭಾಷೆ ಮತ್ತು ಸಂಸ್ಕೃತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ಭಾಷೆಯನ್ನು ಕಳೆದುಕೊಂಡರೆ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತೇವೆ ಎಂದು ಹೇಳಿದರು.

ಭಾರತದಲ್ಲಿ ಒಂದು ಭಾಷೆ ಇನ್ನೊಂದು ಭಾಷೆಯ ಜೊತೆಗೆ ಸಂಬಂಧವನ್ನು ಬೆಳೆಸಿದೆ. ಇತಿಹಾಸದಲ್ಲಿ ನೂರಾರು ಯುದ್ಧಗಳು ನಡೆದಿವೆ. ಹೆಣ್ಣಿಗಾಗಿ ಯುದ್ಧ ನಡೆದಿದೆ, ಸಾಮ್ರಾಜ್ಯದ ವಿಸ್ತರಣೆಗಾಗಿ ಯುದ್ಧ ನಡೆದಿದೆ. ಸಂಪತ್ತಿಗಾಗಿ ಯುದ್ಧ ನಡೆದಿದೆ. ಆದರೆ ಭಾಷೆಗಾಗಿ ಭಾರತದಲ್ಲಿ ಯುದ್ಧ ನಡೆದಿಲ್ಲ, ಒಂದು ವೇಳೆ ಹಾಗೆಯೇ ನಡೆದಿದ್ದರೆ ಚೋಳರ ಆಳ್ವಿಕೆಯ ಕಾಲದಲ್ಲಿ ಕನ್ನಡವನ್ನ ನಾಶ ಮಾಡಿರೋರು, ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ತೆಲುಗು, ತಮಿಳು, ಮರಾಠಿ ಭಾಷೆ ಬದುಕಲಿಕ್ಕೆ ಸಾಧ್ಯ ಇರುತ್ತಿರಲಿಲ್ಲ, ಹೊಯ್ಸಳರು ಕೃಷ್ಣಗಿರಿಯ ಜಿಲ್ಲೆಯನ್ನು ದಾಟಿ ತನ್ನ ಆಳ್ವಿಕೆಯನ್ನು ನಡೆಸಿದರೂ ಕೂಡ ಎಲ್ಲ ಭಾಷೆಯನ್ನು ಶ್ರೀಮಂತಗೊಳಿಸುವ ಕೆಲಸ ಮಾಡಿದರು. ವಿಜಯನಗರದ ಸಾಮ್ರಾಜ್ಯದ ಅದರ ವ್ಯಾಪ್ತಿ ತಮಗೆಲ್ಲ ಗೊತ್ತಿರುವ ವಿಷಯವೇ. ಅವರ್ಯಾರು ಒಂದು ಭಾಷೆಯನ್ನು ಕೊಲ್ಲುವ ಕೆಲಸ ಮಾಡಲಿಲ್ಲ. ಒಂದು ಭಾಷೆಯನ್ನು ಶ್ರೀಮಂತಗೊಳಿಸುವ ಕೆಲಸ ಮಾಡಿದರು. ಯಾಕೆಂದರೆ ಅವರೆಲ್ಲರಿಗೂ ಗೊತ್ತಿತ್ತು ನಾವೆಲ್ಲರೂ ಭಾರತ ತಾಯಿಯ ಮಕ್ಕಳೆಂದು, ಆ ಸಂಬಂಧವನ್ನು ಕಟ್ಟಿಕೊಡಬೇಕು. ನಾವು ನಮ್ಮ ಮನೆಗಳಲ್ಲೂ ಕನ್ನಡವನ್ನು ಬಳಸಿ, ಮಕ್ಕಳಿಗೂ ಕನ್ನಡವನ್ನು ಕಲಿಸಿ, ನೀನು ಯಾರು ಎಂದು ಪ್ರಶ್ನೆ ಬಂದಾಗ ನಾನು ಭಾರತೀಯ, ನಾನು ಕನ್ನಡಿಗ, ನಾನು ಇಂತಹ ಊರಿನವನೆಂದು ಹೆಮ್ಮೆಯಿಂದ ಹೇಳಬೇಕು, ಅದಕ್ಕಾಗಿ ನಮ್ಮ ಭಾಷೆಯನ್ನು ಉಳಿಸಿಕೊಳ್ಳಬೇಕು. ಅದರ ಜೊತೆಗೆ ಸಂಸ್ಕೃತಿಯು ಉಳಿಯುತ್ತದೆ. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ನೇತೃತ್ವದ ತಂಡ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವವನ್ನು ಹಿಂದೆ ಮಾಡಿರಲಾರದಂತಹ ಕಾರ್ಯವನ್ನು ಮಾಡಲು ಇಡೀ ತಂಡ ಕೆಲಸ ಮಾಡಿದೆ. ಕರ್ನಾಟಕದಿಂದ, ದೇಶದ ಮೂಲೆ ಮೂಲೆಯಿಂದ, ವಿದೇಶದಲ್ಲಿರುವ ಕನ್ನಡಿಗರೂ ಕೂಡ ದೊಡ್ಡ ಪ್ರಮಾಣದಲ್ಲಿ ಬಂದು ಸಾಕ್ಷಿಯಾಗಿರುವ ಎಲ್ಲರಿಗೂ ವಿಶೇಷವಾದ ಧನ್ಯವಾದಗಳನ್ನು ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಮಾರಂಭದ ಅದ್ಭುತ ಯಶಸ್ಸಿಗೆ ಮೂಲ ಕಾರಣಕರ್ತರು ಆದ ಹಾಗೂ ಈ ಕಾರ್ಯಕ್ರಮದ ಗೌರವಾಧ್ಯಕ್ಷರಾದ ಶ್ರೀಯುತ ಸಿ.ಟಿ. ರವಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ, ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿ ಗೌರವ ಸಮರ್ಪಣೆ ಮಾಡಲಾಯಿತು.

# ಅಮೃತ ಮಹೋತ್ಸವ ಸಮಾರಂಭದಲ್ಲಿ ಸಾಹಿತ್ಯ ಸಂವಾದ
# ವರ್ತಮಾನದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ




ದಿನಾಂಕ 26, ಫೆಬ್ರವರಿ 2023ರಂದು ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದ ವೇದಿಕೆಯಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ **'ವರ್ತಮಾನದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ'** ಎಂಬ ವಿಷಯದ ಮೇಲೆ ನಡೆದ ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಕನ್ನಡ ನಾಡಿನ ಖ್ಯಾತ ಹಿರಿಯ ಸಾಹಿತಿಗಳು, ಕವಿಗಳು, ಲೇಖಕರು, ಕವಯಿತ್ರಿಯರು, ನಗೆಬರಹಗಾರರು, ಚಿತ್ರ ನಿರ್ದೇಶಕರು, ವಿದ್ವಾಂಸರು ಪಾಲ್ಗೊಂಡಿದ್ದರು.

ಡಾ. ದೊಡ್ಡರಂಗೇಗೌಡ, ಶ್ರೀ ಟಿ.ಎಸ್. ನಾಗಾಭರಣ, ಡಾ. ಸಿ. ಸೋಮಶೇಖರ್, ಡಾ. ಎಚ್.ಎಸ್. ಶಿವಪ್ರಕಾಶ್, ಪ್ರೊ. ಕೆ.ಈ. ರಾಧಾಕೃಷ್ಣ, ಶ್ರೀ ಕೆ.ವೈ. ನಾರಾಯಣ ಸ್ವಾಮಿ, ಶ್ರೀ ಎಂ.ಎಸ್. ನರಸಿಂಹಮೂರ್ತಿ, ಡಾ. ಲತಾ ರಾಜಶೇಖರ್ ಹಾಗೂ ಡಾ ಶೈಲಜಾ ಸಿ.ವಿ. ಅವರನ್ನು ವೇದಿಕೆ ಮೇಲೆ ನಿರೂಪಕಿ ಶ್ರೀಮತಿ ಸವಿಪ್ರಕಾಶ್ ಅತ್ಯಂತ ಗೌರವ ಪೂರ್ವಕವಾಗಿ ಬರಮಾಡಿಕೊಂಡು ಆತ್ಮೀಯ ಸ್ವಾಗತ ಕೋರಿದರು. ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಅವರು ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.



ಮೊದಲಿಗೆ, ಕನ್ನಡದ ಹಿರಿಯ ಸಾಹಿತಿಗಳು ಪ್ರಸಿದ್ಧ ಕವಿಗಳಾದ **ಡಾ. ದೊಡ್ಡರಂಗೇಗೌಡರು** 'ಶರಣೆಂಬೆ ಅರಿವಿಗೆ ಶರಣು ಶರಣೆಂಬೆ ಗುರುವಿಗೆ ಶರಣೆಂಬೆ ಸಾಹಿತ್ಯ ಸಂಗೀತ ಸರಸ್ವತಿಗೆ, ಶರಣು ಶರಣೆಂಬೆ ನಿಮ್ಮೆಲ್ಲರಿಗೆ ಎಂಬ ಸಾಲುಗಳನ್ನು ವಾಚಿಸುವುದರೊಂದಿಗೆ ಸಂವಾದವನ್ನು ಆರಂಭಿಸಿದರು. ಈ ಎರಡು ದಿನಗಳ ಸಾಹಿತ್ಯ ಸಂಗೀತ, ನೃತ್ಯ ಹಾಗೂ ಕಲೆಗಳ ಉತ್ಸವ ಸಂಭ್ರಮದಲ್ಲಿ ಪಾಲ್ಗೊಂಡು ತಮಗೆ ತುಂಬಾ ಸಂತೋಷವಾಗಿದೆ. ಕನ್ನಡದ ಹಬ್ಬ ಕನ್ನಡಿಗರ ಸಂಘಟನೆ ಹೀಗಾಗಬೇಕು. ಎಲ್ಲಾ ಕನ್ನಡಿಗರು ಒಂದುಗೂಡಲಿಕ್ಕೆ ಇಂತಹ ಹಬ್ಬಗಳು ಅನಿವಾರ್ಯ ಎಂದರು.

75 ವರ್ಷಗಳು ತುಂಬಿರುವ ದೆಹಲಿ ಕರ್ನಾಟಕ ಸಂಘ ಇಡೀ ವಿಶ್ವದಲ್ಲೇ ಕನ್ನಡದ ಪ್ರಾತಿನಿಧಿಕ ಸಂಘ, ನಿನ್ನೆ ಅಷ್ಟೆಯೇ ನಮ್ಮ ನೆಚ್ಚಿನ ಪ್ರಧಾನಿ ಕನ್ನಡದ ಹಿರಿಮೆಗರಿಮೆಗಳನ್ನು ಕೊಂಡಾಡಿದ್ದಾರೆ. ಕನ್ನಡ ಈ ಹೊತ್ತು ಯಾವ ದೃಷ್ಟಿಯಲ್ಲೂ ಕಡಿಮೆ ಇಲ್ಲ. ಕನ್ನಡಕ್ಕೆ ಅಗಣಿತವಾದ ಸಾಹಿತ್ಯ ಭಂಡಾರವಿದೆ. ಅತ್ಯಂತ ಪ್ರಾಚೀನತೆ ಕನ್ನಡಕ್ಕಿದೆ. ಈವರೆಗೆ ಹಲ್ಮಿಡಿ ಶಾಸನ ಅತ್ಯಂತ ಪ್ರಾಚೀನವಾದುದು ಎಂದು ನಾವು ಅಂದುಕೊಂಡಿದ್ದೆವು. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ ಈಜಿಪ್ಟ್ ದೇಶದಲ್ಲಿ ಕನ್ನಡದ ಅಕ್ಷರಗಳು ಇರುವುದನ್ನು ಕಂಡಾಗ ನಮ್ಮ ಸಾಹಿತ್ಯದ ಬಳಮೆ, ಹಿರಿಮೆ ಎಷ್ಟು ಪ್ರಾಚೀನವಾದದ್ದು ಎಂಬುದು ಅರಿವಾಗುತ್ತೆ. ಅಂತಹ ಐತಿಹ್ಯ / ಉಲ್ಲೇಖ ನಮ್ಮನ್ನು ರೋಮಾಂಚನಗೊಳಿಸುತ್ತವೆ. ಅಂದಿನಿಂದ ಇಂದಿನವರೆಗೆ ಹೊಸ ಪ್ರಯೋಗಗಳು ಅದು ಕಾವ್ಯದಲ್ಲಾಗಬಹುದು, ನಾಟಕಗಳಲ್ಲಾಗಬಹುದು, ವಿಮರ್ಶೆಗಳಲ್ಲಾಗಬಹುದು ಆಗುತ್ತಿವೆ. ಈಗ ಸಾಹಿತ್ಯ ವೈಶಾಲ್ಯತೆ, ವೈಚಾರಿಕತೆಯ ಜೊತೆಗೆ ವೈಜ್ಞಾನಿಕತೆ ಪಡೆದುಕೊಳ್ಳುತ್ತಿದೆ. ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯ ಈಗ ರೂಪಿತಗೊಳ್ಳುತ್ತಿದೆ ಎಂಬುದು ಕನ್ನಡಿಗರ ನಿಜವಾದ ಭಾಗ್ಯ, ಕನ್ನಡ ಲೇಖಕರ ಸಾಧನೆ ಎಂಬ ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದಿರುವುದಲ್ಲದೇ ಕನ್ನಡದಲ್ಲಿ ಈ ಸಮಯದಲ್ಲಿ ಹೆಚ್ಚು ಹೆಚ್ಚು ಲೇಖಕಿಯರು ಬರುತ್ತಿರುವುದು ಒಂದು ಶುಭ ಸೂಚನೆ. ನಮ್ಮೆಲ್ಲರ ಅರಿವಿನ ಪರಿಧಿ ವಿಸ್ತಾರವಾಗಿದೆ. ಈಗಿನ ಕಾಲದಲ್ಲಿ ಸಾಮಾಜಿಕ ಪ್ರಜ್ಞೆ ಇರುವ ಲೇಖಕರು ವಿಸ್ತಾರವಾಗಿ ಚರ್ಚೆ ಮಾಡುತ್ತಿದ್ದಾರೆ. ಸಮಾಜದಲ್ಲಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸುತ್ತಿದ್ದಾರೆ. ಹಿಂದೆ ಸಾಹಿತ್ಯ ಜನಜೀವನದ ಪ್ರತಿಬಿಂಬ ಎಂದು ಹೇಳುತ್ತಿದ್ದರೆ ಈಗ ಅದು ಜನರ ಗತಿ ಬಿಂಭ, ಸಾಹಿತ್ಯ ಜನರ ಮತಿಬಿಂಭವೆಂದೂ ಹೇಳಬಹುದೆಂದು ಅಭಿಪ್ರಾಯಪಟ್ಟರು.

ಈಗ ಸಾಹಿತ್ಯದ ಮೂಲಕ ಸಮಾಜದ ಸಮಸ್ಯೆಗಳಿಗೆ ಪರಿಹಾರ ನೀಡುವಂತಹ ಹೊಸ ವಿಚಾರಧಾರೆ ಬರುತ್ತಾ ಇದೆ. ಈಗ ತಂತ್ರಜ್ಞಾನ ನಮ್ಮನ್ನು ಆಳ್ತಾ ಇದೆ. ನಾವು ತಂತ್ರಜ್ಞಾನವನ್ನು ಅಳವಡಿಸಿಕೊಳ್ತಾ ಇದ್ದೇವೆ. ಆದ್ದರಿಂದ ಈಗ ಜಗತ್ತಿನೆಲ್ಲೆಡೆ ಕನ್ನಡ ಜಾಗೃತವಾಗಿದೆ, ಹೊರ ದೇಶಗಳಲ್ಲಿ ಕನ್ನಡ ಸಂಘಗಳು ಪ್ರಬಲವಾಗಿವೆ. ಒಂದೆರಡು ಕನ್ನಡ ಶಾಲೆಗಳು ಅಮೇರಿಕಾದಲ್ಲಿ

ಇರುವುದನ್ನು ನಾವು ಕಾಣ್ತಾ ಇದ್ದೇವೆ. ಸಾಹಿತ್ಯಕ್ಕೆ ಎಲ್ಲೆಯಿಲ್ಲ, ಸಾಹಿತ್ಯ ಮನುಷ್ಯನ ಮನಸ್ಸಿನ ಅರಿವನ್ನು ವಿಸ್ತಾರ ಮಾಡುವ ಪಾತ್ರ ವಹಿಸುತ್ತೆ, ವ್ಯಕ್ತಿತ್ವ ರೂಪಿಸುವಲ್ಲಿ ಅಗ್ರಗಣ್ಯ ಸ್ಥಾನದಲ್ಲಿದೆ ಎಂದು ಹೇಳಿದರು.

ಮನೋರಂಜನೆಯ ಜೊತೆ ಜೊತೆಗೆ ಸಾಹಿತ್ಯ ಸಂವಾದ ಕಾರ್ಯಕ್ರಮವನ್ನು ಇಲ್ಲಿ ದೆಹಲಿ ಕರ್ನಾಟಕ ಸಂಘ ಏರ್ಪಡಿಸಿರುವುದು ಉತ್ತಮ ಕೆಲಸ, ವಚನ ಸಾಹಿತ್ಯ, ದಾಸ ಸಾಹಿತ್ಯ, ಜಾನಪದ ಸಾಹಿತ್ಯ, ನವೋದಯ ಸಾಹಿತ್ಯ ಈ ಎಲ್ಲವೂ ವಿಶ್ವ ಸಾಹಿತ್ಯದಲ್ಲಿ ಕನ್ನಡದ ಮೇಲ್ಮಟ್ಟವನ್ನು ಎತ್ತಿ ಹಿಡಿಯುತ್ತವೆ. ಒಂದು ಆದರ್ಶ ಸಮಾಜವನ್ನು ರೂಪಿಸುವಲ್ಲಿ ಕನ್ನಡದ ಕಲಾವಿದರು, ಲೇಖಕರು, ಸಾಹಿತಿಗಳು ಮತ್ತು ಕವಿಗಳ ಪಾತ್ರವನ್ನು ಸ್ಮರಿಸಿಕೊಳ್ಳುತ್ತಾ ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘ ಮಾಡುತ್ತಿರುವ ಕೆಲಸ ಒಂದು ನಿಮಿತ್ತ ಎಂದು ಹೇಳಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.



ಚಿಂತಕರು ಲೇಖಕರೂ ಆದ **ಶ್ರೀ ಕೆ.ವೈ. ನಾರಾಯಣ ಸ್ವಾಮಿ**ಯವರು ಮಾತನಾಡಿ 75 ವರ್ಷದ ಸುದೀರ್ಘ ಪ್ರಯಾಣವನ್ನು ಮಾಡಿದ ದೆಹಲಿ ಕರ್ನಾಟಕ ಸಂಘ ಅಮೃತ ಮಹೋತ್ಸವ ಆಚರಿಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ಮತ್ತು ಸಂತೋಷದ ವಿಷಯ. ಈ ಎರಡು ದಿನಗಳಲ್ಲಿ ಇಂತಹ ದೊಡ್ಡಮಟ್ಟದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು.

ಕನ್ನಡ ಭಾಷೆಗೆ ಅತ್ಯಂತ ಶ್ರೀಮಂತವಾದ ಪರಂಪರೆ ಇದೆ. ಇದನ್ನು ಮುಂದಿನ ಪೀಳಿಗೆಗೆ ಹೇಗೆ ತೆಗೆದುಕೊಂಡು ಹೋಗಬಹುದು ಎಂಬುದನ್ನು ಯೋಚಿಸಬೇಕಾಗಿದೆ. ಈಗ ಹೆಚ್ಚು ಹೆಚ್ಚು ಲೇಖಕರು ಕನ್ನಡದಲ್ಲಿ ಬರುತ್ತಿದ್ದಾರೆ. ಆದರೆ ಅವರು ಉಪಯೋಗಿಸುತ್ತಿರುವ ಭಾಷೆ, ಪ್ರಯೋಗಗಳನ್ನು ನೋಡಿದರೆ ಕನ್ನಡ ಕುಗ್ಗಿ ಹೋಗುತ್ತಿದೆ ಎಂದು ಅನಿಸುತ್ತದೆ. ಹೊಸ ತಲೆಮಾರಿನವರು ಒಂದು ಪ್ರೇಮಪತ್ರವನ್ನು ಸಹ ಸರಿಯಾಗಿ ಬರೆಯಲು ಸಾದ್ಯವಾಗದಂತಹ, ಅವರ ಅಪ್ಪ ಅಮ್ಮನವರಿಗೆ ಪತ್ರ ಬರೆಯಲಾರದಂತಹ ಸ್ಥಿತಿಯಲ್ಲಿದ್ದಾರೆ. ಪಂಪ ರನ್ನನಂತಹ ಮಹಾಕವಿಗಳ ವಿಚಾರಗಳನ್ನು ಮುಂದಿನ ತಲೆಮಾರಿಗೆ ಹೇಗೆ ತೆಗೆದುಕೊಂಡು ಹೋಗುತ್ತಾರೆ ಎಂಬ ಆತಂಕದ ಸಂಗತಿ ಈಗ ತಲೆದೋರಿದೆ. ನಮ್ಮ ಶಿಕ್ಷಣ ವ್ಯವಸ್ಥೆ ತುಂಬಾ ದುರ್ಬಲ ಸ್ಥಿತಿಯಲ್ಲಿ ಮಕ್ಕಳಿಗೆ ಕನ್ನಡವನ್ನು ಕಲಿಸುತ್ತಾ ಇದೆ. ಮಕ್ಕಳ ಮನಸ್ಸನ್ನು ಹೃದಯವನ್ನು ಮುಟ್ಟುವಂತಹ ಶೈಕ್ಷಣಿಕ ಸಂಸ್ಕೃತಿಯಲ್ಲಿ ಅನೇಕ ಬಿರುಕುಗಳು ಮೂಡಿವೆ, ಇದು ನಾವೆಲ್ಲರೂ ಬಹಳ ಗಂಭೀರವಾಗಿ ಯೋಚನೆ ಮಾಡುವಂತಹ ಸಂಗತಿ. ನಾವು ಕನ್ನಡ ಭಾಷೆಯನ್ನು ವಿಸ್ತಾರ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಅವರ ಒಳಗಿರುವ ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಒಂದು ಒಳ್ಳೆಯ ಸಂಗತಿಯೆಂದರೆ ನಿನ್ನೆಯೇ ಕರ್ನಾಟಕ ಸರ್ಕಾರ ಕರ್ನಾಟಕದಲ್ಲಿ ಎಲ್ಲ ಮಕ್ಕಳು ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯಲು ಕಾಯ್ದೆಯನ್ನು ಮಾಡಿದೆ. ಇದರ ಹಿಂದೆ ಶ್ರೀ ನಾಗಾಭರಣರವರ ಪ್ರಯತ್ನ ಶ್ರಮ ತುಂಬಾ ಇದೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈಗ ಅನೇಕ ಮಹಿಳೆಯರು ಸಾಹಿತ್ಯದಲ್ಲಿ ಪ್ರವೇಶ ಮಾಡಿ ಬರೆಯುತ್ತಿದ್ದಾರೆ. ಹಾಗೇನೇ, ಅನೇಕ ಮೈಕ್ರೋಸ್ಕೋಪಿಕ್ ಸಾಮಾಜಿಕ ಸಮುದಾಯಗಳಿಂದ ಬಂದಂತವರು, ಹುಡುಗ, ಹುಡುಗಿಯರು ಮೊದಲ ತಲೆಮಾರಿನ ಓದುಗರು, ಈಗ ಮೊದಲ ತಲೆಮಾರಿನ ಬರಹಗಾರರಾಗಿ ಸಾಹಿತಿಗಳಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇದು ಅತ್ಯಂತ ಒಳ್ಳೆಯ ಸೂಚನೆ ಎಂದು ಅಭಿಪ್ರಾಯಪಟ್ಟರು. ಹಿಂದಿನ ಸಾಹಿತ್ಯ ನೋಡಿದರೆ ಅಲ್ಲಿ ಯಾವುದೋ ಒಂದು ಸಮುದಾಯದ ನೆನಪು ಕಾಣಿಸ್ತಾ ಇತ್ತು, ಇವತ್ತು ಅನಂತವಾದಂತಹ, ಭೌದ್ಧವಾದಂತಹ ಲಕ್ಷಣಗಳು ಕನ್ನಡ ಸಾಹಿತ್ಯದಲ್ಲಿ ಕಾಣಿಸ್ತಾ ಇದೆ. ಆತಂಕದ ವಿಷಯವೇನೆಂದರೆ 70-80-90ರ ದಶಕದಲ್ಲಿ ಸಾಹಿತ್ಯಕ್ಕೆ ಒಂದು ಸಾಮಾಜಿಕ ಜವಾಬ್ದಾರಿ ಇತ್ತು ಎಂದು ಎಲ್ಲರೂ, ಕುವೆಂಪುರವರೂ ನಂಬಿದ್ದರು. ಸಾಹಿತ್ಯದ ಮೂಲಕ ಮನುಷ್ಯನ ಸಮಾಜದ ಪರಿವರ್ತನೆ ಮಾಡಬೇಕೆಂದು, ಸಂವಿಧಾನದ ಆಶಯಗಳನ್ನು ಪೂರ್ಣಗೊಳಿಸಬೇಕೆಂದು ಯೋಚನೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಸಾಹಿತ್ಯದಿಂದ ನಾವು ಸಂತೋಷಪಟ್ಟರೆ ಸಾಕು, ಸಾಮಾಜಿಕ ಯೋಚನೆ ಸಾಹಿತ್ಯ ಏಕೆ ಮಾಡಬೇಕು ಎನ್ನುವ ಪ್ರಶ್ನೆ ಕೇಳಲಾಗುತ್ತಿದೆ, ಇದನ್ನು ನಾವು ಗಂಭೀರವಾಗಿ ಯೋಚಿಸಬೇಕಾದ ಪರಿಸ್ಥಿತಿ ಇದೆ. ಕುವೆಂಪುರವರು ಕಲ್ಯಾಣ ಕರ್ನಾಟಕ, ಮಹಿಳೆಯ ಕರ್ನಾಟಕ, ಮಕ್ಕಳ ಕರ್ನಾಟಕ ಸೃಷ್ಟಿಯಾಗಬೇಕೆಂಬ ಮಾತನ್ನು ಹೇಳಿದ್ದರು. ಇಂತಹ ಕರ್ನಾಟಕವನ್ನು ಬಡತನದಿಂದ ಮೇಲೆತ್ತಲು ಕಲ್ಯಾಣ ಕರ್ನಾಟಕವನ್ನಾಗಿ ರೂಪಿಸಲು ನಾವು ಪ್ರಯತ್ನ ಮಾಡೋಣವೆಂದು, ಈ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘ ಇಂತಹ ಸಮಾರಂಭವನ್ನು ಆಯೋಜಿಸಿರುವುದು ಶ್ಲಾಘನೀಯ, ಶ್ರೀ ನಾಗರಾಜ ಮತ್ತು ಅವರ ತಂಡ ಅಭಿನಂದನಾರ್ಹರು ಎಂದು ಹೇಳಿದರು.



ಹಿರಿಯ ಕವಿ, ಖ್ಯಾತ ಸಾಹಿತಿ ಹಾಗು ಜೆ.ಎನ್.ಯು.ನ ನಿವೃತ್ತ ಪ್ರಾಧ್ಯಾಪಕರಾದ **ಪ್ರೊ. ಎಚ್. ಎಸ್. ಶಿವಪ್ರಕಾಶ್** ರವರು ಮಾತನಾಡುತ್ತಾ ಗೋಪಾಲಕೃಷ್ಣ ಅಡಿಗರ ಕವನದ ಸಾಲು ಇತ್ತುವರ ಧ್ವಜ ಹಿಡಿದು ಎತ್ತಿ ನಿಲ್ಲಿಸಿ ಮಗು ಇರದಿರದ ಉಪಧ್ಯಾಪ ಬೇಡ ನಿನಗೆ ಎಂದು ಉಲ್ಲೇಖಿಸಿದರು. ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ವಿಶ್ವದಲ್ಲಿ ಅಪೂರ್ವವಾದುದು. ಭಾರತೀಯ ಸಂಸ್ಕೃತಿಗೆ, ಸಂಸ್ಕೃತ ಭಾಷೆಗೆ ಕರ್ನಾಟಕದ ಕೊಡುಗೆ ಬಹಳ ದೊಡ್ಡದು. ಏಳನೆ ಸಹಸ್ರಮಾನದಲ್ಲಿ (ಶತಮಾನದಲ್ಲಿ) ಸಂಸ್ಕೃತ ಕಾವ್ಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದು ನೃಪತುಂಗನ ಆಸ್ಥಾನದಲ್ಲಿ ಭೀಮಸೇನ ಆಚಾರ್ಯರಿಂದ, ಮುಂದೆ ಪಂಪ ಆದಿಪುರಾಣವನ್ನು ಬರೆದ. ಇನ್ನೊಂದು ಕನ್ನಡ ಸಂಸ್ಕೃತಿಯ ಕೇಂದ್ರ ಘಟನೆಯೆಂದರೆ ನಮ್ಮ ಶರಣರ ಅಭಿವ್ಯಕ್ತಿ. ಕೇವಲ 50 – 60 ವರ್ಷಗಳಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಪದ್ಯವೊಂದರ ಸಾಲುಗಳನ್ನು ಎಲ್ಲ ಜಾತಿಯಿಂದ ಎಲ್ಲ ವರ್ಗಗಳಿಂದ, ಸ್ತ್ರೀ ಪುರುಷರಾದಿಯಾಗಿ ಅಷ್ಟೊಂದು ಅದ್ಬುತವಾದ ಆಧ್ಯಾತ್ಮಿಕ ಕಾವ್ಯವನ್ನು, ಸಾಹಿತ್ಯರಾಶಿಯನ್ನು ವಿಶ್ವ ಸಾಹಿತ್ಯಕ್ಕೆ ನೀಡಿರುವುದು ಒಂದು ದೊಡ್ಡ ಸಾಧನೆ. ಇದು ಯಾವುದೇ ಒಂದು ಜಾತಿಯಿಂದಲ್ಲ, ಸಮಸ್ತ ಎಲ್ಲಾ ವರ್ಗಗಳ ಸಾಮೂಹಿಕ ಸಾಧನೆ. ಅದು ಒಂದು ತತ್ವವನ್ನು ಕೊಟ್ಟಿದೆ, ಹೆದ್ದಾರಿಯನ್ನು ಹಾಕಿದೆ, ಅದರಿಂದ ನಮ್ಮ ಕನ್ನಡ ಸಂಸ್ಕೃತಿ ವಿಕಸಿದೆ ಎಂದರು.

ನಮ್ಮ ಆಧುನಿಕ ಸಾಹಿತ್ಯದ ಘನತೆ ಮತ್ತು ಹಿರಿಮೆ ಬಹಳ ದೊಡ್ಡದಿದೆ. ಕುವೆಂಪುರವರು ಆಧುನಿಕ ಯುಗದ ವಿಶ್ವದ ಅತ್ಯಂತ ಶ್ರೇಷ್ಠ ಕವಿ. ಅವರ ಕೃತಿಗಳ ಅನುವಾದ ಇತರ ಭಾಷೆಗಳಿಗೆ ಆಗಬೇಕಾಗಿದೆ. ಹಾಗೇನೇ ಜನಪದ ಜನರು ಸೃಷ್ಟಿಸಿದ ನಮ್ಮ ಮಂಟೇಸ್ವಾಮಿ ಕಾವ್ಯ, ಮಲೆ ಮಾದೇಶ್ವರ ಕಾವ್ಯ, ಇವು ಕೇವಲ ಬುಡಕಟ್ಟಿನ ಕಾವ್ಯಗಳಲ್ಲ, ಅವು ವಿಶ್ವ ಕಾವ್ಯಗಳು. ಮಂಟೇಸ್ವಾಮಿ ಕಾವ್ಯದಲ್ಲಿ ಸಿದ್ದಪ್ಪಾಜಿ ಹೋರಾಟ ಮಾಡುವುದನ್ನು ಚಿತ್ರಿಸಲಾಗಿದೆ. ನಮ್ಮ ವಿಶ್ವ ಎಷ್ಟು ಗಾಢವಾಗಿತ್ತೆಂಬುದನ್ನು ಜನಪದ ಕೃತಿಗಳು ತೋರಿಸುತ್ತವೆ ಎಂದು ಹೇಳಿ, ತಮ್ಮ ಕನ್ನಡದ ಬಗ್ಗೆ ಬರೆದ 'ನುಡಿಯ ದುಡಿ' ಕವಿತೆಯ ಕೆಲವು ಸಾಲುಗಳನ್ನು ಓದಿ ತಿಳಿಸಿದರು.



ನಂತರ ಮಾತನಾಡಿದ ಕವಿ, ಲೇಖಕರು ಸಾಹಿತಿ **ಪ್ರೊ. ಕೆ.ಈ. ರಾಧಾಕೃಷ್ಣ**ರವರು ಕನ್ನಡದ ತೇರನ್ನು ಎಳೆಯುವಂತಹ ಕೈಂಕರ್ಯವನ್ನು ಮಾಡುತ್ತಿರುವ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ್, ಶ್ರೀ ರೇಣುಕುಮಾರ್, ಡಾ. ಎಂ.ಎಸ್. ಶಶಿಕುಮಾರ್ ಹಾಗೂ ಶ್ರೀ ಚಂದ್ರಶೇಖರ್ ಮತ್ತಿತರಿಗೆ ಅಭಿನಂದಿಸುತ್ತಾ, ಸಾಹಿತ್ಯವೆಂದರೇನು? ಅದು ಸಹಿತ ಸಾಗುವುದಕ್ಕೆ, ಸಹಿತ ಹಿತವಾಗಿ ಸಾಗುವುದಕ್ಕೆ ಸಾಹಿತ್ಯದಲ್ಲಿ ವರ್ತಮಾನ ಯಾವುದು, ಮಾನಯೆಂಬುದು ಗೌರವ ಎಂದುಕೊಂಡರೆ, ಆ ವರ್ತಮಾನದ ಮಾನದ ಪಾರಂಪರಿಕವಾಗಿ ಪಡೆಯುವುದು ಕೊಡಲಕ್ಕೆ ಎಂದು ಹೇಳುವ ಪಂಪನಿಂದ, ಕುರಿಗಳು ಸಾರ್ ನಾವು ಕುರಿಗಳು ಸಾಗಿದ್ದೇ ಹುರಿಗಳು, ತಕರಾರಿನವರು ಸ್ವಾಮಿ ನಾವು ತಕರಾರಿನವರು, ಕಟ್ಟುವೆವು ನಾವು ಹೊಸ ನಾಡೊಂದನ್ನು ಇದು ಯಾವುದು ವರ್ತಮಾನ? ಸಮಗಾರ ಭೀಮವ್ವ ಪರಸಂಗವ ಗೆಂಡೆತಿಮ್ಮ, ದೊಡ್ಡರಂಗೇಗೌಡರ ಅನುರಂಗ ವರ್ತಮಾನವಲ್ಲವೇ. ವಾಲ್ಮೀಕಿ ಕವಿಗಳು ಭಾಷೆಗೆ ಒಂದು ಸಾಹಿತ್ಯ ಅರ್ಥವನ್ನು ಕೊಡುತ್ತಾರೆ. ತಂತ್ರಿಲಯ ಸಮನ್ವಿತವಾಗಬೇಕು ಸಾಹಿತ್ಯ. ಅಂದರೆ ಭಾಷೆಯೆಂಬುದು ಅನ್ನದ ಭಾಷೆ. ಆತ್ಮದ ಭಾಷೆ, ಆಧ್ಯಾತ್ಮಿವಾದ ಭಾಷೆಯಾಗಿದೆ ಭಾಷೆಯೆನ್ನುವುದು ಸೈಕೋಲಾಜಿಕಲ್, ಫಿಸಿಕಲ್, ಬಯೋಲಾಜಿಕಲ್ ರಿದಮ್ ಎನ್ನುವುದಾದರೆ, ಅದು ದನಿ, ಧ್ವನಿ, ಲಯ, ತಾಳ ಅನ್ನುವುದಾದರೆ, ಅಲ್ಲಿ ನಾವು ಅನ್ನದ ಭಾಷೆಯನ್ನು ಹುಡುಕಿಕೊಳ್ಳುತ್ತಾ, ಆತ್ಮದ ಭಾಷೆಯನ್ನು ಆಧ್ಯಾತ್ಮಿಕ ಭಾಷೆಯನ್ನು ಹುಡುಕಿಕೊಳ್ಳುತ್ತಾ, ಆ ಪ್ರಕ್ರಿಯೆಯಲ್ಲಿ ತೊಡಗುವುದಾದರೆ ಕನ್ನಡವು ಇವತ್ತು ಸರ್ವಶ್ರೇಷ್ಠವಾಗಿ ಅವೆಲ್ಲವನ್ನು ಒಳಗೊಂಡಿದೆ.

ವೇದಿಕೆಯಲ್ಲಿರುವ ಪ್ರೊ. ಶಿವಪ್ರಕಾಶ್ರವರು ಅನುಭೂತಿಯ ಕವಿ, ದೊಡ್ಡರಂಗೇಗೌಡರು ಅನುರಂಗದ ಕವಿ, ನಾವೆಲ್ಲ ಕಾವ್ಯದ ಅನುಭವಾಸಕ್ತರು. ನಾಗಣ್ಣ, ನಾರಾಯಣ ಸ್ವಾಮಿಯವರು ದೃಶ್ಯಾತ್ಮಕ ಕವಿಗಳು. ನಾನು ಮತ್ತು ಸೋಮಶೇಖರ್‌ರವರು ಮಾತನಾಡುವ ಕವಿಗಳು. ರಶ್ದಿಯವರ ಇತ್ತೀಚಿನ ಕಾದಂಬರಿ ವಿಕ್ಟರಿ ಸಿಟಿಯನ್ನು ಉಲ್ಲೇಖಿಸುತ್ತಾ, ಅವರ ಒಂದು ಕಣ್ಣಿಗೆ ಅಮೇರಿಕಾದಲ್ಲಿ 'ಚಾಕು ಹಾಕಿ ಆ ಕಣ್ಣು ಕುರುಡಾಗಿದೆ' ಅದು ಇವತ್ತಿನ ಜಗತ್ತಿನಲ್ಲಿ ಸಾಹಿತ್ಯದ ಸಂಕೇತ. ಒಂದು ಕಣ್ಣು ಕುರುಡು ಮತ್ತೊಂದು ಅಸ್ಪಷ್ಟ ಅವರು ತಮ್ಮ ಮುನ್ನುಡಿಯಲ್ಲಿ ಹೇಳಿರುತ್ತಾರೆ, 'My grounds are everywhere, but beneath my feet, there is nothing' ಇವತ್ತಿನ ಅತ್ಯಂತ ಭೋಗಾತ್ಮಕವಾದಂತಹ, ದ್ರವ್ಯಾತ್ಮಕವಾದ ಜಗತ್ತಿನಲ್ಲಿ ನಾವೆಲ್ಲ ಸೌಂಡ್‌ನ ಬೆನ್ನ ಹಿಂದೆ ಬಿದ್ದಿದ್ದೇವೆ. ಸಾಹಿತ್ಯ Fury ಯ ಹಿಂದೆ ಬಿದ್ದಿಲ್ಲ. Fury ಎಂದರೆ ಆಕ್ರೋಶ, ಕ್ರೌರ್ಯ, ವಿಡಂಬನೆ, ಬಂಡಾಯವೆಂಬುದು. ಅತ್ಯಂತ ಬಂಡಾಯಕಾರರು ಎನ್ನುವುದಾದರೆ ಅದು ವಾಲ್ಮೀಕಿ, ವ್ಯಾಸ ಮತ್ತು ನಾರಾಯಣಪ್ಪ. ಅಂದಿನಿಂದ ಇಂದಿನವರೆಗೆ ಸಾಹಿತ್ಯ ಯಾವತ್ತೂ ಪ್ರತಿರೋಧವನ್ನೇ ಮಾಡಬೇಕು. ಸಾಹಿತ್ಯ ಯಾವತ್ತು ಪ್ರಭುತ್ವದ ಧ್ವನಿಯಾಗ್ತದೆ, ಪ್ರಭುತ್ವಕ್ಕೆ ನಾರಾಯಣ ಸ್ವಾಮಿಯವರು ಹೇಳಿದಂತೆ ಬಡವರ ದನಿಯಾಗಬೇಕು. ಪ್ರಭುತ್ವ ಯಾವಾಗ ಬಡವರ ದನಿ, ಧ್ವನಿಯನ್ನು ಕೇಳುವುದಿಲ್ಲವೋ ಆಗ ಸಾಹಿತ್ಯ ಎಚ್ಚರಿಸಬೇಕು ಎಂದರು.

ಮಂಕುತಿಮ್ಮನ ಕಗ್ಗದ ಸಾಲುಗಳನ್ನು ವಿಡಂಬನೆಯಾಗಿ ಹೇಳುತ್ತಾ, ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ ಅಲ್ಲ ಸ್ವಾಮಿ, ಇವತ್ತು ಜಟಕೇ ಬದುಕಿನ ಬಂಡಿ, ಸಾಹೇಬನದರ ವಿಧಿ. ಸಾಹೇಬ ವಿಧಿಯನ್ನು ನಿರ್ದೇಶಿಸುವಂತಹ ಸಂದರ್ಭದಲ್ಲಿ ಸಾಹಿತ್ಯ ಹಿತವನ್ನು ಕಳೆದುಕೊಳ್ಳುತ್ತವೆ. ಸಹಿತವೂ ನಡೆಯುವುದಿಲ್ಲ, ವರ್ತಮಾನದಲ್ಲೂ ಅದಕ್ಕೆ ವ್ಯತ್ಯಾಸವಾಗುತ್ತದೆ. ಜನಿವಾರದ ಶಿವದಾರದ ಕಾದಂಬರಿಯನ್ನು ಹಿಡಿದು ಲಂಕೇಶರಿಂದ ಹಿಡಿದು, ಬಸವರಾಜ ಕಟ್ಟೀಮನಿ, ಅನಂತಮೂರ್ತಿಯವರ ಪ್ರಥಮ ಕಾದಂಬರಿ ಪ್ರತಿ, ಮೃತ್ಯು ಮತ್ತು ಭಯದಿಂದ ಹಿಡಿದು, ಮರಳಿ ಮಣ್ಣಿಗೆಯಿಂದ ಹಿಡಿದು, ಕಾನೂರು ಸುಬ್ಬಮ್ಮ ಹೆಗ್ಗಡತಿಯಿಂದ ಹಿಡಿದು, ಇತ್ತೀಚಿನ ಕಾದಂಬರಿಗಳಲ್ಲಿ ನಾವು ಕಾಣುವುದೆಂದರೆ ತನ್ನ ಮಾನವನ್ನು ಹುಡುಕಿಕೊಳ್ಳುವುದಕ್ಕೆ ಸಾಹಿತ್ಯ ಕಂಡುಕೊಳ್ಳುವುದೇನೆಂದರೆ ನರಸಿಂಹ ಮೂರ್ತಿಯವರ ನಗೆ ಬರಹಗಳ ಹಿಂದಿರುವಂತಹ ನೋವಿನಿಂದ ಹಿಡಿದು ಹುಡುಕಿಕೊಳ್ಳುವಂತಹ ಒಂದು ಪ್ರಯತ್ನ ಎಂದು ಹೇಳಿದರು. ತಾವು ರಚಿಸಿದ ಮೂರೇ ಮೂರು ಬುಲೆಟ್, ಚೆಮ್ಮಿತ್ತು ರಾಮರಕ್ತ, ರಾಮನೆಂಬುವ ಮನುಜ ಸಂಕಟದ ನೋವಿನ ದನಿ, ಬೀಳಲಿಲ್ಲ ಅವನ ಕಿವಿಗೆ ಏಕೆಂದರೆ ಕಣ್ಣು ಕುರುಡಾಗಿಸಿತ್ತು. ದುಶ್ಯಾಸನನ (ಅಂದರೆ ದುಷ್ಟ ಶಾಸನ) ಕರುಳನ್ನು ಬಗೆಯಬೇಕಾಯ್ತು ಭೀಮನಿಗೆ, ಗೊತ್ತೇ ಈ ಪಿತನಿಗೆ ತನ್ನ ಪುತ್ತರ ರಾಷ್ಟ್ರಪಿತನಾಗುವನೆಂದು ಗಾಂಧಿ, ಬುದ್ಧ, ಬಸವಣ್ಣ, ಕುವೆಂಪುರವರನ್ನು ನಾವು ಮರೆಯುತ್ತಿದ್ದೇವೆ. ಧರ್ಮ ರಾಜ್ಯಕಾರಣದಲ್ಲಿ, ನಾವು ಕುವೆಂಪುವನ್ನು, ಬಸವಣ್ಣನನ್ನು, ಬುದ್ಧನನ್ನು, ಗಾಂಧಿಯನ್ನು ಕಳೆದುಕೊಂಡರೆ ಸಾಹಿತ್ಯಕ್ಕೆ ವರ್ತಮಾನವಿರುವುದಿಲ್ಲ. ಆದರೆ ಭಗವದ್ಗೀತೆಯಲ್ಲಿರುವಂತೆ ಅಕ್ಷರ ಬಲ್ಲವ ಎಲ್ಲ ಶರತ್ತನ್ನು ಹೋಗಲಾಡಿಸಲು ಹೋರಾಡುವುದು, ಅವನಿಗೆ ಅರಿವಾಗದ ಅವನ ಪೆನ್ನಿನ ಧರ್ಮ, ಇವತ್ತು ಪೆನ್ನನ್ನು ಗನ್ನಾಗಿ ಉಪಯೋಗಿಸುವಂತಹ ಕಾಲ ಬಂದಿದೆ. ಜಗತ್ತಿನಾದ್ಯಂತ ಹೋರಾಟ ನಡೆಯುತ್ತಿದೆ. ಸಾಹೇಬನದರ ವಿಧಿಯಾಗಬಾರದೆಂದು, ವಿಧಿ ಅವರ ಸಾಹೇಬ ಆಗಲಿ ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.



ಕನ್ನಡದ ಖ್ಯಾತ ನಗೆ ಬರಹಗಾರರಾದ ತಮ್ಮ ನಗೆ ಸಾಹಿತ್ಯದಿಂದ ವೈದ್ಯರೆಂದೆನಿಸಿಕೊಂಡಿರುವ **ಶ್ರೀ ಎಂ.ಎಸ್. ನರಸಿಂಹ ಮೂರ್ತಿ**ಯವರು ವೈದ್ಯರು ಹೇಳಿದಂತೆ ಎಲ್ಲರೂ ನಗಬೇಕು ಎಂದು ತಮ್ಮ ಮಾತುಗಳನ್ನು ಆರಂಭಿಸಿ 'ಮಕ್ಕಳಾಗ್ಲೀ ಅಂತ ಒಬ್ಬಳು ಸುತ್ತಲಿಕ್ಕೆ ಹೊರಟಳು, ಅರಳೀಮರದ ಕಟ್ಟೇ, ಒಂದು ಸುತ್ತು ಇನ್ನು ಆಯ್ತೋ ಇಲ್ವೋ ಮುಟ್ಟಿ ನೋಡ್ಕೊಂಡಳು ಹೊಟ್ಟೆ ಎಂದು ಪದ್ಯವೊಂದರ ಸಾಲುಗಳನ್ನು ವಾಚಿಸಿ ನಗೆಯ ಹೊನಲನ್ನು ಹರಿಸಿದರು. ನಾವು ಈತರಹದ ಕಾರ್ಯಕ್ರಮಗಳನ್ನು ಬಹಳಷ್ಟು ನೋಡಿದ್ದೇನೆ, ಭಾಗವಹಿಸಿದ್ದೇನೆ ಆದರೆ ನಿನ್ನೆ ನಡೆದ ಮತ್ತು ಇಂದು ನಡೆಯುತ್ತಿರುವ ದೆಹಲಿ ಕರ್ನಾಟಕ ಸಂಘದ ಇಂತಹ ಕಾರ್ಯಕ್ರಮ ಬಹಳ ಅಪರೂಪ, ಬಹಳ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಾನು ಇಲ್ಲೇ ನೋಡಿರುವುದು ಎಂದರು.

ಕೊರೊನಾ ಸಮಯದ ನಂತರ ಇಂತಹ ಕಾರ್ಯಕ್ರಮಗಳು ಬಹಳ ವಿರಳ. ಮಾರ್ಚ್ 2020ರ ಕೊರೊನ ಮಹಾಮಾರಿಯ ಸಂದರ್ಭದಲ್ಲಿ ಯು.ಕೆ.ಯ ಕನ್ನಡ ಸಂಘದವರು ಅವರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅಲ್ಲಿಗೆ ಬರಲು ತಮಗೆ ಆಹ್ವಾನ ನೀಡಿದ್ದು, ತದನಂತರ ಕೊರೊನಾ ಲಾಕ್‌ಡೌನ್ ಕಾರಣದಿಂದ ಅದನ್ನು ಆನ್‌ಲೈನ್ ಮೂಲಕ ಬದಲಾಯಿಸಿ ಕಾರ್ಯಕ್ರಮ ಆಯೋಜಿಸಿದ್ದನ್ನು ಯುಗಾದಿ ದಿನ ನನ್ನ ಭಾಷಣದ ನಂತರ ತಮ್ಮನ್ನು ಅವರು ಆನ್ಲೈನ್ನಲ್ಲೇ ಸನ್ಮಾನಿಸಲು ತಮ್ಮ ಫೋಟೋಗೆ ಶಾಲು ಹೊದಿಸಿ, ಪೇಟ ಇಟ್ಟು, ಹೂವಿನ ಹಾರ ಹಾಕಿ ಅಭಿನಂದಿಸಿದ್ದನ್ನು ನೆನಪಿಸಿಕೊಂಡ ಅವರು ಆಯೋಜಕರಿಗೆ, ಇನ್ನು ಎರಡು ಊದು ಕಡ್ಡಿ ಹಚ್ಚಿದ್ದರೆ ಸರಿ ಹೋಗ್ತಿತ್ತು ಎಂದು ತಮಾಷೆಯಾಗಿ ತಿಳಿಸಿದ್ದನ್ನು ಜೀವಂತವಿದ್ದಾಗಲೇ ತಮ್ಮ ಫೋಟೋವಿಗೆ ಹೂವಿನ ಹಾರ ಹಾಕಿಸಿಕೊಂಡ ಏಕೈಕ ವ್ಯಕ್ತಿ ತಾನು ಎಂದು ಹೇಳಿಕೊಂಡರು. ಕಲಾವಿದರಿಗೆ ಬಹಳ ಕಷ್ಟ ಬಂದ ಕಾಲ ಕೊರೊನಾ ಕಾಲ. ಇಷ್ಟೊಂದು ಜನ ಕಲಾವಿದರನ್ನು ಒಂದು ಕಡೆ ನೋಡುವುದು ಬಹಳ ಅಪರೂಪದ ಸಂಗತಿ. ಇಂತಹ ಕಡೆ ಬಂದಾಗ ಸಂಬಂಧಗಳು ಗಟ್ಟಿಗೊಳ್ಳುತ್ತವೆ. ತಾವು ಹಿಂದೆ ಒಮ್ಮೆ ರಾತ್ರಿವೇಳೆ ಅಜ್ಜಿ ಮನೆಗೆ ಹೋದಾಗ ಅಜ್ಜಿ ಅಳಿದುಳಿದ ಅನ್ನಕ್ಕೆ ಹಾಲು ಮೊಸರು ಎಲ್ಲ ಹಾಕಿ ಕಲಸಿ ಎಸೆಯಕ್ಕಂತ ಆಚೆ ಬರುವಂತಹ ಸಂದರ್ಭ ನಾನು ಸರ್ಪ್ರೈಸ್ ಆಗಿ ಎಂಟ್ರಿ ಕೊಟ್ಟಾಗ ನನ್ನನ್ನು ನೋಡಿದ ಕೂಡಲೇ ಏ ನರಸಿಂಹೂ ಬಾ ಬಾ ಸರಿಯಾದ ಸಮಯಕ್ಕೆ ಬಂದಿದ್ದೀಯಾ ನೀನು, ಒಂದು ನಿಮಿಷ ಲೇಟಾಗಿ ಬಂದಿದ್ದರೂ ಈ ಮೊಸರನ್ನನ ಬೀದಿ ನಾಯಿಗೆ ಹಾಕ್ ಬಿಡ್ತಿದ್ದೆ ಅಂದ್ರು. ನಾನು ಬೀದಿ ನಾಯಿಯ ಬಗ್ಗೆ ಅನುಕಂಪದಿಂದ, ಅದನ್ನು ಆ ಬೀದಿ ನಾಯಿಗೇ ಹಾಕಿ ಪರವಾಗಿಲ್ಲ ಅಜ್ಜಿ, ಅಂದಾಗ ನೀನು ಬಸ್ನಲ್ಲಿ ಬಂದಿದ್ದೀಯಾ ನೀನು ಇದನ್ನು ತಿನ್ನು, ಬೀದಿ ನಾಯಿಗೆ ಬೇರೆ ಬಿಸಿ ಬಿಸಿ ಮಾಡಿ ಹಾಕ್ತೀನಿ ಅಂತ ನಮ್ಮ ಅಜ್ಜಿ ಹೇಳಿದ್ರು ಎಂದು ಹಾಸ್ಯದ ತುಣುಕನ್ನು ಮೆಲುಕು ಹಾಕಿದರು. ಈ ರೀತಿಯ ಸಂಬಂಧಗಳು ಇಂತಹ ಸಮ್ಮೇಳನದಲ್ಲಿ ನೋಡಬಹುದು. ಈ ಮಟ್ಟದ ಕಾರ್ಯಕ್ರಮ ಆಯೋಜನೆ ಮಾಡಿರುವ ಶ್ರೀ ನಾಗರಾಜ ಮತ್ತು ತಂಡದವರ ಬಗ್ಗೆ ಹಾಗೂ ಅವರುಗಳು ತಮ್ಮನ್ನು ಪ್ರೀತಿಯಿಂದ ನೋಡಿಕೊಂಡ ರೀತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ನಗೆಯ ಬಗ್ಗೆ ಮಾತನಾಡುತ್ತಾ ಎರಡು ತರಹ ನಗೆಗಳಿವೆ, ಒಂದು ಮೆಚ್ಚು ನಗೆ, ಇನ್ನೊಂದು ಚುಚ್ಚು ನಗೆ; ಹಾಗೇನೇ ನಗೆಯ ಇನ್ನಷ್ಟು ಪ್ರಕಾರಗಳೆಂದರೆ ಬುದ್ಧದೇವನ ಮುಗುಳ್ನಗೆ, ಶ್ರೀಕೃಷ್ಣ ಪರಮಾತ್ಮಂದ್ದು ಸರಸ ನಗೆ, ಪಂಪ ಮಹಾಕವಿ ಬೀರಿದ್ದು ರಸಿಕ ನಗೆ ಮತ್ತು ಪುಟ್ಟ ಮಗುವಿನ ಮುಗ್ಧವಾದ ತುಂಬು ನಗೆ ನಮಗೆ ಮೇಲ್ಪಂಕ್ತಿಯಾಗಬೇಕು, ನಮ್ಮಲ್ಲಿ ಪ್ರಾಮಾಣಿಕವಾದ ಹೃದಯವಿರಬೇಕು, ಕಳಂಕ ರಹಿತ ಅಂತಃಕರಣವಿರಬೇಕು ಎಂದು ತಮ್ಮ ವಿಚಾರವನ್ನು ಮಂಡಿಸಿದರು.



ನಂತರ ಮಹಾ ಕವಯಿತ್ರಿ **ಡಾ. ಲತಾ ರಾಜಶೇಖರ್**ರವರು ಮಾತನಾಡಿ, ಈ ಭಾಷೆ ಎನ್ನುವುದು ಮನುಕುಲಕ್ಕೆ ದೊರೆತ ಒಂದು ದೊಡ್ಡ ವರ. ಭಾಷೆಯಿಲ್ಲದ ಬದುಕನ್ನ, ಭಾಷೆಯಿಲ್ಲದ ಪ್ರಪಂಚವನ್ನು ನಾವು ಊಹಿಸಲೂ ಸಾಧ್ಯವಿಲ್ಲ. ಅದೊಂದು ಅನೋಕ್ಯವಾದ ಪ್ರಪಂಚ, ಮೌನದ, ನಿಶ್ಶಬ್ದದ ಪ್ರಪಂಚ. ಪ್ರತಿಯೊಂದು ಭಾಷೆಗೂ ತನ್ನದೇ ಆದಂತಹ ಬೆಡಗಿದೆ, ಭಿನ್ನತೆಯಿದೆ. ಕನ್ನಡ ಭಾಷೆಯೂ ಇದಕ್ಕೆ ಹೊರತಲ್ಲ, ಈ ಭಾಷೆ ಒಂದು ಬೆರಗು, ವಿಸ್ಮಯ ಕನ್ನಡ ಭಾಷೆ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಮೂರನೇ ಅತೀ ಪ್ರಾಚೀನವಾದ ಭಾಷೆ, ಅತ್ಯಂತ ವೈಜ್ಞಾನಿಕವಾದ ಒಂದು ಪರಿಪೂರ್ಣವಾದ ಭಾಷೆ. ಕನ್ನಡ ಭಾಷೆಯನ್ನು ಲಿಪಿಗಳ ರಾಣಿ ಅಂತ ಕೂಡ ನಾವು ಕರೆಯುತ್ತೇವೆ. ಅಂತಹ ಶ್ರೇಷ್ಠತಮ ಭಾಷೆ ಕನ್ನಡ ಭಾಷೆ. ಕನ್ನಡ ಸಾಹಿತ್ಯದಲ್ಲಿ ಎಲ್ಲ ಪ್ರಕಾರಗಳು ರಚನೆಯಾಗಿವೆ, ಹನಿಗವಿತೆಯಿಂದ ಮಹಾಕಾವ್ಯದವರೆಗೆ, ಸಣ್ಣ ಕಥೆಗಳಿಂದ ಹಿಡಿದು ಬೃಹತ್ ಕಾದಂಬರಿಗಳವರೆಗೆ ಸಮೃದ್ಧಿಯಾದ ಸಾಹಿತ್ಯ ಸೃಷ್ಟಿಯಾಗಿದೆ ಕನ್ನಡ ಸಾಹಿತ್ಯದಲ್ಲಿ. ಪ್ರತಿ ವರ್ಷ ನೂರಾರು ಹೊಸ ಲೇಖಕರು ಹುಟ್ಟಿಕೊಳ್ಳುತ್ತಿದ್ದಾರೆ. ಸಾವಿರಾರು ಕೃತಿಗಳು ಪ್ರಕಟವಾಗಿವೆ, ಲಕ್ಷಾಂತರ ಕೃತಿಗಳು ಮಾರಾಟವಾಗ್ತಿವೆ. ಇದು ಕನ್ನಡ ಭಾಷೆಯ, ಸಾಹಿತ್ಯದ ಸಮೃದ್ಧಿಯನ್ನು ನಮಗೆ ತೋರಿಸುತ್ತದೆ. ಇಷ್ಟಾದರೂ, ಕನ್ನಡಕ್ಕೆ ಸಿಗಬೇಕಾಗಿದ್ದ ಸ್ಥಾನಮಾನ ಸಿಗುತ್ತಿಲ್ಲ. ಈಗಾಗಲೇ ಕರ್ನಾಟಕದಲ್ಲಿ ಸುಮಾರು ಕನ್ನಡ ಶಾಲೆಗಳು ಮುಚ್ಚಿರುತ್ತವೆ, ಈ ವರ್ಷವೂ ಸಹಾ ಅನೇಕ ಕನ್ನಡ ಶಾಲೆಗಳನ್ನು ಮುಚ್ಚಬೇಕಾಗಬಹುದು ಎಂದು

ಸರ್ಕಾರವೇ ಹೇಳಿದೆ. ಇದು ಒಂದು ದುರಂತದ, ಅತ್ಯಂತ ವಿಷಾದಕರ ಸಂಗತಿ. ಈಗಾಗಲೇ ಈ ನಿಟ್ಟಿನಲ್ಲಿ ನಮ್ಮ ಶ್ರೀ ನಾಗಾಭರಣರವರು ಹಾಗೂ ಡಾ. ಸಿ. ಸೋಮಶೇಖರ್‌ರವರು ಅತ್ಯಂತ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಎಲ್ಲರೂ, ಹಿರಿಯರ ಮುಂದಾಳ್ತನದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವುದನ್ನು ತಡೆಯಲು ಪ್ರಯತ್ನ ಮಾಡಬೇಕು. ಕರ್ನಾಟಕ ಸರ್ಕಾರ ಕನ್ನಡವನ್ನು ಉಳಿಸುವ ಬೆಳೆಸುವಂತಹ ನಿಟ್ಟಿನಲ್ಲಿ ಕೆಲಸ ಮಾಡಬೇಕು, ತೀವ್ರವಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು ಎಂದರು.

ದೆಹಲಿ ಕರ್ನಾಟಕ ಸಂಘದ ಈ ಅಮೃತ ಮಹೋತ್ಸವ ಸಂದರ್ಭದಲ್ಲಿ, ಪೋಷಕರಲ್ಲಿ, ಮಕ್ಕಳಲ್ಲಿ ಕನ್ನಡದ ಆಸಕ್ತಿಯನ್ನು ಬೆಳೆಸುವಂತಹ ಒಂದು ಕೆಲಸವನ್ನು ಮಾಡಬೇಕು ಮತ್ತು ಕನ್ನಡ ಅನ್ನದ ಭಾಷೆಯಾದಾಗ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ದೆಹಲಿ ಕರ್ನಾಟಕ ಸಂಘ ಒಂದು ಉತ್ತಮವಾದ ಕೆಲಸವನ್ನು ಮಾಡ್ತಾ ಇದೆ. ಒಂದು ಸರ್ಕಾರ ಮಾಡುವಂತಹ ಕೆಲಸವನ್ನು ಅದು ಹೊರನಾಡಿನಲ್ಲಿ ಮಾಡ್ತಾ ಇದೆ. ಇದು ನಿಜಕ್ಕೂ ಸಂತೋಷದ ಸಂಗತಿ, ಅದಕ್ಕಾಗಿ ಸಂಘದ ಅಧ್ಯಕ್ಷ ಶ್ರೀ ನಾಗರಾಜರಿಗೆ ಮತ್ತು ಪದಾಧಿಕಾರಿಗಳಿಗೆ ಅಭಿನಂದಿಸುತ್ತಾ ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಎಲ್ಲರಿಗೂ ವಂದನೆ ಅರ್ಪಿಸಿದರು.



ಖ್ಯಾತ ಲೇಖಕಿ **ಡಾ. ಶೈಲಜಾ ಸಿ.ವಿ.** ರವರು ಮಾತನಾಡುತ್ತ ಸಾಹಿತ್ಯವೆಂಬುದು ಸಮಾಜಕ್ಕೆ ಕ್ರಾಂತಿಯನ್ನುಂಟು ಮಾಡುವಂತಹ ವಜ್ರಾಯುಧದಂತೆ. ಸಮಾಜದ ಕೊಳೆಯನ್ನು ತೊಳೆಯುವಂತಹ ಒಂದು ಪವಿತ್ರ ಗಂಗೆಯೆಂತಲೂ ಹೇಳಬಹುದು. ಕನ್ನಡ ಸಾಹಿತ್ಯವೆನ್ನುವುದು ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ. ಪಂಪನಿಂದ ಕುವೆಂಪುವರಾದಿಯಾಗಿ ಅನೇಕ ಹಿರಿಯ ಸಾಹಿತಿಗಳು, ಅದ್ಭುತವಾದಂತಹ ಸಾಹಿತ್ಯವನ್ನು ಕೃಷಿ ಮಾಡಿದ್ದಾರೆ. ಅಂದಿನಿಂದ ಇಂದಿನವರೆಗೆ ಅದು ಪ್ರಸ್ತುತೆಯನ್ನು ಪಡೆದುಕೊಂಡಿದೆ. ವರ್ತಮಾನದಲ್ಲಿ ಸಮಾಜ ಪ್ರಕ್ಷುದ್ಧತೆಯಿಂದ ಇದೆ. ಮಾನವ ಸಂಬಂಧಗಳು ಸಡಿಲಗೊಳ್ಳುತ್ತಿವೆ, ಜಾಗತಿಕ ತಲ್ಲಣ ಜಾಸ್ತಿಯಾಗುತ್ತಿದೆ. ಈ ನಿಟ್ಟಿನಲ್ಲಿ ನಾವು ವರ್ತಮಾನದಲ್ಲಿ ಮಾನವತೆ, ಸಾಮಾಜಿಕ ಕ್ರೀಯೆ, ಮಾನವನ ಬುದ್ದಿಮತೆ, ಮುಂದುವರಿದ ಆಧುನಿಕ ಅವಿಷ್ಕಾರಗಳು ಈ ವಿದ್ಯಮಾನಗಳನ್ನು ಇಟ್ಟುಕೊಂಡು, ಸಾಹಿತ್ಯ, ಸಾಹಿತ್ಯಿಕ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಇಂತಹ ವಿಷಯಗಳನ್ನು ಸಂವಾದದ ಮೂಲಕ ಸಾಹಿತ್ಯದ ನಿರ್ಮಾಣ ತುರ್ತಾಗಿ ಮಾಡಬೇಕಾಗಿದೆ. ಈಗಿನ ಯುವ ಜನರು ಸಾಹಿತ್ಯದ ಓದಿನಿಂದ ಹಿಂದೆ ಸರಿಯುತ್ತಾ ಇದ್ದಾರೆ. ಅವರನ್ನು ನಾವು ಈ ಒಂದು ಸಾಹಿತ್ಯಕ್ಕೆ, ಓದಿಗೆ ಹೆಚ್ಚಾಗಿ ತೊಡಗಿಸಿಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ಸಾಹಿತ್ಯ ಹೆಚ್ಚು ಹೆಚ್ಚು ಕೃಷಿಯಾಗಬೇಕಾಗಿದೆ. ಇಂಗ್ಲೆಂಡಿನಲ್ಲಿ ರೋಲಿಂಗ್ ರಚಿಸಿದ ಹ್ಯಾರಿಪೋರ್ಟರ್ ಕೃತಿ ಯುವ ಜನಾಂಗವನ್ನು ಹೆಚ್ಚು ಆಕರ್ಷಣೆ ಮಾಡ್ತು. ಅಂತಹ ಅದ್ಭುತವಾದ ಪ್ರಯೋಗಗಳು ನಮ್ಮಲ್ಲಿಯೂ ನಡೆಯಬೇಕಾಗಿದೆ. ಯುವ ಜನಾಂಗವನ್ನು ಸೆಳೆಯುವಂತಹ ಕೃತಿಗಳಿಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ನಿಮ್ಮೆಲ್ಲರ ಮಾರ್ಗದರ್ಶನ ಪ್ರೇರಣೆ ಯುವ ಜನರಿಗೆ ಆಗಬೇಕೆಂದು ನಾನು ಇಲ್ಲಿರುವ ಹಿರಿಯ ಸಾಹಿತಿಗಳಿಗೆ ಮನವಿ ಮಾಡುತ್ತೇನೆ ಎಂದು ಹೇಳಿ ತಮಗೆ ಕೊಟ್ಟ ಅವಕಾಶಕ್ಕೆ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಕನ್ನಡ ಚಿತ್ರರಂಗದ ಹೆಮ್ಮೆಯ ನಿರ್ದೇಶಕರಾದ **ಶ್ರೀ ಟಿ.ಎಸ್. ನಾಗಾಭರಣ**ರವರು ಸಂವಾದ ದಲ್ಲಿ ಮಾತನಾಡಿ ಇವತ್ತು ಎಲ್ಲರೂ ಯಂತ್ರ ಮಾನವರಾಗುತ್ತಿದ್ದಾರೆ. ಮೊಬೈಲ್‌ನ ದಾಸರಾಗುತ್ತಿದ್ದಾರೆ. ಒಂದು ಕಾಲದಲ್ಲಿ ಅಜ್ಜಿಯಿಂದ ಕಥೆ ಕೇಳುತ್ತಿದ್ದೆವು. ಅಜ್ಜಿ ಹೇಳಿದ ಕಥೆಯನ್ನು ಬೇರೆಯವರಿಗೆ ಹೇಳಿ ನಾವು ಕಥೆಗಾರರಾಗುತ್ತಿದ್ದೆವು. ಆ ಶ್ರವ್ಯ ಪರಂಪರೆಯಿಂದ ಇವತ್ತು ದೃಶ್ಯ ಪರಂಪರೆಗೆ ಬಂದಿದ್ದೇವೆ. ಇನ್ನೊಂದು ದಾಪುಗಾಲು ಇಟ್ಟಿದ್ದೇವೆ. ನಿಮ್ಮನ್ನೆಲ್ಲರನ್ನು ಮರೆಗುಳಿ ಮಾಡಿಸುವ ಒಂದು ಯಂತ್ರ ಮೊಬೈಲ್ ಅನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದೇವೆ. ಇದರಿಂದ ಸ್ವಂತ ಹೆಂಡತಿಯ ನಂಬರನ್ನು ಕೇಳಿದರೆ ಸಹ ಮೊಬೈಲ್ನಲ್ಲಿಯೇ ನೋಡಿ ಹೇಳುವ ಸ್ಥಿತಿ ಇದೆ. ಹಾಗಾಗಿ ಒಂದು ಸಂಸ್ಕೃತಿಯ ಯಾನದಲ್ಲಿ, ಪಯಣದಲ್ಲಿ ನೆನಪುಗಳು ಬಹಳ ಮುಖ್ಯ. ಅಂತಹ ನೆನಪುಗಳಿಗೆ ತನ್ನದೇ ಆದ ಇತಿಹಾಸವಿದೆ, ಪರಂಪರೆ ಇದೆ. ಆ ಪರಂಪರೆ ಮತ್ತು ಇತಿಹಾಸವನ್ನು ನಾವು ನಮ್ಮದಾಗಿಸಿಕೊಳ್ಳಬೇಕಾದರೆ ಅದನ್ನು ಭವಿಷ್ಯಕ್ಕೆ ಕಟ್ಟಿಕೊಡಬೇಕಾದರೆ ನೆನಪುಗಳ ಜೊತೆಯಲ್ಲಿ ನಾವು ಒಂದು ಬುತ್ತಿಯನ್ನು ತೆಗೆದುಕೊಂಡು ಹೋಗ್ತೀವೆ. ಅಂತಹ ಬುತ್ತಿಯನ್ನೊಂದನ್ನ ದೆಹಲಿ ಕರ್ನಾಟಕ ಸಂಘ ನಿನ್ನೆಯಿಂದ ಇವತ್ತು ನಿರಂತರವಾಗಿ ಕಟ್ಟಿ ಕೊಟ್ಟಿದೆ, ಒಂದು ಅದ್ಭುತ ನೆನಪಿನ ಬುತ್ತಿಯನ್ನು ಕಟ್ಟಿಕೊಂಡಂತಹ ಪ್ರತಿಯೊಬ್ಬರಿಗೂ ನಾವು ಆಭಾರ ಮನ್ನಣೆ ಮಾಡ್ತಾ ಇದ್ದೇವೆ ಎಂದರು.

ಇಂತಹ ಒಂದು ಕಾರ್ಯಕ್ರಮದಲ್ಲಿ ಸಾಹಿತ್ಯಿಕ ಸಂವಾದದ ಜೊತೆಯಲ್ಲಿ ನಾವು ಸಾಂಸ್ಕೃತಿಕ ಸಂಚಲನವನ್ನು ಮೂಡಿಸುತ್ತಾ ಇರುವ ಜೊತೆಯಲ್ಲಿ ಒಂದು ಸಾಮಾಜಿಕ ಜವಾಬ್ದಾರಿಯನ್ನು ಕೂಡ ನಮಗೆ ಕೊಡ್ತಾ ಇದೆ. ಒಂದು ಭಾಷೆಯನ್ನು ಅದರ ತನ್ನತನವನ್ನು ಭಾಷೆಯ ಒಟ್ಟಾರೆ ಭವಿಷ್ಯವನ್ನು ಕಂಡುಕೊಳ್ಳಬೇಕಾದರೆ, ಇಂತಹ ಸಮಾರಂಭಗಳ ಜೊತೆಯಲ್ಲಿ ನಿನ್ನೆ ಯಾವ ಆಶ್ವಾಸನೆಗಳನ್ನು ನಮಗೆ ನೀಡಲಾಯಿತೋ ಒಂದು ಕನ್ನಡ ಭಾಷೆಗೆ ಬೇಕಾದಂತಹ ಆಶ್ವಾಸನೆಯನ್ನು ಮಾನ್ಯ ಪ್ರಧಾನ ಮಂತ್ರಿಗಳು ಕೊಟ್ಟರೋ, ಆ ಆಶ್ವಾಸನೆಯ ಜೊತೆಯಲ್ಲಿ ಭವಿಷ್ಯನ್ನು ನಾವು ಕಾಣಬೇಕಾಗಿದೆ. ಹೇಗೆ ಇದೇ ಮೊಬೈಲ್ ಯಂತ್ರವನ್ನು ನೀವು ಬಳಸಿ ಜ್ಞಾನವನ್ನು, ಮಾಹಿತಿಯನ್ನು ಪಡೆದುಕೊಂಡು ಅದನ್ನು ಜ್ಞಾನವಾಗಿ ಪರಿವರ್ತಸಿ ನಿಧಾನವಾಗಿ 'ಯಂತ್ರ ಮಾನವನಿಂದ ಮಂತ್ರ ಮಾನವ'ನಾಗುವತ್ತ ನಾವು ಹೆಜ್ಜೆ ಹಾಕಬೇಕಾಗಿದೆ. ಇದನ್ನು ನೀವು ಸಾಧಿಸಿಕೊಳ್ಳಬೇಕಾದರೆ ಭವಿಷ್ಯದ ಮಕ್ಕಳು ನಿಜವಾದ ನಮ್ಮ ಭವಿಷ್ಯದ ಮನಸ್ಸುಗಳು ಅವುಗಳನ್ನು ಕಟ್ಟಬೇಕಾದರೆ ನಮ್ಮದೇ ಆದಂತಹ ಸಾಮಾಜಿಕ ಜವಾಬ್ದಾರಿ ಇದೆ. ಅದನ್ನು ಸಾಂಸ್ಕೃತಿಕವಾಗಿ ತೆಗೆದುಕೊಳ್ಳಬೇಕಾದರೆ ಈ ರೀತಿಯ ವೇದಿಕೆಗಳಿವೆ. ಇಂತಹ ಅದ್ಭುತ ವೇದಿಕೆ ನಿರ್ಮಾಣ ಮಾಡಿದ ಎಲ್ಲರಿಗೂ ಇಲ್ಲಿ ಹಾಡುವ ಹಾಡುಗಳು, ಮಾಡುವ ನೃತ್ಯಗಳು ಎಲ್ಲವೂ ನೆನಪಿನಲ್ಲಿ ಉಳಿಯುತ್ತಾ ಹೋಗುತ್ತವೆ. ಅವುಗಳನ್ನು ಆಧಾರವಾಗಿ ಇಟ್ಟುಕೊಂಡು ಅವರು ಬದುಕನ್ನು ಕಟ್ಟುತ್ತಾರೆ. ಅಂತಹ ಸಾಂಸ್ಕೃತಿಕ ಬದುಕನ್ನು ಕಟ್ಟುವ ಸಾಮಾಜಿಕ ಜವಾಬ್ದಾರಿಯನ್ನು ದೆಹಲಿ ಕರ್ನಾಟಕ ಸಂಘ 75 ವರ್ಷಗಳಿಂದ ಮಾಡುತ್ತಾ ಬಂದಿದೆ. 1979 ರಲ್ಲಿ ನಾನು ಈ ಕರ್ನಾಟಕ ಸಂಘದ ಒಂದು ಜಾಗದಲ್ಲಿ ನಾಟಕ ಮಾಡಲು ಬಂದಿದ್ದೆ. 1972ರಲ್ಲಿ ರಾಜಧಾನಿ ದೆಹಲಿಯ ಕನ್ನಡ ಶಾಲೆಯಲ್ಲಿಯೂ ಒಂದು ನಾಟಕವನ್ನು ಮಾಡಿದ್ವಿ. 75 ವರ್ಷಗಳಲ್ಲಿ ಮಾಡಿದ ಜವಾಬ್ದಾರಿಯನ್ನು ನೋಡಿದಾಗ ಇನ್ನು 25 ವರ್ಷಗಳಲ್ಲಿ ಇನ್ನೂ ದೊಡ್ಡ ಜವಾಬ್ದಾರಿಯನ್ನು ಸಂಘ ನಿರ್ವಹಿಸಬೇಕಿದೆ. ಭವಿಷ್ಯದ ಕನ್ನಡವನ್ನು ಕಟ್ಟುವ, ಕನ್ನಡದ ಮನಸ್ಸುಗಳನ್ನು ಕಟ್ಟುವ ಜವಾಬ್ದಾರಿ ಅವರದಾಗಿದೆ. ಅದನ್ನು ಮಾಡುವಂತಹ ಶಕ್ತಿಯನ್ನು ಈ ದೆಹಲಿ ಕರ್ನಾಟಕ ಸಂಘ ಇಡೀ ಕರ್ನಾಟಕದಾದ್ಯಂತ, ಪ್ರಪಂಚದಾದ್ಯಂತ ಇರುವ ಕನ್ನಡ ಮನಸ್ಸುಗಳನ್ನ ತನ್ನದಾಗಿಸಿಕೊಂಡು ತನ್ನತನವನ್ನು ಮೆರೆಯುವಂಹ ಹೆಜ್ಜೆ ಹಾಕುತ್ತಿರುವುದಕ್ಕೆ ಇದು ಸಾಕ್ಷಿ. ಇದರ ಜೊತೆಯಲ್ಲಿ ನಾವು ಮುಂದುವರಿಯುತ್ತಿದ್ದೇವೆ ಎಂದು ತಿಳಿಸಿದರು.

ಮುಂದುವರಿದು, ಸಮಗ್ರ ಕನ್ನಡ ಭಾಷಾ ವಿಧೇಯಕದ ಬಗ್ಗೆ ಸತತವಾಗಿ ಎರಡು ವರ್ಷಗಳು ನಾನು ಕೆಲಸ ಮಾಡ್ದೆ. ಅದು ಆಗುತ್ತೇ ಇಲ್ಲವೋ ಎಂಬ ಗೊಂದಲವಿದ್ದಾಗ ಅದನ್ನು ನನ್ನ ಸ್ನೇಹಿತರೆಲ್ಲ ಸೇರಿ ಆಗು ಮಾಡಿಸಿಕೊಟ್ಟಿದ್ದಾರೆ. ಇವತ್ತು ಆ ವಿಧೇಯಕವನ್ನು ಕನ್ನಡ ಜನತೆಯ ಮುಂದಿಟ್ಟಿದ್ದಾರೆ. ಅದರಿಂದಾಗಿ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ, ಕನ್ನಡ ಅಸ್ಮಿತೆ ತನ್ನತನವನ್ನು ಕಾಪಾಡಿಕೊಳ್ಳಲಿ ಅನ್ನುವುದಷ್ಟೇ ಭವಿಷ್ಯಕ್ಕೆ ನಾವು ಕೊಡುತ್ತಾ ಇರುವ ಕೊಡುಗೆ. ಅದರಲ್ಲಿ ಭವಿಷ್ಯದ ಮಕ್ಕಳಿಗೆ, ಅನ್ನ, ಆಹಾರ ಹಾಗೂ ಕೇವಲ ಅನ್ನದ ಭಾಷೆಯಾಗದೇ ಅಸ್ಮಿತೆಯ, ಆತ್ಮದ ಭಾಷೆಯಾಗಿ ಅದು ತನ್ನನ್ನು ತಾನು ಸ್ಥಾಪಿಸಿಕೊಳ್ಳುತ್ತೆ ಎಂದು ಹೇಳಿದರು. ಮಕ್ಕಳಿಗೆ ಹಾಡಿ, ಕುಣಿಯಿರಿ ಎಲ್ಲವನ್ನೂ ಮಾಡಿ ಅದರ ಜೊತೆಯಲ್ಲೇ ನಿಧಾನವಾಗಿ ಇದು ನನ್ನದು, ಇದು ನನ್ನ ಭಾಷೆ ಇದು ನನ್ನತನ ಅನ್ನುವಂತಹ ನಿಮ್ಮತನವನ್ನು ಕಾಪಾಡಿಕೊಳ್ಳಿ ನೀವು ಬಹಳ ಬುದ್ದಿವಂತರಾಗಬೇಡಿ, ನೀವು ಹೃದಯವಂತರಾಗಿ, ಆ ಹೃದಯವಂತಿಕೆಯನ್ನು ನಮ್ಮದಾಗಿಸಿಕೊಳ್ಳಿ ಎಂದು ಕರೆ ನೀಡುತ್ತಾ ಕನ್ನಡಿಗರು ಹೃದಯವಂತರು ಎಂಬುದನ್ನು ಸಾಬೀತು ಮಾಡೋಣ ಸಿರಿಗನ್ನಡಂ ಗೆಲ್ಗೆ ಎಂದು ಹೇಳಿ ತಮ್ಮ ಮಾತುಗಳನ್ನು ಮುಗಿಸಿದರು.



ಸಾಹಿತ್ಯ ಸಂವಾದದ ಅಧ್ಯಕ್ಷತೆ ವಹಿಸಿದ್ದ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ **ಡಾ. ಸಿ. ಸೋಮಶೇಖರ್**ರವರು ದೇಶ

ನನ್ನದು, ನನ್ನದು ನಾಡು ಎನ್ನದ ಮಾನವನೆದೆ ಸುಡುಗಾಡು ದೂರ ದೇಶದಿ ಹೋದ ಸಮಯದಿ ತನ್ನ ನಾಡನ್ನು ನೆನೆ ನೆನೆದು ಎದೆಯುಬ್ಬಿದ ಮಾನವನಿದ್ದರೆ ಲೋಕದಲ್ಲಿ ತಾವಿಲ್ಲದವನಿಗೆ ನಾಕದಲಿ ಎನ್ನುವ ಕವಿವಾಣಿಯನ್ನು ಸ್ಮರಿಸಿಕೊಳ್ಳುತ್ತಾ ತಮ್ಮ ಮಾತುಗಳನ್ನು ಆರಂಭಿಸಿದರು.

ನಮ್ಮ ಸಂಸ್ಕೃತಿಯನ್ನು, ನಮ್ಮ ಭಾಷೆ ಇತಿಹಾಸವನ್ನು ನೋಡಿದಾಗ ಪಾಶ್ಚಾತ್ಯ ಪ್ರಭಾವದಿಂದ ತನ್ನತನವನ್ನು ಉಳಿಸಿಕೊಂಡು ಬಂದಿರುವಂತಹ ಒಂದು ಗಟ್ಟಿ ಸಾಹಿತ್ಯ ಕನ್ನಡ ಸಾಹಿತ್ಯ. ಮಾನವ ಕುಲಂ ವಂದೇ ವೆಲಂ ಎಂದು ಹೇಳಿದ್ದಂತಹದ ಪಂಪನ ಮಾತು, ಇವತ್ತಿಗೂ ಸಹಾ ವರ್ತಮಾನದ ಭಾಷೆ ವರ್ತಮಾನದ ಸಾಹಿತ್ಯ. ಆಚಾರಕ್ಕೆ ಅರಸಾಗಿ ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು ಎನಕಂದ, ಜ್ಯೋತಿಯಾಗು ಜಗಕ್ಕೆಲ್ಲಾ ಎಂದ ಜಾನಪದ ತಾಯಿಯ ಭಾಷೆ, ಸಾಹಿತ್ಯ ಇಂದಿನ ವರ್ತಮಾನದ ಸಾಹಿತ್ಯ. ಇಂದಿನ ಭಾಷೆ ಅದಾಗಬೇಕು, ಕಳಬೇಡ, ಕೊಲಬೇಡ.... ಎಂದು ವಚನ ಹೇಳಿದಂತಹ ಬಸವಣ್ಣನವರ ಆ ಮಾನವ ಸಂವಿಧಾನ, ನೀತಿಯ ಭಾಷೆಯ ಇಂದಿನ ವರ್ತಮಾನದ ಭಾಷೆಯಾಗಬೇಕು, ಸಾಹಿತ್ಯ ಆಗಬೇಕು, ಓದಿ ಬ್ರಾಹ್ಮಣನಾಗು, ಕಾದು ಕ್ಷತ್ರಿಯನಾಗು, ಶೂದ್ರ ವೈಶ್ಯನೇ ಆಗು ಏನಾದರೂ ಆಗು ದುಡಿಯುವಂತಹವನಾಗು, ಮೊದಲು ನೀನು ಮಾನವನಾಗು ಅನ್ನುವಂತಹ ಸಿದ್ದಯ್ಯ ಪುರಾಣಿಕರ ಆ ಮಾತು ಇಂದಿನ ಭಾಷೆಯಾಗಬೇಕು, ಇಂದಿನ ಸಾಹಿತ್ಯವಾಗಬೇಕು. ಅಷ್ಟೇ ಅಲ್ಲ ದೊಡ್ಡ ಸಾಹಿತ್ಯ ಮಾಡಿದಂತಹ ಎಲ್ಲ ಮಹಾನುಭಾವರ ಸಾಹಿತ್ಯ ಸಾರ್ವಕಾಲಿಕ ಸಾಹಿತ್ಯ, ಭೌಗೋಳಿಕ ಮಿತಿಯಿಲ್ಲ, ವರ್ಗದ ಮಿತಿಯಿಲ್ಲ, ವರ್ಣದ ಮಿತಿಯಿಲ್ಲದಂತಹ ಸಾಹಿತ್ಯವನ್ನು ಕನ್ನಡದ ಸಾಹಿತ್ಯದಲ್ಲಿ ನಾವು ಕಾಣುತ್ತೇವೆ. 'ಬಾರಿಸು ಕನ್ನಡ ಡಿಂಡಿಮವ' ಎಂಬ ಶೀರ್ಷಿಕೆಯನ್ನು ಈ ಕಾರ್ಯಕ್ರಮಕ್ಕೆ ಕೊಟ್ಟಿದ್ದೀರಿ. ನಾಲ್ಕಾರು ದಶಕದ ಹಿಂದೆ ಕುವೆಂಪುರವರು ರಚಿಸಿದ ಬಾರಿಸು ಕನ್ನಡ ಡಿಂಡಿಮದ ಸಾಹಿತ್ಯದ ಭಾಷೆ ಇಂದಿಗೂ ವರ್ತಮಾನದ ಭಾಷೆಯಾಗಿದೆ. ಇವತ್ತಿನ ಸಂವಾದದಲ್ಲಿ ಪಾಲ್ಗೊಂಡ ಎಲ್ಲರೂ ನಮ್ಮ ಸಾಹಿತ್ಯದ ಪರಂಪರೆಯನ್ನು ಶ್ಲಾಘಿಸಿದ್ದಾರೆ. ಯುವ ಜನಾಂಗಕ್ಕೆ ಒಂದು ಸಂದೇಶ ಹೋಗಬೇಕೆಂಬ ಒಂದು 'ಕಳಕಳಿ'ಯನ್ನು ವ್ಯಕ್ತಪಡಿಸಿದ್ದಾರೆ. ಗೆಳೆಯ ನಾಗಾಭರಣ ಹೇಳಿದ ಹಾಗೆ ನಾವು ಯಾಂತ್ರಿಕ ಬದುಕನ್ನು ಅವಲಂಬಿಸುತ್ತಾ ಅಕ್ಷರ ಸಂಸ್ಕೃತಿಯನ್ನು ಮರೆಯುತ್ತಾ ಇದ್ದೇವೆ. ಹೀಗಾದರೆ ಸಾಹಿತ್ಯ, ಸಂಸ್ಕೃತಿ ನಾಶ ಆದ ಹಾಗೆ, ಭಾಷೆ ಉಳಿಯಲು ಅಕ್ಷರ ಸಂಸ್ಕೃತಿ ಉಳಿಯಬೇಕು. ಡಾ. ಲತಾರಾಜಶೇಖರ್ ಹೇಳಿದ ಹಾಗೆ ವಿನೋಭಾ ಭಾವೆಯವರು ಕನ್ನಡ ಭಾಷೆಯನ್ನು ಲಿಪಿಗಳ ಭಾಷೆ ಲಿಪಿಗಳ ರಾಣಿ ಎಂದು ವರ್ಣನೆ ಮಾಡಿದ್ದಾರೆ. ಅಂತಹ ಅಮೂಲ್ಯವಾದಂತಹ ನಮ್ಮ ಕನ್ನಡ ಭಾಷೆ, ಸಾಹಿತ್ಯ ಸದಾ ಕಾಲ ನಿತ್ಯ ನೂತನವಾಗಿರುತ್ತದೆ. ನಿತ್ಯ ಚಿರಂತನವಾಗಿರುತ್ತದೆ ಎಂದು ಹೇಳಿದರು.

ಎಂತಹ ಸಾಹಿತ್ಯ ನಮ್ಮದು, ಎಂತಹ ಪರಂಪರೆ ನಮ್ಮದು, ಜಾನಪದಗಳು, ರಾಜ್ಯ ಸಾಮ್ರಾಜ್ಯಗಳು, ಗುರು ಪದಗಳು ಅಳಿಸಿ ಹೋಗಿವೆ, ಕೊಚ್ಚಿ ಹೋಗಿವೆ ಕಾಲ ಪ್ರವಾಹದಲಿ, ಆದರೆ ಮಾನವೀಯತೆ ಉಳಿದಿದೆ ಅನ್ನುವಂತಹ ಮಂಕುತಿಮ್ಮನ ಕಗ್ಗ ನಮ್ಮ ಕನ್ನಡ ಸಾಹಿತ್ಯಕ್ಕೆ ಅನ್ವಯವಾಗುತ್ತದೆ. ಇಂತಹ ಅನೇಕ ಸಭೆ ಸಮಾರಂಭಗಳಿಂದ ಯುವ ಜನಾಂಗಕ್ಕೆ ನಮ್ಮ ಕನ್ನಡದ ಅಸ್ಮಿತೆಯನ್ನು, ಕನ್ನಡದ ಜಾಗೃತಿಯನ್ನುಂಟು ಮಾಡುವಂತಹದ್ದು ನಮ್ಮ ಕರ್ತವ್ಯ. ಲತಾರಾಜಶೇಖರ್‌ವರು ಸಾವಿರಾರು ಕನ್ನಡ ಶಾಲೆಗಳು ಮುಚ್ಚುತ್ತಾ ಇವೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಆ ಸಂಖ್ಯೆಯಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತಿವೆ ಎನ್ನುವುದನ್ನು ನಾನು ಒಪ್ಪಲಾರೆ. ಕೇರಳ ಮಹಾರಾಷ್ಟ್ರದ ಕೆಲವು ಗಡಿ ಭಾಗಗಳಲ್ಲಿ ಈ ಆತಂಕ ಇರುವುದು ನಿಜ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಗಡಿಭಾಗದ ಕನ್ನಡ ಶಾಲೆಗಳಿಗೆ ವಿಶೇಷವಾದ ಒತ್ತನ್ನು ಕೊಟ್ಟು ಅಲ್ಲಿ ಕನ್ನಡದ ಅಸ್ಮಿತೆಯನ್ನು ಉಂಟು ಮಾಡುತ್ತಿರುವ ದಿಸೆಯಲ್ಲಿ ಕರ್ನಾಟಕದ ಸರ್ಕಾರ ಶ್ರಮಿಸ್ತಾ ಇದೆ. ಆದುದರಿಂದ ಅಂತಹ ಆತಂಕಗಳನ್ನು ನಮ್ಮ ಮನಸ್ಸಿನಿಂದ ದೂರ ಮಾಡೋಣ ಎಂದರು. ಸನ್ಮಾನ್ಯ ಪ್ರಧಾನಿಯವರು ಹೇಳಿದಂತೆಯೇ ರಾಷ್ಟ್ರದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಜೊತೆ ಜೊತೆಯಲ್ಲಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ನಡೆಯುತ್ತಿರುವುದು ಒಂದು ಕಾಕತಾಳೀಯ. ಈ ಸಮ್ಮೇಳನದ ಮೂಲಕ ಇಡೀ ವಿಶ್ವಕ್ಕೆ ಒಂದು ಸಂದೇಶ ಹೋಗಬೇಕು. ಅದೇಂದರೆ ನಮ್ಮ ಕನ್ನಡ ಭಾಷೆ ಒಂದು ಮಾನವೀಯ ಭಾಷೆ. ಅದರ ಜೀವದ್ರವ್ಯವೇ ಮನುಷ್ಯತ್ವ, ಮಾನವೀಯತೆ. ಇವನಾರವ ಇವನಾರವ ಎಂಬ ಬಸವಣ್ಣ ನವರ ವಚನವನ್ನು ಉಲ್ಲೇಖಿಸುತ್ತಾ, ಕುವೆಂಪುವರ ವಿಶ್ವಮಾನದ ಸಂದೇಶವನ್ನು ನೆನಪಿಸಿದರು.

ಭವ್ಯವಾದ ಸಂಸ್ಕೃತಿ ನಮ್ಮದು, ಭಾಷೆ ನಮ್ಮದು, ಪ್ರಾಚೀನವಾದಂತಹ ಸಾಹಿತ್ಯವೂ ವರ್ತಮಾನಕ್ಕೆ ಅನ್ವಯವಾಗುತ್ತದೆ. ಅಂದಿನ ಸಾಹಿತಿಗಳು ದಾರ್ಶನಿಕರಾಗಿದ್ದರು. ಜೀವನ ದರ್ಶನ ನೀಡಿದರು. ಸತ್ಯಾನ್ವೇಷಣೆ ಮಾಡಿದರು, ಭದ್ರ ಬುನಾದಿಯನ್ನು ಈ ಕನ್ನಡ ನಾಡಿಗೆ, ಕನ್ನಡ ಭಾಷೆಗೆ ಕೊಟ್ಟಿದ್ದಾರೆ. ಅಂತಹ ಎಲ್ಲ ಮಹಾನುಭಾವರನ್ನು ಸ್ಮರಿಸಿಕೊಳ್ಳುತ್ತಾ ವರ್ತಮಾನದ ನಮ್ಮ ಭಾಷೆಯನ್ನು ಕಟ್ಟೋಣ, ಕನ್ನಡದ ಭಾಷೆ ಅದು ಮನೆಯಂಗಳದ ಭಾಷೆಯಾಗಬೇಕು, ಹೃದಯದ ಭಾಷೆಯಾಗಬೇಕು. ನಮ್ಮ ಅಂತಃಕರಣದ ಭಾಷೆಯಾಗಬೇಕು ಎನ್ನುವ ಮಾತುಗಳನ್ನು ಹೇಳಿದರು.

ಸಂಘದ ಅಧ್ಯಕ್ಷ ಶ್ರೀ ನಾಗರಾಜರ ಪ್ರಯತ್ನ ನೋಡಿದಾಗ ಜಿ.ಎಸ್. ರುದ್ರಪ್ಪನವರ ಮಾತುಗಳು ನೆನಪಾಗುತ್ತದೆ. ಇಂತಹ ಪ್ರಯತ್ನಗಳು ನಾವು ಪ್ರಾಮಾಣಿಕವಾಗಿ ಮಾಡಿದಾಗ ಅವು ತಕ್ಕ ಫಲ ಕೊಡುತ್ತವೆ. ಕವಿ ಹೇಳುತ್ತಾನೆ 'ಆದರೂ ಹಚ್ಚುತ್ತೇನೆ ಹಣತೆಯನ್ನ ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ, ಆ ದೀಪ ಇರುವಷ್ಟು ಹೊತ್ತು ನನ್ನ ಮುಖ ನೀನು, ನಿನ್ನ ಮುಖ ನಾನು ನೋಡಬಹುದೆಂಬ ಒಂದೇ ಒಂದು ಆಸೆಯಿಂದ, ದೀಪ ಆರಿದ ಮೇಲೆ ನೀನ್ಯಾರೋ, ನಾನ್ಯಾರೋ, ಈ ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ, ಒಲವೆತ್ತಿ ತೋರುವ ದೀಪ, ನಡುನಾಡೂರಿರಲಿ, ಗಡಿನಾಡೇ ಇರಲಿ ಕನ್ನಡದ ಕಳೆಯ ಕೆಚ್ಚೇವು' ಎನ್ನುವ ಕಂಠಿಯವರ ಮಾತನ್ನು ಸ್ಮರಿಸಿಕೊಂಡರು. ಕಲ್ಯಾಣ ಕರ್ನಾಟಕ ಸೇರಿದಂತೆ ಹಲವಾರು ಭಾಗಗಳಿಂದ ಸಾವಿರಾರು ಕಲಾವಿದರು ಬಂದಿದ್ದಾರೆ. ಇಷ್ಟೊಂದು ಜನರನ್ನು ಒಂದೆಡೆ ಸೇರಿಸುವುದು ಸಾಹಸದ ಕೆಲಸ, ಇದು ವರ್ತಮಾನದ ಕನ್ನಡ ಸಾಹಿತ್ಯ, ಭಾಷೆ, ವರ್ತಮಾನದ ಕನ್ನಡದ ಪ್ರಯತ್ನ ಎಂದು ದೆಹಲಿ ಕರ್ನಾಟಕ ಸಂಘವನ್ನು ಶ್ಲಾಘಿಸಿದರು.

ಎಲ್ಲಿ ಕಲಾವಿದರನ್ನು ಹಾಗೂ ಸಾಹಿತಿಗಳನ್ನು ಗೌರವಿಸುತ್ತೇವೆಯೋ ಅಲ್ಲಿ ಸಾಹಿತ್ಯ ಉಳಿಯುತ್ತೆ. ನಮ್ಮ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದಿಂದ ಸುಮಾರು ಆರುನೂರು ಗಡಿನಾಡ ಸಂಸ್ಥೆಗಳಿಗೆ ಸುಮಾರು ಏಳು ಕೋಟಿ ರೂಪಾಯಿಗಳ ಅನುದಾನವನ್ನು ಕಲಾವಿದರಿಗೆ ಕೊಟ್ಟಿದ್ದೇವೆ. ಕೊರೊನಾ ಸಮಯದಲ್ಲಿ ನಮ್ಮ ಕಲಾವಿದರು ಅನುಭವಿಸಿದ ಯಾತನೆ ಅದು ಅನನ್ಯ, ಬಹಳ ದುರಂತ, ಇಂತಹ ತುಮುಲಗಳನ್ನು ಕಂಡಾಗ ತುಂಬಾ ದುಃಖವಾಗುತ್ತದೆ. ಆ ಹಿನ್ನೆಲೆಯಲ್ಲಿ ಸಾವಿರಾರು ಕಲಾವಿದರನ್ನು ಕರೆಸಿ, ಅವರ ಯೋಗಕ್ಷೇಮವನ್ನು ಉತ್ತಮವಾಗಿ ನೋಡಿಕೊಂಡ ಶ್ರೀ ನಾಗರಾಜ ಮತ್ತು ಅವರ ತಂಡದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಭಾಷೆ ಉಳಿದರೆ ಮನುಷ್ಯತ್ವ ಉಳಿಯುತ್ತದೆ. ಮನುಷ್ಯತ್ವ ಉಳಿದರೆ ಮಾನವೀಯತೆ ಉಳಿಯುತ್ತದೆ. ಆಗ ನಾವೆಲ್ಲ ಉಳಿಯುತ್ತೇವೆ. ಆ ಮಾನವೀಯತೆಯ ಭದ್ರ ಜೀವದ್ರವ್ಯವೇ ಕನ್ನಡ ಭಾಷೆ, ಕನ್ನಡ ಸಾಹಿತ್ಯ. ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎಂದು ಹೇಳಿ ತಮ್ಮ ಅಧ್ಯಕ್ಷೀಯ ಭಾಷಣಕ್ಕೆ ವಿರಾಮ ಹೇಳಿದರು.

ಕೊನೆಯಲ್ಲಿ, ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಹಿರಿಯ ಸಾಹಿತಿಗಳು, ಕವಿಗಳು, ಕವಯಿತ್ರಿ, ಲೇಖಕರು, ಬರಹಗಾರರು ಮತ್ತು ಗಣ್ಯರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಧ್ಯಕ್ಷರು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಗೌರವಪೂರ್ವಕವಾಗಿ ಸನ್ಮಾನಿಸಿದರು.



ನಿರೂಪಕಿ, ಶ್ರೀಮತಿ ಸವಿಪ್ರಕಾಶ್‌ರವರು ಕಾರ್ಯಕ್ರಮವನ್ನು ಬಹಳ ಸುಂದರವಾಗಿ ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್‌ರವರು ಮಾತನಾಡಿ ಸಂವಾದದಲ್ಲಿ ಪಾಲ್ಗೊಂಡ ಎಲ್ಲ ಗಣ್ಯರು ಕರ್ನಾಟಕದ, ಕನ್ನಡ ಭಾಷೆ ಸಾಹಿತ್ಯದ ಅನರ್ಘ್ಯ ರತ್ನಗಳು. ಅವರೆಲ್ಲರನ್ನು ವೇದಿಕೆಯಲ್ಲಿ ಒಟ್ಟಿಗೆ ನೋಡುವ, ಅವರ ಮಾತುಗಳನ್ನು ಕೇಳುವ ಸದವಕಾಶ ಸಿಕ್ಕಿದ್ದು ನಮ್ಮೆಲ್ಲರ ಸೌಭಾಗ್ಯ.ಅವರನ್ನು ಆಹ್ವಾನಿಸಿ, ಸನ್ಮಾನಿಸುತ್ತಿರುವುದು ನಮ್ಮನ್ನು ನಾವು ಗೌರವಿಸಿಕೊಂಡಂತಾಗಿದೆ, ಅವರೆಲ್ಲರಿಗೂ ಸಂಘದ ಪರವಾಗಿ ಕೃತಜ್ಞತೆಗಳು ಎಂದು ಹೇಳಿ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ, ಸಭಾಗೃಹದಲ್ಲಿ ನೆರೆದಿದ್ದ ಎಲ್ಲ ಕನ್ನಡಿಗರೂ ವಂದನೆಗಳನ್ನು ಸಲ್ಲಿಸಿದರು. ಇದರೊಂದಿಗೆ ಸಂವಾದ ಕಾರ್ಯಕ್ರಮ ಮುಕ್ತಾಯಗೊಂಡಿತು.

***ಅಭಿಮತ ವರದಿ***

# ಕನ್ನಡ ಚಿತ್ರರಂಗದ ಸುಪ್ರಸಿದ್ಧ ಹಿನ್ನೆಲೆ ಗಾಯಕ ಶ್ರೀ ವಿಜಯ ಪ್ರಕಾಶ್ ಮತ್ತು ಸಂಗಡಿಗರಿಂದ ದೆಹಲಿ ಕನ್ನಡಿಗರ ಮನಸೂರೆಗೊಂಡ ಸಂಗೀತ ರಸಸಂಜೆ















ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
Mar -2023, Vol. No.33, Issue No. 6, Price Rs.1/-
RNI Regn. No. 53405/91, DL-SW-01/4016/22-24
Date of Publication : Mar 8th / 9th, Posting Date : 10th / 11th, Total Pages-24, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

## 2023 ರ ಫೆ. 26 ರಂದು ತಾಲ್ಕಟೋರ ಒಳಾಂಗಣ ಸಭಾಗೃಹದಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಅಭಿನಂದನಾ ಕಾರ್ಯಕ್ರಮದ - ಆಯ್ದ ಛಾಯಾಚಿತ್ರಗಳು



ಶ್ರೀ ಸರವು ಕೃಷ್ಣ ಭಟ್



ಶ್ರೀ ಸಿ.ವಿ. ಗೋಪಿನಾಥ್




ಶ್ರೀ ಎಸ್.ಜಿ. ಹೆಗಡೆ



ಡಾ. ಅಹಲ್ಯಾಚಿಂತಾಮಣಿ



ಶ್ರೀ ಬಸರಾಜ್ ಕಲ್ಲೂರು



ಶ್ರೀ ಎನ್.ಎ. ಮಾಧವ



ಶ್ರೀ ಚೆನ್ನು ಎಸ್. ಮಠದ



ಡಾ. ಬಿ.ಟಿ. ಚಿದಾನಂದ ಮೂರ್ತಿ



ಶ್ರೀ ಇ.ಸಿ. ವಿದ್ಯಾಸಾಗರ್



ಶ್ರೀ ಲಕ್ಷ್ಮಣ್ ಮಲ್ಯ



ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾದ ಶ್ರೀ ಜಯರಾಮ್ ರಾಯ್‌ಪುರ, ಐ.ಆರ್.ಎಸ್. ಅವರನ್ನು ಅಭಿನಂದಿಸುತ್ತಿರುವುದು



ಗ್ಲೋಬಲ್ ಇವೆಂಟ್ಸ್‌ನ ಮುಖ್ಯಸ್ಥರಾದ ಶ್ರೀ ಕನ್ನಡವೇ ಸತ್ಯ ರಂಗಣ್ಣ ಅವರನ್ನು ಅಭಿನಂದಿಸುತ್ತಿರುವುದು